

# ಅಖಿಲ ಭಾರತ ಪತ್ರಿಕೆ

## ಜುಲೈ 2026

# ಜನ್ಮದಿನಗಳು

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

**ಅಖಿಲ ಭಾರತ ಪತ್ರಿಕೆ**
**ಜುಲೈ 2026**

ಸಂಪುಟ: 36 ಸಂಚಿಕೆ: 07

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindocomplex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಜನ್ಮದಿನಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಜನ್ಮದಿನಗಳ ಮಹತ್ವ** 4
ಅನು: ನಾಗಜ್ಯೋತಿ ಮಾನ್ವಿ

**ಪ್ರತಿಯೊಂದು ವಿಷಯವೂ ನಾದದ ಒಂದು ಸ್ವರೂಪವೇ** 6
ಅನು: ಶ್ರೀ ಪುಟ್ಟು ಕುಲಕರ್ಣಿ

**ಶಿಷ್ಯರಿಗಾಗಿ ಶ್ರೀ ಅರವಿಂದರ ಹುಟ್ಟುಹಬ್ಬದ ಸಂದೇಶಗಳು** 14
ಅನು: ಡಾ॥ ಮಹಾದೇವ ಸಕ್ರಿ

**ಸ್ಮರಣೆಗಳು ಮತ್ತು ಉಪಾಖ್ಯಾನಗಳು** 28
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ನವ ಜನ್ಮ** 38
**ಎರಡು ಕಮಲಗಳು** 42
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 45
ಅನು: ಜಾನ್ವಿ

**ವಾರ್ತಾಪತ್ರ** 56

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯು ತನ್ನ ಜ್ಞಾನ ಮತ್ತು ಕೃಪೆಯ ಮೂಲಕ ಮತ್ತು ವರದ ಹಸ್ತಗಳ ಮೂಲಕ ಸ್ಪರ್ಶ ಮಾಡುವದರೊಂದಿಗೆ ಅತಿ ಸಾಮಾನ್ಯವೆಂದು ಕಾಣುವ ಸಂಗತಿಗಳನ್ನೂ ರೂಪಾಂತರಣದ ಪ್ರಕ್ರಿಯೆಗೆ ಒಳಪಡಿಸಿ ಔನ್ನತ್ಯಗೊಳಿಸುತ್ತಾಳೆ. ಅಂತಹ ಘಟನೆಗಳಲ್ಲಿ 'ಜನ್ಮದಿನವೂ' ಒಂದಾಗಿದೆ. ಶ್ರೀ ಅರವಿಂದರು ಮತ್ತು ಶ್ರೀಮಾತೆ ಈ ಜನ್ಮದಿನವನ್ನು ಒಂದು ವಿಶೇಷ ಮಹತ್ವವಾಗಿರುವ ಆಯಾಮಗಳೊಂದಿಗೆ ಸಮೀಕರಿಸಿ, ಆ ಜನ್ಮವು ಮಹತ್ತರವಾಗಿರುವ ಜನ್ಮವೇ ಆಗಿದೆ ಎನ್ನುವದನ್ನು ಮತ್ತು ಈ ಆತ್ಮವು ರೂಪು ಧರಿಸಿಕೊಂಡು, ಈ ಭೂಮಿಯ ನಿವಾಸಿಯಾಗುವ ಅಪರೂಪದ ವಿಷಯಗಳನ್ನು ಅಭಿವ್ಯಕ್ತಿಸುತ್ತಾರೆ. ನಮಗೆ ಆತ್ಮೀಯರಾಗಿರುವವರು ನಮ್ಮ ಸಮೀಪ ಇರುವಾಗ ಅದು ಆಹ್ಲಾದಮಯವಾಗಿರುವ ಕ್ಷಣವೇ ಆಗಿರುತ್ತದೆ. ಈ ದೇಹಧಾರಿಯಾಗಿ ಈ ತೋಷವನ್ನು ಅನುಭವಿಸುವ 'ಜನ್ಮವು', ನಮ್ಮ ದೈವೀ ಪಾಲಕರು ನಮಗೆ ಒದಗಿಸಿಕೊಟ್ಟಿರುವ ಅವಕಾಶವಾಗಿದೆ. ಇದು ನಮ್ಮ ಅಸ್ತಿತ್ವವನ್ನು ನಮಗೇ ಪರಿಚಯಿಸಲು ದತ್ತವಾಗಿರುವ ಮತ್ತು ಅದನ್ನು ಸದಾ ಸ್ಮರಣೆಯಲ್ಲಿ ಇರಿಸಿಕೊಳ್ಳಬೇಕಾದ ಸಂಗತಿಯಾಗಿರುತ್ತದೆ.

ಈ ಸಂಚಿಕೆಯು 'ಜನ್ಮದಿನದ ಮಹತ್ವ'ವನ್ನು ಮತ್ತು ಇಂತಹ ಅತ್ಯಪರೂಪದ ಅವಕಾಶದ ಕೃಪೆಯು ನಮ್ಮಲ್ಲಿ ನಾವೇ ಜಾಗ್ರತರಾಗಿ ನಮ್ಮ ಆಂತರ್ಯದಲ್ಲಿ ಅದನ್ನು ಅರಿಯುವ ಮತ್ತು ಊರ್ಧ್ವದೆಡೆಗೆ ಆರೋಹಣೆಗೈಯುವ ಅಭೀಪ್ಸೆಯಲ್ಲಿ ಭವಿಷ್ಯವನ್ನು ನಿರ್ಮಿಸುವ ಕುರಿತು ವಿವೇಚಿಸುತ್ತಿದೆ. (ಎಐಎಮ್)



**– ಅನು: ನಾಗಜ್ಯೋತಿ ಮಾನ್ವಿ**

***ಮಮತಾಮಯಿ ಮಾತೆಯವರೆ, ನಮ್ಮ ಜನ್ಮ ದಿನವನ್ನು ಕೇವಲ ಸ್ಮರಣಾರ್ಥಕ್ಕಾಗಿ ಆಚರಿಸುವದರ ಹೊರತಾಗಿ ಬೇರೆ ಅರ್ಥವನ್ನು ಹೊಂದಿದೆಯೇ? ಈ ಅವಕಾಶವನ್ನು ನಾವು ಹೇಗೆ ಸದುಪಯೋಗಪಡಿಸಿಕೊಳ್ಳಬಹುದು?***

– ವಿಶ್ವಾತ್ಮಕ ಶಕ್ತಿಗಳು ತಮ್ಮದೇ ಆದ ಲಯದಲ್ಲಿ ಕಾರ್ಯಗೈಯುವದರಿಂದ, ಪ್ರತಿ ವರ್ಷದಲ್ಲಿ ಒಬ್ಬ ವ್ಯಕ್ತಿ ಜನ್ಮದಿನದಂದು ಆತನಿಗೆ ವಿಶೇಷವಾಗಿರುವ ಸಾಮರ್ಥ್ಯವೊಂದನ್ನು ಸ್ವೀಕರಿಸುವ ಅವಕಾಶವಿರುತ್ತದೆ.

ತನ್ನ ಸಮಗ್ರ ಬೆಳವಣಿಗೆಯ ಮಾರ್ಗದಲ್ಲಿ ಒಳ್ಳೆಯ ಸಂಕಲ್ಪ ಮತ್ತು ಹೊಸ ಪ್ರಗತಿಗೈಯಲು ಈ ಅವಕಾಶವನ್ನು ಸ್ವೀಕರಿಸಿ ಅದರ ಸದುಪಯೋಗವನ್ನು ಪಡೆದುಕೊಳ್ಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/308 – ಶ್ರೀಮಾತೆ**

ಜನ್ಮದಿನದ ಶುಭಾಶಯಗಳು;

# ಜನ್ಮದಿನಗಳ ಮಹತ್ವ

*(ಶ್ರೀಮಾತೆಯವರೊಂದಿಗೆ ಮೋನಾ ಸರ್ಕಾರರವರ ಸಂವಾದಗಳು. ಇದು ಮೂಲದಲ್ಲಿ ಫ್ರೆಂಚ್ ಭಾಷೆಯಲ್ಲಿ ಇದ್ದು, ಇದನ್ನು ಶ್ರೀಮಾತೆಯವರ ಸಮಕ್ಷಮ ಓದಲಾಗಿದೆ.)*

ನಾಳೆ ನಿನ್ನ ಜನ್ಮದಿನವೇ?

*ಹೌದು, ಶ್ರೀಮಾತೆಯವರೆ.*

ಎಷ್ಟು ವರ್ಷದವರಾಗುವಿರಿ?

*26 ವರ್ಷಗಳು. ಶ್ರೀಮಾತೆ.*

ಹಾಗಾದರೆ ನಾಳೆಯ ದಿನ ನಿನ್ನನ್ನು ನೋಡುತ್ತೇನೆ ಮತ್ತು ಏನೋ ಒಂದು ವಿಶೇಷವಾದುದನ್ನು ಕೊಡುತ್ತೇನೆ. ವಿಶೇಷವಾದುದೆಂದರೆ ಭೌತಿಕವಾದುದಲ್ಲ– ನಾನು ಶುಭಾಶಯ ಪತ್ರ ಮತ್ತು ಇನ್ನೆಲ್ಲವನ್ನೂ ಕೊಡುತ್ತೇನೆ– ಆದರೆ ಅದು ಬೇರೆಯದೇ... ಆಗಿದೆ. ನಾಳೆಯ ದಿನ ನೀನು ನೋಡುವೆ. ಈಗ ಮನೆಗೆ ಹೋಗು. ಶಾಂತವಾಗಿ ನಿನ್ನನ್ನು ನಾಳೆಗಾಗಿ ಸಿದ್ಧಪಡಿಸಿಕೊ. ಆಗ ನೀನು ಅದನ್ನು ಸ್ವೀಕರಿಸಲು ಸಿದ್ಧನಾಗಬಹುದು.

*ಆಯಿತು ಶ್ರೀಮಾತೆಯವರೆ.*

ಓ ಮಗುವೇ, ನಿನಗೆ ಜನ್ಮದಿನದ ಮಹತ್ವ ಏನೆಂದು ಗೊತ್ತಿದೆಯೇ? ಅಂದರೆ ಜನ್ಮದಿನದಂದು ನಾವೇನು ಬಯಸುತ್ತೇವೆ ಎಂದು ತಿಳಿದಿದೆಯಾ?

*ಆ ರೀತಿಯಲ್ಲಿ, ಅದರ ಅರ್ಥವೇನೆಂದು ನನಗೆ ತಿಳಿದಿದೆ. ಆದರೆ ನೀವು ನನಗೆ ಹೇಳಲು ಬಯಸುವ ವಿಶೇಷ ಮಹತ್ವ ತಿಳಿದಿಲ್ಲ ತಾಯಿ,*

ಹೌದು, ಹೌದು, ಒಬ್ಬರ ಜೀವನದಲ್ಲಿ ನಿಜವಾಗಿಯೂ ಜನ್ಮದಿನವದು ವಿಶೇಷವಾದ ದಿನವೇ ಆಗಿದೆ. 'ಪರಾತ್ಪರ'ನು ನಮ್ಮಲ್ಲಿ ಅವತರಣವಾಗುವ ವರ್ಷದಲ್ಲಿ ಒಮ್ಮೆ ಬರುವ ದಿನಗಳಲ್ಲಿ ಇದೂ ಒಂದಾಗಿದೆ. ಅಥವಾ, ನಾವು 'ಅನಂತ'ನೊಂದಿಗೆ ಮುಖಾಮುಖಿಯಾಗುತ್ತೇವೆ – ಶಾಶ್ವತನೊಂದಿಗೆ ನಮ್ಮ ಆತ್ಮವು ಸಂಪರ್ಕಕ್ಕೆ

ಬರುವ ಅಪರೂಪದ ದಿನಗಳಲ್ಲಿ ಇದೊಂದು ದಿನವೂ ಆಗಿದೆ, ಜೊತೆಗೆ ನಾವು ಸ್ವಲ್ಪವೇ ಪ್ರಜ್ಞಾಪೂರ್ವಕವಾಗಿದ್ದರೂ ಸಹ ನಮ್ಮೊಳಗಿರುವ 'ಆತನ ಸಾನಿಧ್ಯ'ವನ್ನು ನಾವು ಅನುಭವಿಸಬಹುದು. ಈ ದಿನ ನಾವು ಸ್ವಲ್ಪವೇ ಪ್ರಯತ್ನಿಸಿದರೂ, ಬಹು ಜನ್ಮದ ಕಾರ್ಯವನ್ನು ಮಿಂಚಿನ ವೇಗದಲ್ಲಿ ಸಾಧಿಸಬಹುದಾಗಿದೆ. ಹಾಗಾಗಿ ನಾನು ಜನ್ಮದಿನಕ್ಕೆ ಬಹಳ ಮಹತ್ವ ನೀಡುತ್ತೇನೆ. ಏಕೆಂದರರೆ ಆ ದಿನ ನೀವು ನಿಜವಾಗಿಯೂ ಏನನ್ನು ಪಡೆಯುತ್ತೀರೋ, ಅದನ್ನು ಬೇರೆ ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಇದಕ್ಕಾಗಿಯೇ ನಾನು ಸಹ ನಿಮ್ಮ ಪ್ರಜ್ಞೆಯನ್ನು ಮೇಲಕ್ಕೆತ್ತಲು ಕೆಲಸ ಮಾಡುತ್ತೇನೆ. ಇದರಿಂದ ನೀವು ಶಾಶ್ವತನನ್ನು ನೇರವಾಗಿ ಕಾಣಬಹುದಾಗಿದೆ. ನನ್ನ ಮುದ್ದಿನ ಮಗುವೆ, ಇದು ಅತ್ಯಂತ ವಿಶೇಷವಾಗಿರುವ ದಿನವಾಗಿದೆ. ಇದು ನಿರ್ಣಾಯಕವಾಗಿರುವ ದಿನವೂ ಆಗಿದೆ. ಒಬ್ಬನು ನಿಜವಾಗಿಯೂ ಅಪಾರವಾದ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಬಹುದಾದ ದಿನವಿದು, ನಿರ್ಣಾಯಕದ ದಿನವೂ ಹೌದು. ಪರಮ ಚೇತನದೊದಿಗೆ ಒಂದಾಗಬಹುದಾದ ದಿನವಿದಾಗಿದೆ. ಏಕೆಂದರೆ ಈ ದಿನ ಭಗವಂತನು ನಮ್ಮನ್ನು ಸಾಧ್ಯವಾದಷ್ಟೂ ಉನ್ನತ ಸ್ಥಿತಿಗೆ ಏರಿಸುತ್ತಾನೆ. ಹೀಗಾಗಿ ನಮ್ಮ ಆತ್ಮವು ಈ ಶಾಶ್ವತ ಜ್ವಾಲೆಯ ಒಂದು ಅಂಶವಾಗಿರುವದರಿಂದ, ಅದರೊಂದಿಗೆ ಒಂದಾಗಬಹುದಾದ ದಿನವಿದು. ಅದರ ಮೂಲದೊಂದಿಗೆ ಸಂವಹನ ಹೊಂದಬಹುದು. ಈ ದಿನವು ಜೀವನದಲ್ಲಿ ಒಂದು ಅಪರೂಪದ ಅವಕಾಶದ ದಿನವಾಗಿದೆ. ಈ ದಿನ ನಾವು ಬಹುತೇಕವಾಗಿ ಮುಕ್ತ ಮನಸ್ಸಿನವರಾಗಿ ಸ್ವೀಕಾರಕ್ಕೆ ಅರ್ಹರಾಗಿರುವದರಿಂದ ನಮಗೆ ನೀಡಲ್ಪಟುವ ಎಲ್ಲವನ್ನೂ ಸುಲಭವಾಗಿ ಗ್ರಹಿಸಿಕೊಳ್ಳಬಹುದು. ನಾನು ನಿಮಗಾಗಿ ಬಹಳಷ್ಟು ಒದಗಿಸಬಲ್ಲೆ. ಅದಕ್ಕಾಗಿಯೇ ಈ ದಿನವು ಮಹತ್ವದ್ದಾಗಿದೆ.

ಇದು ಭಗವಂತನೇ ಸ್ವತಃ ನಮಗಾಗಿ ತನ್ನ ದ್ವಾರಗಳನ್ನು ವಿಶಾಲವಾಗಿ ತೆರೆಯುವ ದಿನಗಳಲ್ಲಿ ಒಂದಾಗಿದೆ. ನಮ್ಮಲ್ಲಿರುವ ಅಭೀಪ್ಸೆಯ ಜ್ವಾಲೆಯನ್ನು ಮತ್ತುಷ್ಟು ಪ್ರಜ್ವಲಿಸಲು ನಮ್ಮನ್ನು ಆಹ್ವಾನಿಸುತ್ತಿರುವಂತೆ ತೋರುತ್ತದೆ. ಇದು ಆತನು ನಮಗೆ ನೀಡಿರುವ ಅಪರೂಪದ ದಿನಗಳಲ್ಲಿ ಒಂದಾಗಿದೆ. ನಮ್ಮ ಸ್ವಂತ ಪ್ರಯತ್ನದಿಂದಲೂ ನಾವು ಈ ಸ್ಥಿತಿಯನ್ನು ತಲುಪಬಹುದು. ಆದರೆ ಅದು ಸುದೀರ್ಘ ಅವಧಿಯ, ಕಠಿಣವಾದ ಮತ್ತು ಸುಲಭವಲ್ಲದ ಮಾರ್ಗವಾಗಿರುತ್ತದೆ.

ಆದರೆ ಇದು–ಜೀವನದಲ್ಲಿ ಒಂದು ಅಪೂರ್ವ ಅವಕಾಶ–ದೈವಾನುಗ್ರಹವಾಗಿರುವ ದಿನವಾಗಿದೆ.

**18–1–60**

*(ಶ್ರೀಮಾತೆಯವರ ನಂತರದ ದಿನಾಂಕದ ಟಿಪ್ಪಣಿ)*

ಇದೊಂದು ವರ್ಷದ ಈ ನಿರ್ದಿಷ್ಟ ದಿನದಲ್ಲಿ ನಮಗೆ ಅರಿವಿಲ್ಲದೇ ನಿಯಮಿತವಾಗಿ ಸಂಭವಿಸುವ ಗುಹ್ಯ ವಿದ್ಯಮಾನವಾಗಿದೆ. ಆತ್ಮವು ತನ್ನನ್ನು ಪುನಃಶ್ಚೇತನಗೊಳಿಸಿಕೊಳ್ಳಲು ಮತ್ತು ತನ್ನ ಶಕ್ತಿ–ಬೆಳಕು ಮತ್ತು ಆನಂದವನ್ನು ಸ್ವೀಕರಿಸಲು, ದೇಹವನ್ನು ಬಿಟ್ಟು ಮೇಲಕ್ಕೆ ಮತ್ತೂ ಮೇಲಕ್ಕೆ ಸಾಗುತ್ತಾ ತನ್ನ ಮೂಲದೊಂದಿಗೆ ಲೀನವಾಗುತ್ತ, ಅಲ್ಲಿಂದ ಮತ್ತೂ ಉತ್ತೇಜಿತಗೊಂಡು ಕೆಳಗೆ ಮರಳುತ್ತದೆ. ಹೀಗೆ ವರ್ಷದಿಂದ ವರ್ಷಕ್ಕೆ ಮತ್ತೆ ಮತ್ತೆ ಈ ಪ್ರಕ್ರಿಯೆಯು ಅನವರತವಾಗಿ ಮುಂದುವರೆಯುತ್ತದೆ.

## ಪ್ರತಿಯೊಂದು ವಿಷಯವೂ ನಾದದ ಒಂದು ಸ್ವರೂಪವೇ

**– ಅನು: ಪುಟ್ಟು ಕುಲಕರ್ಣಿ**

**ಕಾಲದ ಉಪಕರಣಾತ್ಮಕ ಸ್ಥಿತಿ**

*ಓ ಮಮತಾಮಯಿ ಮಾತೆಯೇ, "ಈ ಕಾಲವು ಉಪಕರಣಾತ್ಮಕವಾಗುವ ಅವಧಿ ಆಗಮಿಸುತ್ತದೆ, ಅದನ್ನೇ 'ಅವಧಿ' ಅಥವಾ 'ಸಮಯ'ವಾಗಿದೆ; ಪ್ರತಿಯೊಂದು ವಸ್ತುವಿಗೂ ಒಂದು ನಿಗದಿತವಾಗಿರುವ ಕ್ರಿಯೆ ಹಾಗು ದೈವೀ ಘಳಿಗೆಯನ್ನು ಅನುಭವಿಸುವ ಹಂತದ ಚಕ್ರೀಯ ಸ್ಥಿತಿ ಇರುತ್ತದೆ.." ಹಾಗಾದರೆ ಈ ರೀತಿಯ ದೈವಿಕ ಸಂಚಲನದ ಅವಧಿ ಎಂದರೆ ಏನು?*

ಪ್ರತಿಯೊಂದು ವಸ್ತುವಿಗೂ ವಿಭಿನ್ನವಾದ ಸ್ವರೂಪದಲ್ಲಿ ಇದು ಇರುತ್ತದೆ.

ಪ್ರತಿಯೊಂದು ಚಟುವಟಿಕೆಯ ಹಿಂದೆ, ಪ್ರತಿಯೊಂದು ಸಾಕ್ಷಾತ್ಕಾರದ ಹಿಂದೆ, ಚಲನೆಯ ಪ್ರತಿ ಹಂತದಲ್ಲೂ, ಅದಕ್ಕೇ ನಿಗದಿತವಾಗಿರುವ ಸಮಯವು ಈಗಾಗಲೇ ನಿರ್ಣಯಿಸಲ್ಪಟ್ಟಿರುತ್ತದೆ. ಹೀಗಾಗಿ ಇದು ಬೇರೆ ಬೇರೆ ಆಗಿರುತ್ತದೆ.

ಅಗಣಿತವಾಗಿರುವ ಅವಧಿಯು ಇವುಗಳಿಗೆ ಸಂಲಗ್ನಗೊಂಡಿರುತ್ತವೆ. ಆದರೆ ವಸ್ತುವು ನಿಬಂಧನೆಗೆ ಒಳಪಟ್ಟಿದ್ದು ಆ ನಿಬಂಧನೆಯು ನಾದದ ಒಂದು ಪ್ರಕಾರಕ್ಕೆ ಸಂಬಂಧಿಸಿದ್ದು ಜೊತೆಗೆ ಪ್ರತಿಯೊಂದು ವಸ್ತುವಿಗೂ ಅದರದೇ ಆದ ನಿನಾದವು ನಿಗದಿಗೊಳಿಸಲ್ಪಟ್ಟಿದೆ.

ಬಾಹ್ಯ ಅಂಶಗಳಲ್ಲಿ ಅಸ್ತಿತ್ವ ಪಡೆದುಕೊಂಡಿರುವಲ್ಲಿ, ಅವುಗಳಿಗೆ ನಿಗದಿತವಾಗಿರುವ ಅವಧಿಯನ್ನು ವರ್ಷಗಳು, ತಿಂಗಳುಗಳು, ವಾರಗಳು, ದಿನಗಳು, ನಿಮಿಷಗಳು ಮತ್ತು ಸೆಕೆಂಡುಗಳು ಎಂದೆಲ್ಲಾ ರೂಪುಗೊಳಿಸಲ್ಪಟ್ಟಿವೆ. ಇದು ನಿಸರ್ಗ ಸಹಜವಾಗಿಯೇ ಒಂದು ಸುಸಜ್ಜಿತ ಶ್ರುತಿಯ ಸ್ವರೂಪದಲ್ಲಿದೆ. ಆದರೆ ಇವೆಲ್ಲವೂ ಮಾನವನಿಂದ ನಿರ್ಮಿತಿಗೊಂಡಿವೆ. ಆದಾಗ್ಯೂ ಕೆಲವೊಂದು ಹಂತದಲ್ಲಿ ಇವು ನೈಜ ಸ್ವರೂಪದಲ್ಲಿವೆ. ವೈಶ್ವಿಕ ಚಲನವಲನಗಳಿಗೆ ಇವು ಸಾಧ್ಯವಾದಷ್ಟೂ ಸಂವಾದಿಯಾಗಿವೆ. ಹೀಗಾಗಿ, ಇದಕ್ಕಾಗಿಯೇ ನಾವು ಜನ್ಮದಿನವನ್ನು ಆಚರಿಸುತ್ತಿದ್ದೇವೆ. ಉದಾಹರಣೆಗೆ ಹೇಳುವದಾದರೆ, ಈ ನಿನಾದದ ಆವರ್ತನವು ಆಯಾ ವ್ಯಕ್ತಿಯ ಅಸ್ತಿತ್ವದ ಮೇಲೆ, ನಿಗದಿತವಾದ ವಿನ್ಯಾಸದಲ್ಲಿಯೇ ಆವರ್ತನಗೊಳ್ಳುವ ಸಂದರ್ಭಗಳನ್ನು ಸೃಷ್ಟಿಸುತ್ತಿರುವದರಿಂದ ಮತ್ತು ಆ ವಿನ್ಯಾಸವೇ ಅವನ ಜನ್ಮದಿನವು ಆಗಿರುತ್ತದೆ.

**ಆಂತರಿಕ ಸಂಚಲನದ ನಿನಾದಗಳು**

ಇಲ್ಲಿ ರೂಹುಗೊಳ್ಳುವ ಎಲ್ಲ ಸಂಚಲನಗಳು– ಅವುಗಳನ್ನು ನೀವು ಯಾವಾಗ ಗಮನಿಸಲು ಸಾಧ್ಯವಾಗುತ್ತದೆಯೋ, ಯಾವಾಗ ನಿಮಗೆ ಇದರ ಕುರಿತು ಅರಿವು ಪ್ರಾಪ್ತಿಯಾಗುತ್ತದೆಯೋ, ಅಂದರೆ ನಿಮ್ಮ – ಆಂತರ್ಯದ ಚೇತನವು– ಮತ್ತು ಇದು ಕೇವಲ ಅರಿತುಕೊಳ್ಳುವದಕ್ಕೆ ಮಾತ್ರವಲ್ಲ– ಪ್ರಗತಿಯ ಗತಿಯ ಏರಿಳಿತಗಳನ್ನು ಅದಕ್ಕೆ ತಕ್ಕ ಕ್ರಿಯೆಗಳನ್ನು ರೂಪಿಸಿಕೊಳ್ಳುತ್ತದೆ. ಇದಕ್ಕೆ ಸೂತ್ರಬದ್ಧವಾಗಿರುವ ಮತ್ತು ನಿಗದಿತವಾಗಿರುವ ಘಳಿಗೆಯಲ್ಲಿ ಆವರ್ತನಗೊಳ್ಳುತ್ತ, ಎದುರಾಗುವ ಎಲ್ಲ ಅಡೆ–ತಡೆಗಳನ್ನು ಸಮರ್ಥಶೀಲವಾಗಿ ಎದುರಿಸುತ್ತ, ಮುಂದೆ ಸಾಗಲು ಸಹಾಯಕಾರಿಯಾಗಿರುತ್ತದೆ. ಆದರೆ, ಪ್ರತಿಯೊಬ್ಬ ವ್ಯಕ್ತಿಯೂ ಇದರ ಕುರಿತು ಜಾಗ್ರತನಾಗಿದ್ದು, ಅವನದೇ ಅದ ನಿನಾದದ ಮೂಲಕವೇ ಅವನು ಅದನ್ನು

ಸಾಕ್ಷಾತ್ಕರಿಸಿಕೊಳ್ಳಲು ಸಮರ್ಥನಾಗಿದ್ದಲ್ಲಿ ಮತ್ತು ಅದರ ಅವನ ಸಲುವಾಗಿಯೇ ನಿರೂಪಿತಗೊಂಡ ನಿನಾದವಾಗಿದೆ ಎನ್ನುವದನ್ನು ತಿಳಿದುಕೊಂಡಿರುವಲ್ಲಿ ಅವನ ಪ್ರಗತಿ ಸಾಗುತ್ತದೆ; ಆ ವ್ಯಕ್ತಿಗೆ ನಿಗದಿತಗೊಂಡಿರುವ ಈ ನಿನಾದವು ಅವನ ಪಕ್ಕದಲ್ಲಿರುವ ವ್ಯಕ್ತಿಗೆ ನಿಗದಿಗೊಂಡಿರುವದಿಲ್ಲ– ಭಿನ್ನವಾಗಿರುತ್ತದೆ. ಒಂದು ನಿಗದಿತಗೊಂಡ ನಿನಾದದ ಹಲವಾರು ಋತುಮಾನಗಳು ಅನುಸರಣಗೊಂಡರೂ, ಅವು ನಿಯಮಬದ್ಧವಾಗಿ ಸಮಗ್ರಗೊಳ್ಳುವಲ್ಲಿ ಸಹಕಾರಿಯಾಗಿರುತ್ತವೆ. ಹೀಗಾಗಿಯೇ ಪ್ರತಿಯೊಬ್ಬ ವ್ಯಕ್ತಿಗೂ ಅವನಿಗೇ ನಿಗದಿತವಾಗಿರುವ ಋತುಮಾನದ ಸರಣಿ ಇರುತ್ತದೆ. ಯಾರು ತನ್ನನ್ನು ಕುರಿತು ಸಂಪೂರ್ಣವಾಗಿ ಪ್ರಜ್ಞಾಪೂರ್ವಕವಾಗಿ ಅರಿತುಕೊಳ್ಳುತ್ತಾನೆಯೋ, ಅವನು ಇದರ ಜೊತೆಗೆ ಮತ್ತೂ ಕೆಲವೊಂದು ಇಂತಹದೇ ಘಟನೆಗಳು ಆವರ್ತನೀಯವಾಗಿ ಆಗಮಿಸುತ್ತವೆ ಎನ್ನುವದನ್ನೂ ತಿಳಿದುಕೊಳ್ಳುತ್ತಾನೆ. ಇವರಲ್ಲಿಯೇ ಕೆಲವು ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿಗಳು ಈ ರೀತಿಯ ವಿಶೇಷ ನಿಮಿಷ–ಘಂಟೆ ಅಥವಾ ವಿಶೇಷವಾಗಿ ನಿಗದಿತಗೊಂಡಿರುವ ದಿನದ ಕುರಿತು ಸಂವೇದನೆಗಳನ್ನು ಹೊಂದಿರುತ್ತಾರೆ. ಇದಕ್ಕೂ ಮಿಗಿಲಾಗಿ ಕೆಲವರು ಮತ್ತೂ ಉತ್ತಮವಾಗಿರುವ ಸ್ಫೂರ್ತಿದಾಯಕವಾಗಿರುವ ಅಂಶಗಳ ಮೂಲಕ ಇದರ ಮಹತ್ವವನ್ನು ಅರಿತುಕೊಂಡಿರುತ್ತಾರೆ. ಇಲ್ಲಿ ಮುಖ್ಯವಾಗಿ ಪ್ರತಿಯೊಬ್ಬನೂ ಸದಾ ಇದರ ಬಗೆಗೆ ಲಕ್ಷ್ಯವನ್ನು ವಹಿಸಿಕೊಂಡಿರಲೇಬೇಕಾಗುತ್ತದೆ. ನೈಸರ್ಗಿಕವಾಗಿ ಇದು ಕೇವಲ ನಿರ್ವಿಶೇಷತ್ವದಿಂದ ದೂರವಾಗಿರುತ್ತದೆ, ಅಲ್ಲದೇ ಇದು ಅಷ್ಟೊಂದು ಬಿಗುವಾದ ನಿಲುವನ್ನು ಹೊಂದಿರುವದಿಲ್ಲ. ಒಂದು ವೇಳೆ ಇದು ತೊಂದರೆದಾಯಕವಾಗಿರುವ ಸಂದರ್ಭವಿರುವಲ್ಲಿ, ಇಂತಹ ತೊಂದರೆಯನ್ನೂ ಸಹಿತ ಅತ್ಯಂತ ಸುಲಭವಾಗಿ ಅಂದರೆ ಸರಳವಾಗಿ ಅತ್ಯಂತ ಕಡಿಮೆ ಶ್ರಮದಲ್ಲಿ, ಅಂದರೆ ಆತ್ಮಪೂರ್ವಕವಾದ ಇಚ್ಛೆಯಲ್ಲಿ, ಪರಿಹರಿಸಿಕೊಳ್ಳಬಹುದು. ಇದನ್ನು ಸುಲಭವಾಗಿ ಪ್ರತಿಯೊಬ್ಬನೂ ಅನುಸರಿಸಬಹುದು.

ಇಷ್ಟೆಲ್ಲಾ ಆದರೂ, ಪ್ರತಿಯೊಂದು ವಸ್ತುವೂ ತನ್ನದೇ ಆದ ನಿನಾದದ ಸ್ವರೂಪವನ್ನು ಹೊಂದಿರುವಲ್ಲಿ, ಅದೂ ಒಳ್ಳೆಯ ಸಂಗತಿಯೇ ಆಗಿ, ಒಂದು ರೀತಿಯಲ್ಲಿ ಸುಸಂಗತವಲ್ಲದ ಸ್ವರೂಪದ ಗೋಜಲುಮಯ ನಿನಾದದ ಸ್ವರೂಪದಲ್ಲಿ ಇದ್ದಲ್ಲಿ, ಅದೂ ಸಂಕೀರ್ಣತೆಯ ಪರಮಾವಧಿಯ ಹಂತದ

ಸ್ವರೂಪದಲ್ಲಿ ಇದ್ದಲ್ಲಿ, ಆಗ ಅದರ ಪರಿಣಾಮ ಏನು ಎನ್ನುವದನ್ನೂ ನಾವು ಕಾಣಬಹುದು. ಅಲ್ಲಿ ಏನೇನೂ ಇರುವದಿಲ್ಲ, ಕಾರಣವೆಂದರೆ ಎಲ್ಲವೂ ತುಂಬ ಸಂಕೀರ್ಣಮಯ ಸ್ಥಿತಿಯಲ್ಲಿ ಇರುತ್ತವೆ ಅಷ್ಟೇ ಜಟಿಲತಮವಾಗಿರುತ್ತವೆ.

**ಕಾಲದ ಅಲೆಗಳ ಸದುಪಯೋಗ**

ಇದೀಗ, ನಿಮಗೆಲ್ಲಾ ಗೊತ್ತಿರುವಂತೆಯೇ, ಯೋಗದ ಕುರಿತು ಮಾತನಾಡುತ್ತಿದ್ದೇವೆ ಅಲ್ಲವೇ... ಒಂದು ವೇಳೆ ನೀವು ನಿಮ್ಮಲ್ಲಿಯೇ ಕೆಲವೊಂದು ಘಟನೆಗಳು ಪುನರರ್ತನೆಗೊಳ್ಳುತ್ತಿರುವದನ್ನು ಅನುಭವಿಸಿರುತ್ತೀರಿ. ಉದಾಹರಣೆಗೆ ಹೇಳುವದಾದರೆ, ಆ ಒಂದು ನಿರ್ದಿಷ್ಟ ಘಳಿಗೆ, ದಿನದ ಒಂದು ನಿರ್ದಿಷ್ಟವಾದ ಸಮಯ, ಅದೂ ಕೆಲವೊಂದು ಸಂದರ್ಭಗಳಲ್ಲಿ, ಅದರ ಕುರಿತು ನೀವು ಲಕ್ಷ್ಯವನ್ನು ಕೇಂದ್ರೀಕರಿಸಿಕೊಂಡು ಧ್ಯಾನವನ್ನು ಮಾಡುತ್ತಿದ್ದಲ್ಲಿ, ಆಗ, ನಿಮಗೆ ಈ ಘಳಿಗೆಯನ್ನು ಹೇಗೆ ಸಾರ್ಥಕಗೊಳಿಸಕೊಳ್ಳಬಹುದು ಎನ್ನುವದು ಗೊತ್ತಾಗುತ್ತದೆ.

ಸಾಮಾನ್ಯವಾಗಿ, ನೀವು ಇದರ ಗುಲಾಮರಾಗಬೇಕೆಂದೇನೂ ಇಲ್ಲ; ಪ್ರತಿಯೊಬ್ಬನೂ ಇದನ್ನು ಅವಶ್ಯಕತೆ ಇದ್ದಲ್ಲಿ ಉಪಯೋಗಿಸಿಕೊಳ್ಳಬಹುದು ಆದರೆ ಆ “ಘಳಿಗೆ” ಮುಗಿದುಹೋದ ಮೇಲೆ ಅದರ ಕುರಿತು ಧ್ಯಾನಿಸಿದಲ್ಲಿ ಯಾವುದೇ ಪ್ರಯೋಜನವಿರುವದಿಲ್ಲ. ಆದರೆ ಧ್ಯಾನವು ಸೂಕ್ತವಾದ ಸಮಯದಲ್ಲಿ ಇದ್ದಲ್ಲಿ, ಅದು ನಿಮಗೆ ಸಹಾಯಕಾರಿಯಾಗಿ ಇರುತ್ತದೆ. ಇದೆಲ್ಲವೂ ಅವಲಂಬಿತವಾಗಿರುವದು ಅದನ್ನು ‘ಗಮನಿಸುವ’ ಸ್ಥಿತಿ ಎನ್ನುವದು ಮುಖ್ಯ ಸಂಗತಿಯಾಗಿದೆ.

ನೀವು ನಿಮ್ಮಲ್ಲಿಯೇ ಜಾಗ್ರತರಾಗಿ ಸ್ಪಂದಗೊಳ್ಳುವ ಸಾಮರ್ಥ್ಯ ಹೊಂಡಿರುವಲ್ಲಿ, ಅದೂ ನಿಗದಿತವಾಗಿರುವ ಒಂದು ವರ್ಷದ ಕೆಲವೊಂದು ಸಮಯಗಳಲ್ಲಿ ಆಗಮಿಸುತ್ತದೆ ವಿನಾ ಕೇವಲ ವೈಯಕ್ತಿಕ ಅಂಶಗಳನ್ನು ಅವಲಂಬಿಸಿಕೊಂಡು ಅಲ್ಲ– ಅದೂ ಸರ್ವೆಸಾಮಾನ್ಯವಾಗಿರುವ ಅಂಶಗಳಲ್ಲಿ ಅಲ್ಲ. ಸಾಧನೆಯ ಅವಧಿಯಲ್ಲಿ ನೀವು ಹೆಚ್ಚಿನ ತೊಂದರೆಗಳನ್ನು ಎದುರಿಸುವ ಸಂದರ್ಭಗಳೂ ಬರಬಹುದು. ಇದಕ್ಕೆ ವಿರುದ್ಧವಾಗಿ, ನಿಮ್ಮ ಆಂತರ್ಯದಲ್ಲಿಯೇ ಜ್ಞಾನ ಮತ್ತು ಚೇತನದ ಪ್ರಗತಿಗಾಗಿ ಮಹತ್ತರವಾದ ಹೊರಹೊಮ್ಮುವಿಕೆಯ

ಸಂದರ್ಭವನ್ನು ಹೊಂದಿರುವಲ್ಲಿ ಕಾಣಬಹುದು. ಇದು ನಿಮಗೆ ಸಂವೇದನೆಗೊಳ್ಳುವ ಅನುಭವವನ್ನು ರೂಪಿಸುತ್ತದೆ, ಒಂದು ನಿಗದಿತವಾಗಿರುವ ಘಳಿಗೆಯಲ್ಲಿ ನಿಮ್ಮಲ್ಲಿಯೇ ನೀವು –ಅಲ್ಲಿ ಮತ್ತೂ ವಿಶೇಷ ರೀತಿಯಲ್ಲಿರುವ ತೊಂದರೆಗಳು ಉದ್ಭವಿಸಿದರೂ ಅಥವಾ ಸ್ಥಗಿತಗೊಳ್ಳುವ ಸಂದರ್ಭದಂತೆ ಅನಿಸಿದರೂ, ನಿಮ್ಮಲ್ಲಿಯೇ ನೀವು ಅದಕ್ಕೆ ಪಕ್ಕಾಗದೇ, ನಿಮಗೆ ನೀವೇ 'ಯಾಕೆ ಈ ಸಮಯ ಸಾಮಾನ್ಯವಾಗಿದೆ; ಏಕೆಂದರೆ ಇದು ಈ ವರ್ಷದಲ್ಲಿಯೇ ನಿಗದಿತಗೊಂಡಿರುವ ಒಂದು ನಿರ್ಧರಿತ ಸಮಯವಾಗಿದೆ' ಎಂದು ಹೇಳಿಕೊಳ್ಳಿ; ಮತ್ತು ಶಾಂತವಾಗಿಯೇ ಆ ಸಮಯಕ್ಕಾಗಿ ಕಾಯಿರಿ. ಅಥವಾ ಯಾವುದಕ್ಕೂ ಧೈರ್ಯಗುಂದದೇ, "ಓ, ಇದೋ, ನಾನೀಗ ಇದರ ಕೃಪೆಗೆ ಪಾತ್ರನಾಗುತ್ತಿಲ್ಲ, ನಾನು ಯಾವುದೇ ಪ್ರಗತಿಯನ್ನೂ ಸಾಧಿಸುತ್ತಿಲ್ಲ" ಎಂದು ಹೇಳಿಕೊಳ್ಳಿ. ಏಕೆಂದರೆ ಈ ಸಮಯದಲ್ಲಿ ನೀವು 'ಸುಸಂಗತಗೊಳ್ಳಲು ಅದು ಸಹಾಯ ಮಾಡುತ್ತಿರುತ್ತದೆ'.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/332–34 – ಶ್ರೀಮಾತೆ**

*ಭೌತಿಕ ಕರ್ಣಗಳಿಂದ ಶ್ರಾವ್ಯಗೊಳ್ಳಲು ಸಾಧ್ಯವಾಗದ 'ನಾದ'ವೊಂದು ಪ್ರತಿಯೊಂದು ವಸ್ತುವಿನಲ್ಲಿಯೂ ಇದೆ. ನಾದದ ಈ ಅಸ್ತಿತ್ವದ ಬಗೆಗೇ ಅರಿವಿರುವದಿಲ್ಲ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/283 – ಶ್ರೀ ಅರವಿಂದರು**

**ನಮ್ಮ ಜನುಮಗಳ ಶ್ರೇಣಿಶ್ರೇಣಿಯಲಿ ಘಟಿಸುತಿಹ ಘಟನೆಗಳಲಿ**

ನೊಗ ಹೊತ್ತ ಜಡದ ಜಗವಿದುವು ಗಾಣದೋಪಾದಿಯಲ್ಲಿ ಸತತ
ತನ್ನ ಮೈಸುತ್ತ ತಾನೆ ಸುತ್ತುತಿರಲಲ್ಲಿ ಚೈತನ್ಯ ನಿರತ
ಸಮ್ಮ ಶಕ್ತಿಯಿಂದಾಚೆ ಆಚೆಗಿಹ ಸಂಕಲ್ಪ ರೂಹು ಪಡೆಯೆ
ಪರಿತ್ಯಕ್ತಗೊಂಡು ಈ ಜಡದ ಜಗದ ಮೇಲೀಗ ಉಳಿದುಕೊಂಡು

ತಿರುಗಣಿಯ ಸುಳಿಗೆ ಗಿರಗಿರನೆ ಸುತ್ತಿ ನಿತ್ಯದಲು ಭ್ರಮಣಶೀಲ
ಪರಿಮಿತದ ಅವಧಿ ನಿರ್ಧರಣೆಗೆಂದು ನಾವಿಂದು ಸುತ್ತುತೆಲ್ಲ;

ಜಡೆಗಟ್ಟಿ ಜಟಿಲ ಸಂಕೀರ್ಣಗೊಂಡು ಯಾಂತ್ರಿಕದ ಬದುಕಿನಲ್ಲಿ
ಗುರಿಕಾರನಿರದೆ ಗುರಿತಪ್ಪಿ ಹೊರಟು ದೈವವೆಂದವರ ಮಧ್ಯದಲ್ಲಿ

ಸಾವು–ನೋವುಗಳ ಸತತ–ಕೋಟಳೆಯ ಸಂಕಷ್ಟ ದಾರಿ ಸುತ್ತ
ಅಲ್ಲೆಮ್ಮ ಬದುಕ ರಕ್ಷೆಗಿದೆ ಸತತ ಚಾಚಿರುವ ಅಭಯ–ಹಸ್ತ
ಅಗಣಿತದ ಕಾಯ ಜೊತೆ ಜನ್ಮಗಳಲಿ ಅದು ನಮ್ಮ ಸನಿಹದಲ್ಲಿ
ಆ ಪರಮ ಫಲವು ಅನಿವಾರ್ಯವಾಗಿ ದೊರಕಲೆನೆ ಬಯಸುತಲ್ಲಿ

ಚಂಚಲತೆ ಇರದ ಅದರ ಗ್ರಾಹ್ಯದಲಿ ನಮ್ಮ ರಕ್ಷೆಗಿರಿಸುತಿಲ್ಲಿ
ಯಾವ ಕೃತುಶಕ್ತಿ ವಿಚಲಿಸದು ಇದನು ಮೃತ್ಯು ಸಹ ಸೋಕದಿಲ್ಲಿ
ಕಾಲ ನಿಯತಿಯಲಿ ಋತದ ಅಮರತ್ವ ಚಿದ್ಬ್ರಹ್ಮವಾಗಿ ಸತ್ಯ
ನಮ್ಮಾತ್ಮಗಳಿಗೆ ಆಶ್ವಾಸ ನೀಡಿ ಆ ಪರಮದೇವ ನಿತ್ಯ

ಬೇಗುದಿಗೆ ಸಿಲುಕಿ ಬೆಂದ ಜೀವನದ ಜೊತೆಜೊತೆಗೆ ಮೃತ್ಯುವನ್ನು
ಆ ಮೊದಲ ಮನುಜನಾ ಹೃದಯವಿದನು ಪ್ರತಿಭಟಿಸೆ ನಿತ್ಯ ತಾನು
ಈ ಜಗದ ರಚನೆಗಯದವನು ತಾನೆ ಜಗದೊಡೆಯ ನಿತ್ಯದಲ್ಲಿ
ಈ ಪಥದ ಮೇಲೆ ಅವನ ಪದಗುರುತು ನಮ್ಮ ಭ್ರಮೆಯಲ್ಲಿ ಅಲ್ಲಿ

ಕಾರ್ಯಗೈದವನ ನಮ್ಮ ದಾರುಣದ ಕಾಲಗತಿ ಸೂತ್ರಗಳಲಿ
ನಮ್ಮ ಜನುಮಗಳ ಶ್ರೇಣಿಶ್ರೇಣಿಯಲಿ ಘಟಿಸುತಿಹ ಘಟನೆಗಳಲಿ
ಸಂಘರ್ಷದಲ್ಲಿ ಜೊತೆ ಶ್ರಮದಿ ಸಹಿತ ಕಠಿಣಾತಿಕಠಿಣದುಸಿರು
ಇವುಗಳಾಧರಿಸಿ ಇವ ಕಾರ್ಯಗೈವ ಪರಿಪೂರ್ಣಗೊಳಿಸಿ ತೇರು

ನಮ್ಮ ಪಾಪಗಳ ಮತ್ತೆ ಕಷ್ಟಗಳ ಜೊತೆಯಲ್ಲಿ ಅಶ್ರುಬಿಂದು
ನಿರತ ಕ್ರಿಯೆಯಲ್ಲಿ ಭವ ಬದುಕು ದಿನದಿ ಅವಕಾಶ ಪಡೆಯಲೆಂದು
ನಮ್ಮ ನಿಜ್ಞಾನವನ್ನು ನಿರ್ನಾಮಗೊಳಿಸೆ ಸತ್ತ್ವ ತನುವು
ಯಾವ ರೂಪದಲು ಬಂದರೂ ಅದನು ಬಿಡದೆ ಧರಿಸುತಲಿ ನಾವು

ಯಾವ ವೇಷದಲಿ ಯಾವ ಭಾವದಲು ಸಂಕೀರ್ಣ ದೋಷ–ಮೇಳ
ಮತ್ತೆ ಪ್ರಚಲಿತದ ನಮ್ಮ ವಿಧಿಲಿಖಿತ ರೂಪಿಸಿರೆ ಹಾಕಿ ತಾಳ

ಏನೊಂದನೀಗ ನಾವರಿಯದಿರುವ ಜೊತೆ ಕಾಣದಿರಲು ಸಹಿತ
ಆದರೂ ಅದರ ತಾತ್ಪರ್ಯ ಮತ್ತೆ ಸಂಚಿತದ ಭಾವ ಸಹಿತ


ಈ ಎಲ್ಲ ಬಲ್ಲ ತಲ್ಲಣದಿ ಕೂಡ ನಮ್ಮನ್ನು ಬಿಡದೆ ಇಂದು
ಆ ಸರ್ವಶಕ್ತ ಮಾರ್ಗದರ್ಶನಕೆ ಮುಂಚೂಣಿಯಲ್ಲಿ ನಿಂದು
ಭವ್ಯ ವಿಭಜನದ ಧರ್ಮದಂತೀಗ ಭಾಗಗೊಂಡಿರುವ ಜಗದಿ
ನಂತರದಿ ನಿತ್ಯ ಈಗಲ್ಲಿ ನಾವು ಕಾರ್ಯದಲಿ ತೊಡಗಿ ಮುದದಿ

ಆ ಪರಮದೇವನಾನಂದ ಹರ್ಷ ಜೊತೆಗದ್ವೈತವೂ ಸಿಕ್ಕು
ನಿಯತಿಯಲಿ ಬಂದು ಇವು ನಮಗೆ ಇಂದು ಆಜನ್ಮಸಿದ್ಧ–ಹಕ್ಕು
ಅಜ್ಞಾತ ವಿಶ್ವದವಧಿ ದರ್ಶಕದಿ ದಿನವೊಂದು ನಿಗದಿಯಾಗಿ
ಉನ್ನತದ ಸೃಷ್ಟಿಯಾಗಲೆನೆ ಪುಣ್ಯದಾಚರಣೆ ಖಚಿತವಾಗಿ

ನಮ್ಮಾತ್ಮವದರ ವೈವಿಧ್ಯ ಪದಗುರುತ ನ್ಯಾಯಬದ್ಧಗೊಳಿಸಿ
ಆತ್ಮಗತವಾದ ಸರ್ವಸ್ವ ಪೂರ್ಣ ಇಲ್ಲದಿರನಂತವಾಸಿ
ದೀರ್ಘಾತಿದೀರ್ಘ ದೂರದಲಿ ಸ್ಥಿತದ ಅನಂತಾನಂತ ಬಲವು
ಘನಶಾಂತವೀಗ ನಿರ್ಮಾಯ ಮೌನ ಜೊತೆಜೊತೆಗೆ ಇರಲು ಒಲವು

ಸಂಮಿಲನಗೊಂಡು ಸಂಚಲನದಲ್ಲಿ ಸ್ಪಂದಿಸುತ ನಿಯತಿ ಕರೆಗೆ
ಕೊನೆಗಿಂತು ಕ್ರಿಯೆಯ ಉತ್ಕ್ರಾಂತಿಯಲೆಯ ಸರಣಿಯದು ಪೂರ್ಣದೆಡೆಗೆ
ಅಚಲದಲಿ ಜೊತೆಗೆ ಗಮ್ಯಗೊಂಡಿರುವ ತಮ್ಮ ವೃತ–ಕಾರ್ಯಕಾಗಿ
ಇದ್ದಕಿದ್ದಂತೆ ಲಂಘನದಿ ಜೊತೆಗೆ ಸಂಬಂಧ ಸೇತುವಾಗಿ

**ಸಾವಿತ್ರಿ ದಳ 1 ರೇಣು 4 ಪುಟ 59** **– ಶ್ರೀ ಅರವಿಂದರು**



## ಜನ್ಮದಿನ

ವಿಶ್ವದ–ಬಲಗಳಲ್ಲಿ ಸಂಬಂಧ ಸೂತ್ರವನ್ನು ಹೊಂದಿರುವ ಹಲವಾರು ನಾದಗಳಲ್ಲಿ ಒಂದು ವಿಶಿಷ್ಟವಾದ 'ನಿನಾದ'ವಿದ್ದು ಇದು ಲೀಲೆಗಳ ಮೂಲಕ ಪ್ರಕಟಗೊಳ್ಳುವ ಒಂದು 'ನಿನಾದ'ವಿದೆ. ಇದು ಸೂರ್ಯ ಮತ್ತು ಗ್ರಹಗಳ ಜೊತೆಗೆ ಸಂಯೋಜನೆಗೊಂಡಿದೆ. ಇದೇ ಜನ್ಮದಿನವನ್ನು ರೂಪಿಸುತ್ತದೆ. ಜೊತೆಗೆ ಇದರ ಪುನರಾವರ್ತಿತ ಸಂದರ್ಭಗಳನ್ನೂ ಸೃಷ್ಟಿಸುತ್ತಿದೆ. ಅದರಲ್ಲೂ ಭೌತಿಕ ಅಸ್ತಿತ್ವವನ್ನು ಹೊಂದಿರುವ ಜೀವಿಯು ಹೆಚ್ಚು ಸುನಮ್ಯತೆಯನ್ನು ಹೊಂದಿದ್ದಲ್ಲಿ ಈ ರೀತಿಯ ಜನ್ಮದಿನದ ಸಂಗತಿಯು ಪುನರಾವರ್ತನೆಗೊಳ್ಳುತ್ತದೆ. ಈ ಕಾರಣದಿಂದಾಗಿಯೇ ಶ್ರೀಮಾತೆಯು ಜನ ಸಮುದಾಯದ ಜನ್ಮದಿನಗಳಲ್ಲಿ ದರ್ಶನವನ್ನು ನೀಡುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/524 – ಶ್ರೀ ಅರವಿಂದರು**

## ಶಿಷ್ಯರಿಗಾಗಿ ಶ್ರೀ ಅರವಿಂದರ ಹುಟ್ಟುಹಬ್ಬದ ಸಂದೇಶಗಳು

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಆ ಭಗವಂತನು ಮತ್ತು ದಿವ್ಯ ಮಾತೆಯವರು ನಿಮ್ಮನ್ನು ಯಾವಾಗಲೂ ಗಮನಿಸುತ್ತಿರುವರು ಎಂಬಂತೆ ಜೀವಿಸಿರಿ. ಏನನ್ನೂ ಮಾಡಬೇಡಿ, ದೈವೀ ಉಪಸ್ಥಿತಿಗೆ ಉಚಿತವಲ್ಲದ ಯಾವುದನ್ನೂ ಯೋಚಿಸಲು ಮತ್ತು ಅನುಭವಿಸಲು ಪ್ರಯತ್ನಿಸಬೇಡಿ.

*

ನಿಮ್ಮ ಅಂತಃಪ್ರಜ್ಞೆಯ ಆಳಕ್ಕೆ ಹೋಗಿ, ಏಕೆಂದರೆ ಅಲ್ಲಿ ನೀವು ಆತ್ಮದ ಗಾಢವಾದ ಶಾಂತತೆಯನ್ನು, ಪ್ರಕಾಶಮಾನವಾದ ಮೌನವನ್ನು, ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ವಿಶಾಲತೆಯನ್ನು ಕಾಣಬಹುದು, ಮತ್ತು ಅಲ್ಲಿ ದೈವೀ ಸ್ಪರ್ಶ ಮತ್ತು ಉಪಸ್ಥಿತಿಯನ್ನು ಕಾಣಬಹುದು.

*

ನಿಮ್ಮೊಳಗಿನ ಪ್ರಜ್ವಲಿಸುವ ಬೆಳಕು ಮನಸ್ಸನ್ನು ಪ್ರಶಾಂತಗೊಳಿಸಲಿ ಮತ್ತು ಹೃದಯವನ್ನು ಜಾಗೃತಗೊಳಿಸಲಿ ಹಾಗೂ ಅದಕ್ಕೆ ಮಾರ್ಗದರ್ಶನವನ್ನು ನೀಡಲಿ.

*

ಮನಸ್ಸಿನ ಪ್ರಶಾಂತತೆಯಲ್ಲಿ ನಿಮ್ಮ ಹೃದಯದಲ್ಲಿ ಹಾಗೂ ಎಲ್ಲ ಕಡೆಯೂ ಇರುವ ದೈವೀ ಉಪಸ್ಥಿತಿಗೆ ತೆರೆದುಕೊಳ್ಳಿ; ನಿಶ್ಚಲವಾದ ನೀರಿನಲ್ಲಿ ಸೂರ್ಯನನ್ನು ಸ್ಪಷ್ಟವಾಗಿ ಕಾಣುವಂತೆ, ನಿಶ್ಚಲ ಮನಸ್ಸು ಮತ್ತು ಹೃದಯದಲ್ಲಿ ದೇವನು ಕಾಣುವನು.

*

ಉನ್ನತವಾದ ಪ್ರಜ್ಞೆಯ ಸ್ತರವನ್ನು ತಲುಪಿರಿ, ಆ ಪ್ರಜ್ಞೆಯ ಬೆಳಕು (ನಿಮ್ಮ) ಪ್ರಕೃತಿಯನ್ನು ನಿಯಂತ್ರಿಸಲಿ ಮತ್ತು ಪರಿವರ್ತಿಸಲಿ.

*

ನಮ್ಮನ್ನು ನಾವು ಹೃದಯಪೂರ್ವಕವಾಗಿ ಸಮರ್ಪಿಸಿಕೊಳ್ಳುವುದರಿಂದ, ಪ್ರಜ್ಞೆಯಿಲ್ಲದ ಸ್ಥಿತಿಯಲ್ಲೂ ಸಹ (ದೇವನ) ಉಪಸ್ಥಿತಿ ಹಾಗೂ ಪ್ರಭಾವ ಅಲ್ಲಿರುತ್ತವೆ

ಮತ್ತು ಇಡೀ ಪುರುಷನ ಮೂಲಕ ನಿಜವಾದ ಬೆಳಕಿಗೆ ಹಾಗೂ ಪ್ರಜ್ಞೆಗೆ ಪ್ರಕೃತಿಯನ್ನು ಸಿದ್ಧಪಡಿಸುತ್ತದೆ.

*

ನಿಮ್ಮೊಳಗಿರುವ ಆಕಾಂಕ್ಷೆಯ ಮೇಲೆ ಯಾವಾಗಲೂ ಒತ್ತಡವನ್ನು ಹಾಕಿ; ಅದು ಹೃದಯದಲ್ಲಿ ಗಹನವನ್ನು ಹಾಗೂ ಸ್ಥಿರತೆಯನ್ನು ಹೊಂದಲು ಬಿಡಿ; ಮನಸ್ಸಿನ ಹಾಗೂ ಪ್ರಾಣದ ಬಾಹ್ಯ ಅಡೆತಡೆಗಳು ಹೃದಯದ ಪ್ರೇಮ ಹಾಗೂ ಹಂಬಲದ ಬೆಳವಣಿಗೆಯೊಂದಿಗೆ ತಮ್ಮಷ್ಟಕ್ಕೆ ತಾವೇ ಹಿಂದಕ್ಕೆ ಸರಿಯುತ್ತವೆ.

*

ನಿಮ್ಮ ಮನಸ್ಸು ಹಾಗೂ ಹೃದಯವನ್ನು ಮುಕ್ತವಾಗಿರಿಸಿ ಮತ್ತು ಒಳಗಡೆಗೆ (ತರಂಗದಲ್ಲಿ) ಹಾಗೂ ಮೇಲ್ಗಡೆಗೆ ತಿರುಗಿರಲಿ, ಹೀಗಾದಾಗ ಅಂತರಂಗ–ದೊಳಗಿಂದ ಸ್ಪರ್ಶವು ಅಥವಾ ಮೇಲಿನಿಂದ (ಅನುಗ್ರಹದ) ಹರಿವು ಬಂದಾಗ, ಅದನ್ನು ಸ್ವೀಕರಿಸಲು ನೀವು ಸಿದ್ಧರಾಗಿರಬೇಕು.

*

ದೈವಾನುಗ್ರಹವು ಬರುವಾಗ, ಅದನ್ನು ಸ್ವೀಕರಿಸಲು ಆತ್ಮವನ್ನು ಸಿದ್ಧವಾಗಿ ಇಡಬೇಕು.

*

ನಮ್ಮಲ್ಲಿ ಮತ್ತು ಪ್ರಪಂಚದಲ್ಲಿ ಕೆಲಸ ಮಾಡಬೇಕಾದರೆ ಅವಿಚ್ಛಿನ್ನ ಬಯಕೆಯು ಅತ್ಯಂತ ಅವಶ್ಯಕವಾಗಿದೆ; ಇದರಿಂದ ಖಚಿತವಾದ ಆಧ್ಯಾತ್ಮಿಕ ಫಲಿತಾಂಶ, ಪ್ರಜ್ಞೆಯ ಬೆಳವಣಿಗೆ ಮತ್ತು ದೈವೀ ಬೆಳಕಿನ ಹಾಗೂ ಪ್ರಭಾವದ ಸ್ಪರ್ಶಕ್ಕಾಗಿ ಆತ್ಮನ ಸಿದ್ಧತೆಯು ನಮಗೆ ಲಭಿಸುತ್ತದೆ.

*

ಅವಪ್ರಜ್ಞೆಯೊಳಗೆ ಬೆಳಕು ಪ್ರವೇಶಿಸಿದಾಗ, ಅದು ನಮ್ಮೊಳಗೆ ಸುತ್ತುವರೆಯುತ್ತದೆ ಮತ್ತು ನಮ್ಮಲ್ಲಿ ನಿಜವಾದ ಪ್ರಜ್ಞೆಯ ಅಭಿವ್ಯಕ್ತಿಯನ್ನು ತಡೆಯುತ್ತದೆ ಅಥವಾ ಸೀಮಿತಗೊಳಿಸುತ್ತದೆ, ಅದು ಅಭ್ಯಾಸಗಳನ್ನು ಮತ್ತು ಮರಳಿ ಬರುವ ವಿಷಯಗಳನ್ನು ಮತ್ತು ನಮ್ಮನ್ನು ಪೀಡಿಸುವ ಮತ್ತು ಸುಪ್ತ ಪ್ರಜ್ಞೆಯಿಂದ ಹೊಮ್ಮುವಂಥ ಒಂದೇ ತೆರನಾದ ಉತ್ತೇಜನಗಳ ನಿರಂತರ ಪುನರುಕ್ತಿಯನ್ನು ನಿರ್ಬಂಧಿಸಿದಾಗ ಮಾತ್ರ

ಪ್ರಕೃತಿಯು ಸಂಪೂರ್ಣವಾಗಿ ಮುಕ್ತವಾಗುಬಹುದು ಮತ್ತು ಮೇಲಿನ ಸತ್ಯಕ್ಕೆ ಮಾತ್ರ ಪ್ರತಿಕ್ರಿಯೆ ತೋರಬಹುದು.

*

ಬೆಳಕು ಮತ್ತು ಆನಂದದ ಆಗರದೆಡೆಗೆ ನಂಬಿಕೆಯಲ್ಲಿ, ಆತ್ಮವಿಶ್ವಾಸದಲ್ಲಿ ಮತ್ತು ಆನಂದದಲ್ಲಿ ಶಾಂತ ಹಾಗೂ ಸೂರ್ಯನ ಬೆಳಕಿನ ಪಥದ ಮೇಲೆ ನಮ್ಮ ಪಯಣವನ್ನು ಆರಂಭಿಸೋಣ.

*

ಇಂದಿನಿಂದ ಶುರುವಾಗಲಿರುವ ಈ ವರ್ಷಕ್ಕಾಗಿ ಕೆ(ಏ) ಅವರಿಗೆ ನನ್ನ ಆಶೀರ್ವಾದಗಳು.

*

ನಿಮ್ಮ ಹುಟ್ಟು ಹಬ್ಬದ ಈ ದಿನದಂದು ನನ್ನ ಆಶೀರ್ವಾದಗಳು. ಈ ಹೊಸ ವರ್ಷದ ಜೀವನದಲ್ಲಿ ನೀವು ಉತ್ಸಾಹದಿಂದ ಬೆಳೆಯುವಂತಾಗಲಿ.

*

ಇಂದಿನ ದಿನ ಮತ್ತು ಪೂರ್ತಿ ವರ್ಷಕ್ಕಾಗಿ ನನ್ನ ಆಶೀರ್ವಾದಗಳು. ವಿಶ್ವಾಸದಲ್ಲಿ ಬೆಳೆಯಿರಿ, ಬೆಳಕಿನಲ್ಲಿ ಬೆಳೆಯಿರಿ, ಪ್ರಜ್ಞೆಯಲ್ಲಿ ಬೆಳೆಯಿರಿ.

*

ಹೃದಯದ ಹಿಂದಿರುವ ಒಂದು ಪರದೆ, ಮನಸ್ಸಿನ ಮೇಲಿರುವ ಒಂದು ಮುಚ್ಚಳವು ನಮ್ಮನ್ನು ದೈವೀ ಶಕ್ತಿಯಿಂದ ಬೇರ್ಪಡಿಸುತ್ತದೆ. ಪ್ರೇಮ ಮತ್ತು ಭಕ್ತಿಗಳು ಪರದೆಯನ್ನು ಹರಿದುಹಾಕುತ್ತವೆ, ಮನಸ್ಸಿನ ಪ್ರಶಾಂತತೆಯಲ್ಲಿ ಮುಚ್ಚಳವು ಕೃಶವಾಗಿ ಮಾಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/839 – (ಶ್ರೀ ಅರವಿಂದರು)**

ನಿಮ್ಮ ಹುಟ್ಟು ಹಬ್ಬದ ಸಂದರ್ಭಕ್ಕೆ ನಿಮಗೆ ನನ್ನ ಆಶೀರ್ವಾದಗಳು. ಈ ವರ್ಷವು, ಪ್ರಜ್ಞೆಯಲ್ಲಿ ಒಂದು ಮುಂದಡಿಯಾಗಲಿ ಮತ್ತು ದೈವೀ ಜೊತೆಗೆ ಒಂದಾಗುವಿಕೆಯ ಕಡೆಗೆ ಒಂದು ಹೆಜ್ಜೆಯಾಗಲಿ.

*

ಈ ವರ್ಷಕ್ಕೆ ನನ್ನ ಆಶೀರ್ವಾದಗಳು. ಈ ದಿನವು ನಿಮಗೆ ಪರಮಾತ್ಮನ ಕಡೆಗೆ ಪ್ರಜ್ಞೆಯ ಬೆಳವಣಿಗೆಯನ್ನು ತರಲಿ.

*

ನಿಮ್ಮ ಜನುಮ ದಿನಕ್ಕೆ ನನ್ನ ಆಶೀರ್ವಾದಗಳು. ಈ ವರ್ಷವು ನಿಮ್ಮ ಅಂತಃಪುರುಷ ಮತ್ತು ನಿಮ್ಮ ಬಾಹ್ಯ ಪುರುಷ ಎರಡರಲ್ಲೂ ಹೆಚ್ಚು ಹೆಚ್ಚು ಪ್ರಗತಿಯ ವರ್ಷವಾಗಲಿ.

*

ದೇವರಲ್ಲಿ ನಮ್ಮ ಭಕ್ತಿ, ಅವನ ಕಾರ್ಯದಲ್ಲಿ ನಮ್ಮ ನಿಷ್ಠೆ ಮತ್ತು ಅವನ ಇಚ್ಛೆಗೆ ನಮ್ಮ ವಿಧೇಯತೆಗಳು ಯೋಗದ ಪ್ರಥಮ ಆಧಾರಗಳಾಗಿವೆ. ಈ ಆಧಾರಗಳ ಮೇಲೆ ಉಳಿದೆಲ್ಲವುಗಳನ್ನು ಸಮರ್ಥಿಸಬಹುದು.

*

ನಿಮ್ಮ ಪ್ರಜ್ಞೆಯನ್ನು ಪ್ರಶಾಂತಗೊಳಿಸಿ ಮತ್ತು ವಿಸ್ತರಿಸಿ; ನಿಮ್ಮ ಆತ್ಮದೊಳಗೆ ಆಳಕ್ಕೆ ಪ್ರವೇಶಿಸಿ.

*

ಎಲ್ಲಾ ಅವಪ್ರಜ್ಞೆಯನ್ನು ತಿರಸ್ಕರಿಸುವುದು ಮತ್ತು ಬೆಳಕಿನಿಂದ ಬರುವ ಎಲ್ಲವನ್ನೂ ಸ್ವೀಕರಿಸುವುದು, ಶಕ್ತಿಯೊಂದಿಗಿನ ಒಂದು ಸ್ಪಷ್ಟವಾದ ಪ್ರಜ್ಞೆಯನ್ನು ಹೊಂದುವುದು ನಿಮ್ಮ ಮುಂದಿರುವ ಗುರಿಯಾಗಿರಬೇಕು.

*

ಎಲ್ಲಾ ಸಣ್ಣ ಅಡೆತಡೆಗಳು ಭೌತಿಕ ಪ್ರಜ್ಞೆಯಿಂದ ಮತ್ತು ಪ್ರಾಣಿಕ ಸ್ವಭಾವದ ಅಸ್ಪಷ್ಟ ಭಾಗಗಳಿಂದ ಕಣ್ಮರೆಯಾಗಬೇಕಾದರೆ, ನೀವು ಯಾವಾಗಲೂ ಹೆಚ್ಚು ಹೆಚ್ಚು ಜಾಗೃತವಾಗಿರಲು ಹಾತೊರೆಯಿರಿ.

*

(ದೈವೀ) ಬೆಳಕು ಬಂದಾಗ ಅದನ್ನು ಸ್ವೀಕರಿಸಲು ನಂಬಿಕೆ ಮತ್ತು ಅದಕ್ಕೆ ತೆರೆದುಕೊಳ್ಳುವುದರಿಂದ ನಿಮ್ಮನ್ನು ನೀವು ಸಿದ್ಧವಾಗಿರಿಸಿಕೊಳ್ಳಿ.

*

ಮನಸ್ಸು ಶಾಂತವಾಗಿರಲಿ ಮತ್ತು ಬೆಳಕನ್ನು ಸ್ವೀಕರಿಸಲಿ; ಪ್ರಾಣವು ಶಾಂತವಾಗಿರಲಿ ಮತ್ತು ಅದು ನೀಡುವಂಥ ಬಲವನ್ನು ಸ್ವೀಕರಿಸಲಿ.

*

ಈ ಹೊಸ ವರ್ಷವು ನಿಮ್ಮ ಚೈತ್ಯ ಪುರುಷನ ಮತ್ತು ನಿಮ್ಮ ಸ್ವಭಾವ ಮತ್ತು ನಿಮ್ಮ ಜೀವನದ ಮೇಲೆ ಅದರ ಪ್ರಭಾವದ ಬೆಳವಣಿಗೆಯಲ್ಲಿ ನಿರ್ಣಾಯಕ ಹಂತವನ್ನು ಗುರುತಿಸಲಿ.

*

ನಿಮ್ಮನ್ನು ನೀವು ಮುಕ್ತವಾಗಿರಿಸಿಕೊಳ್ಳವುದನ್ನು ಮುಂದುವರೆಸಿ ಮತ್ತು ಚೈತ್ಯ ಪ್ರಜ್ಞೆಯು ನಿಮ್ಮಲ್ಲಿ ಬೆಳೆಯುತ್ತದೆ ಮತ್ತು ಮಾನಸಿಕ ಹಾಗೂ ಪ್ರಾಣಿಕ ಪುರುಷನಲ್ಲಿ (ಅಜ್ಞಾನದ) ನೆರಳಿನ ಪ್ರಭಾವದಿಂದ ಏನಾದರು ಉಳಿದಿದ್ದರೆ ಬೆಳಕು ಅದನ್ನು ಪರಿಷ್ಕರಿಸುತ್ತದೆ ಮತ್ತು ಬೆಳಗಿಸುತ್ತದೆ.

*

ಸಂಪೂರ್ಣ ಚೈತ್ಯ ಬದಲಾವಣೆಯ ಪಥದ ಮೇಲೆ ಹೆಚ್ಚಾಗುತ್ತಿರುವ ಒಂದು ಮುನ್ನಡೆಯು ಸಾಧನೆಯಲ್ಲಿ ಬಹಳ ಮುಖ್ಯವಾದುದು, ಏಕೆಂದರೆ ಅದು ಆಧ್ಯಾತ್ಮಿಕ ಪರಿವರ್ತನೆಗೆ ನೇರ ಪಥವಾಗಿದೆ. ಕಾಯಕದಲ್ಲಿ ಭಕ್ತಿ, ಸಾಮರಸ್ಯ ಹಾಗೂ ನಿಷ್ಠುರತೆ, ಬೆಳೆಯುತ್ತಿರುವ ಆಂತರಿಕ ಗ್ರಹಿಕೆ ಮತ್ತು ಪ್ರಜ್ಞೆ, ಹೆಚ್ಚು ಮಾಸುವ ಪ್ರಾಣಿಕ ಅಹಂಕಾರದ ತೀವ್ರವಾದ ಚಲನೆಗಳು, ಇವೆಲ್ಲವೂ ಪಥದ ಮೇಲಿನ ಅತ್ಯಂತ ಪ್ರಮುಖವಾದ ಮೈಲಿಗಲ್ಲುಗಳಾಗಿವೆ.

*

ಜಡವಸ್ತು, ಬೆಳಕಿಗೆ ಕುರುಡು, ಕರೆಗೆ ಕಿವುಡ, ಭೌತಿಕ ಪ್ರಜ್ಞೆ ಮತ್ತು ಭೌತಿಕ ಜೀವನ ಇವೆರಡೂ ಅವಪ್ರಜ್ಞೆಯ ಮತ್ತು ಅದರ ಪ್ರತಿರೋಧದ ಕೊನೆಯ ಮತ್ತು ಅತ್ಯಂತ ಹಠಮಾರಿ ಆಶ್ರಯಗಳಾಗಿವೆ. ಅಲ್ಲಿ, ಬೆಳಕು ಹತ್ತಿರವಾದಷ್ಟೂ ಅದು ಅದರ ಪ್ರತಿರೋಧದ ಗೋಡೆಯನ್ನು ಎತ್ತರಿಸುತ್ತದೆ. ಅದನ್ನು ಮೀರಿದಾಗ, ನಿರ್ಣಾಯಕ ಪರಿವರ್ತನೆಯು ಮುಕ್ತ ಮಾರ್ಗವನ್ನು ಹೊಂದಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/838–43 – ಶ್ರೀ ಅರವಿಂದರು**

ಬೆಳಕಿನ ಕಡೆಗೆ ತಿರುಗುವಲ್ಲಿ ಹೆಚ್ಚು ಬೇಡಿಕೆಯಿರುವಂಥದ್ದು ಪರಿಶ್ರಮವಾಗಿದೆ. ಬೆಳಕು, ನಾವು ಅಂದುಕೊಂಡದ್ದಕ್ಕಿಂತ ನಮಗೆ ಹತ್ತಿರದಲ್ಲಿದೆ ಮತ್ತು ಯಾವುದೇ ಸಮಯದಲ್ಲಿ ಅದರ ಮುಹೂರ್ತ ಬರಬಹುದು.

*

ಹೃದಯದಿಂದ ಅಹಂಕಾರದವೆಂಬ ಗುಣವನ್ನು ತೊಡೆದುಹಾಕು ಮತ್ತು ಶ್ರೀಮಾತೆಯವರ ಪ್ರೇಮವು ಅದರ ಸ್ಥಾನವನ್ನು ತುಂಬಲಿಲಿ. ಮನಸ್ಸಿನಿಂದ ಎಲ್ಲ ಮಾನಸಿಕ ಒತ್ತಡವನ್ನು ನಿನ್ನ ವೈಯಕ್ತಿಕ ಕಲ್ಪನೆಗಳ ಹಾಗೂ ತೀರ್ಮಾನಗಳ ಮೇಲೆ ಬಿಸಾಕು, ಆಗ ಶ್ರೀಮಾತೆಯರನ್ನು ಅರ್ಥಮಾಡಿಕೊಳ್ಳುವ ವಿವೇಕವನ್ನು ಹೊಂದುವಿ. ಸ್ವಯಂ ಸಂಕಲ್ಪದ ಭ್ರಾಂತಿ, ಕ್ರಿಯೆಯಲ್ಲಿ ಅಹಂಕಾರದ ಪ್ರಚೋದನೆ, ವೈಯಕ್ತಿಕ ಅಧಿಕಾರದ ಮೋಹ, ವೈಯಕ್ತಿಕ ಆದ್ಯತೆಗೆ ಮಮತೆ ಅಲ್ಲಿ ಇಲ್ಲದಿರಲಿ, ಆಗ ಶ್ರೀಮಾತೆಯವರ ಬಲವು ನಿಮ್ಮಲ್ಲಿ ಸ್ಪಷ್ಟವಾಗಿ ಕಾರ್ಯವೆಸಗಲು ಸಾಧ್ಯವಾಗುತ್ತದೆ ಮತ್ತು ನೀವು ಕೇಳುವಂಥ ಅಕ್ಷಯವಾದ ಶಕ್ತಿಯನ್ನು ಪಡೆದುಕೊಳ್ಳುವಿರಿ ಮತ್ತು ನಿಮ್ಮ ಸೇವೆಯು ಪರಿಪೂರ್ಣವಾಗುವುದು.

*

ಸ್ವಾಮಿ ನಿಷ್ಠೆ, ಭಕ್ತಿ, ಸ್ವಯಂ–ಸಮರ್ಪಣೆ, ನಿಸ್ವಾರ್ಥ ಕಾಯಕ ಮತ್ತು ಸೇವೆ, ನಿರಂತರ ಆಕಾಂಕ್ಷೆ, ಇವೆಲ್ಲವುಗಳೂ ಅತ್ಯಂತ ಸರಳ ಹಾಗೂ ಅತ್ಯಂತ ಪರಿಣಾಮಕಾರಿ ಸಾಧನಗಳಾಗಿವೆ. ಇವುಗಳನ್ನು ಬಳಸಿ ಆತ್ಮವು ಪರಮಾತ್ಮನ ನಿರಂತರ ಉಪಸ್ಥಿತಿಯಲ್ಲಿರುವಂತೆ ಅದನ್ನು ಸಿದ್ಧಗೊಳಿಸಬಹುದು ಮತ್ತು ಯೋಗ್ಯವಾಗಿಸಬಹುದು.

*

ನಮ್ಮೊಳಗಿರುವ ಚೈತ್ಯ ಅನಲವನ್ನು, ಹಂಬಲದ ಅಗ್ನಿ, ನಿವೇದನೆ ಹಾಗೂ ಸ್ವ–ಸಮರ್ಪಣೆಯನ್ನು ಯಾವಾಗಲೂ ಬೆಳಗಲು ಮತ್ತು ಪ್ರಜ್ವಲಿಸುತ್ತ ಇಡಲು, – ಪ್ರಾಣಿಕ ಬಯಕೆ ಮತ್ತು ಅಹಂಕಾರದ ಪ್ರತಿಕ್ರಿಯೆಗಳ ಹಸಿಯಾದ ಒಳಗೊಳಗೇ ಹೊಗೆಯಾಡುವ ದಿಮ್ಮಿಗಳಿಂದ ಅದನ್ನು ನಿಗ್ರಹಿಸಬಾರದು. ಅದು ಶಾಶ್ವತ ಹಾಗೂ ನಿರಂತರವಾದಾಗ, ಆಧ್ಯಾತ್ಮಿಕ ಪರಿವರ್ತನೆಯನ್ನು ಕೆಳಗೆ ತರಲು ಸುಲಭವಾಗಬಹುದು.

*

**ಸಾಧಕನಿಗಾಗಿ ಪ್ರಾರ್ಥನೆಗಳು ಮತ್ತು ಅನ್ಯ ಸಂದೇಶಗಳು**

ನನ್ನನ್ನು ಕೋಪ, ಕೃತಘ್ನತೆ ಮತ್ತು ಒಣ ಪ್ರತಿಷ್ಠೆಯಿಂದ ಪಾರುಮಾಡಿ. ನನ್ನನ್ನು ಸಮಾಧಾನಗೊಳಿಸಿ, ವಿನೀತನನ್ನಾಗಿ ಮತ್ತು ಸಂಭಾವಿತನನ್ನಾಗಿ ಮಾಡಿ. ನಾನು ನನ್ನ ಕಾರ್ಯದಲ್ಲಿ ಮತ್ತು ನನ್ನೆಲ್ಲ ಕ್ರಿಯೆಗಳಲ್ಲಿ ನಿಮ್ಮ ದೈವೀ ಅಂಕೆಯನ್ನು ಅನುಭವಿಸುವಂತಾಗಲಿ.

*

ಸ್ವ–ಬಯಕೆಯಿಂದ ಮತ್ತು ಸ್ವ–ಪ್ರತಿಪಾದನೆಯಿಂದ ಶುದ್ಧಗೊಳ್ಳಲೆಂದು ನಾನು ಶ್ರೀಮಾತೆಯವರಲ್ಲಿ ಪ್ರಾರ್ಥಿಸುತ್ತೇನೆ. ಹೀಗೆ ಮಾಡುವುದರಿಂದ ನಾನು ಅವರಿಗೆ ನಮ್ರನಾಗುವೆ ಹಾಗೂ ವಿಧೇಯನಾಗುವೆ ಮತ್ತು ಅವರಿಗೆ ಶರಣಾಗತನಾಗಿ ಹಾಗೂ ನಾನು ಮಾಡುವ ಎಲ್ಲ ಕ್ರಿಯೆಯಲ್ಲಿ ಅವರ ಅನುಗ್ರಹದಿಂದ ಮಾರ್ಗದರ್ಶಿಸಲ್ಪಟ್ಟು ಅವರ ಕಾರ್ಯಕ್ಕೆ ಒಂದು ಯೋಗ್ಯ ಸಾಧನವಾಗುವೆ.

*

ನಾನು ಇನ್ನು ಮುಂದೆ ಒಂದು ದೃಢ ಸಂಕಲ್ಪದಿಂದ ನನ್ನಿಂದ ನನ್ನ ತಪ್ಪು ಹಾಗೂ ದೋಷಗಳನ್ನು ದೂರ ಎಸೆಯುವಂತಾಗಲಿ ಮತ್ತು ನಾನು ಸಂಪೂರ್ಣವಾಗಿ ಯಶಸ್ವಿಯಾಗುವವರೆಗೆ ಶಕ್ತಿ ಮತ್ತು ಪರಿಶ್ರಮದಿಂದ ಅದನ್ನು ಮಾಡುವಂತಾಗಲಿ. ನಾನು ಎಲ್ಲಾ ದುರಹಂಕಾರ, ಜಗಳಗಂಟಿತನ, ಸ್ವಾಭಿಮಾನ ಮತ್ತು ಒಣಹೆಮ್ಮೆ, ಅವಿಧೇಯತೆ ಮತ್ತು ಶ್ರೀಮಾತೆಯವರ ವಿರುದ್ಧ ಪ್ರತಿಭಟನೆ, ಇತರರ ವಿರುದ್ಧ ಹಗೆತನ ಮತ್ತು ಕಹಿ ಭಾವನೆ, ಮಾತು ಹಾಗೂ ನಡತೆಯ ಹಿಂಸಾಚಾರ, ಅಸತ್ಯತೆ, ಸ್ವಯಂ–ಪ್ರತಿಪಾದನೆ ಹಾಗೂ ತಗಾದೆ, ಅಸಮಾಧಾನ ಹಾಗೂ ಗೊಣಗಾಟ, ಎಲ್ಲವುಗಳನ್ನೂ ತೊಡೆದು ಹಾಕುವಂತಾಗಲಿ. ನಾನು ಎಲ್ಲರಿಗೂ ಸ್ನೇಹದಿಂದ ಮತ್ತು ಯಾರ ವಿರುದ್ಧವೂ ದ್ವೇಷವಿಲ್ಲದೆ ಇರುವಂತಾಗಲಿ. ನಾನು ಶ್ರೀಮಾತೆಯವರ ನಿಜವಾದ ಮಗುವಾಗಲಿ.

*

ಜಯದ ಖಚಿತತೆಯಿಂದ ಜನಿಸಿದ ಶಾಂತಿಯು ನಿಮ್ಮಲ್ಲಿ ಬೆಳೆಯುವಂತೆ ನೀವು ಮಾಡಬೇಕು.

ಬೆಳಕಿನ ಜಯದಲ್ಲಿ ಅಚಲ ನಂಬಿಕೆಯನ್ನಿಡಿ ಮತ್ತು ತಮ್ಮದೇ ಆದ ರೂಪಾಂತರಣಕ್ಕೆ ಎದುರಾಗುವ ಜಡ ವಸ್ತುವಿನ ಮತ್ತು ಮಾನವ ವ್ಯಕ್ತಿತ್ವದ ಪ್ರತಿರೋಧವನ್ನು ಶಾಂತ ಸಮಚಿತ್ತತೆಯೊಂದಿಗೆ ಎದುರಿಸಿ.

*

ನಮ್ಮ ಆಶೀರ್ವಾದಗಳು ಯಾವಾಗಲೂ ನಿಮ್ಮೊಂದಿಗಿವೆ. ತಾಳ್ಮೆಯಿಂದಿರಿ ಮತ್ತು ಪೂರ್ಣ ವಿಶ್ವಾಸವನ್ನು ಹೊಂದಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/843–44**

**ಶಿಷ್ಯರಿಗೆ ಶ್ರೀಮಾತೆಯವರ ಹುಟ್ಟುಹಬ್ಬದ ಸಂದೇಶಗಳು**

ನನ್ನ ಪ್ರೀತಿಯ ಮಗು, ನನ್ನ ಪ್ರೀತಿ ಮತ್ತು ಆಶೀರ್ವಾದಗಳು ವರ್ಷಪೂರ್ತಿ ನಿನ್ನೊಂದಿಗಿವೆ ಇರುವವು. ನಿನ್ನ ದೈವೀ ಸಾಕ್ಷಾತ್ಕಾರದ ಉದ್ದೇಶದೆಡೆಗಿನ ಮಾರ್ಗದಲ್ಲಿ ಪ್ರಗತಿ ಹೊಂದಲು ಅವುಗಳು ನಿನಗೆ ಸಹಾಯಮಾಡಲಿ.

*

ಈ ವರ್ಷವು ಪ್ರಗತಿಯ ಮತ್ತು ಪರಿವರ್ತನೆಯ ವರ್ಷವಾಗಲಿ – ದೈವೀ ಸಾಕ್ಷಾತ್ಕಾರದೆಡೆಗೆ ನಿನ್ನನ್ನು ಸಾಗಿಸುವಂಥ ಒಂದು ಹೆಜ್ಜೆಯಾಗಲಿ.

*

ಈ ವರ್ಷವು ನಿನಗೆ, (ಪರಮಾತ್ಮನಿಗೆ) ಸಂಪೂರ್ಣವಾಗಿ ತೆರೆದುಕೊಳ್ಳುವ ಮತ್ತು ಎಲ್ಲ ಮಿತಿಗಳನ್ನು ಜಯಿಸುವ ವರ್ಷವಾಗಲಿ.

*

ಈ ವರ್ಷವು ನಿನಗೆ ಸತ್ಯದ ಅನುಭವವನ್ನು ತರಲಿ – ಯಾವುದೇ ಅಂಧಕಾರವು ಮಂಕಾಗಿಸದಂಥ ಒಂದು ನಂಬಿಕೆಯನ್ನು ತರಲಿ.

*

ಆಚರಣೆಯ ಒಂದು ಬೀಜವು ಸಿದ್ಧಾಂತಗಳ ಬೆಟ್ಟಕ್ಕೆ ಸಮಾನ.

"ಪ್ರಭುವೆ, ನನ್ನ ಹುಟ್ಟಿನ ಈ ವಾರ್ಷಿಕೋತ್ಸವದ ದಿನದಂದು, ನನ್ನಲ್ಲಾಗುವ ಬದಲಾವಣೆಗಳನ್ನು ತಿಳಿದುಕೊಳ್ಳುವ ಶಕ್ತಿಯು ನನ್ನನ್ನು ಸಮಗ್ರವಾಗಿ ಪರಿವರ್ತಿಸುವ ಶಕ್ತಿಯಾಗಿ ಪರಿವರ್ತನೆಯಾಗಲೆಂದು ಅನುಗ್ರಹಿಸು."

*

ಹುಟ್ಟು ಹಬ್ಬದ ಶುಭಾಶಯಗಳು!

ಒಂದು ಹೊಸ ಹುಟ್ಟು, ಎಲ್ಲ ಸಣ್ಣ ವೈಯಕ್ತಿಕ ಪ್ರತಿಕ್ರಿಯೆಗಳ ಮೇಲೆ ನೀನಿರಬಹುದಾದಂಥ ಒಂದು ಹೊಸ ಪ್ರಜ್ಞೆಯಲ್ಲಿ ಹೊಸ ಹುಟ್ಟು, ಏಕೆಂದರೆ ನಿನ್ನ ಹೃದಯದಲ್ಲಿ ನೀನು ನಿರಂತರವಾಗಿ ದೈವೀ ಉಪಸ್ಥಿತಿಯನ್ನು ಅನುಭವಿಸುವಿ; ಎಲ್ಲ ಅಡ್ಡಿಗಳನ್ನು, ಎಲ್ಲ ಅಮುಖ್ಯವಾದವುಗಳನ್ನು ಮತ್ತು ಎಲ್ಲ ತೊಂದರೆಗಳನ್ನು ಎದುರಿಸುವಂಥ ಶಕ್ತಿಯನ್ನು ಅದು ನಿನಗೆ ನೀಡಲಿ.

ನನ್ನ ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ.

*

ಈ ದಿನದಂದು, ಸತ್ಯದ ಜಯದೆಡೆಗೆ ಒಂದು ನಿರ್ಣಾಯಕ ಹೆಜ್ಜೆಯನ್ನು ನಾವು ತೆಗೆದುಕೊಳ್ಳುವಂತಾಗಲಿ.

ಸರಿದು ಹೋಗುವಂಥ ಪ್ರತಿ ವರ್ಷವೂ ಅವಶ್ಯವಾದ ಒಂದು ಹೊಸ ಗೆಲುವಾಗಿರತಕ್ಕದ್ದು.

ಈ ವರ್ಷ ಆತನ ವಿಜಯದ ಕಡೆಗೆ ಒಂದು ನಿರ್ಣಾಯಕ ಹೆಜ್ಜೆಯನ್ನು ತೆಗೆದುಕೊಳ್ಳುವಂತಾಗಲಿ.

*

ನಿನಗಾಗಿ ಪ್ರಾರಂಭವಾಗುವ ಈ ಹೊಸ ವರ್ಷದೊಂದಿಗೆ, ನಿನ್ನ ಪ್ರಜ್ಞೆಯಿಂದ ಮತ್ತು ವಿರೂಪಗೊಳಿಸುವ, ಕುಂದಿಸುವ, ಮಂಕಾಗಿಸುವ ಮತ್ತು ಕೊನೆಯಲ್ಲಿ ನಿನ್ನ ಪ್ರಗತಿಯನ್ನು ನಿಲ್ಲಿಸುವಂಥ ಮತ್ತು ನಿನ್ನ ಆರೋಗ್ಯವನ್ನು ಕೆಡಿಸುವಂಥ ಎಲ್ಲ ಕ್ರಿಯೆಯನ್ನು ಹೊರ ಹಾಕುವಂಥ ಒಂದು ಹೊಸದಾದ ಸಂಕಲ್ಪದೊಂದಿಗೆ ನೀನು ಒಂದು ಹೊಸ ಜೀವನವನ್ನು ಪ್ರಾರಂಭಿಸತಕ್ಕದ್ದು.

ಆಂತರಿಕ ಬೆಳವಣಿಗೆ ಮತ್ತು ಶುದ್ಧೀಕರಣಕ್ಕಾಗಿ ನಿನ್ನ ಪ್ರಯತ್ನದಲ್ಲಿ, ನನ್ನ ಬಲ ಮತ್ತು ನನ್ನ ಆಶೀರ್ವಾದದಿಂದ ನೀನು ಪೋಷಿಸಲ್ಪಡುವ ಮತ್ತು ಉಪಕೃತಗೊಳ್ಳುವ ಬಗ್ಗೆ ಖಚಿತವಾಗಿರಬಹುದು.

*

ಹುಟ್ಟುಹಬ್ಬದ ಶುಭಾಶಯಗಳು!

ಈ ಹೊಸ ವರ್ಷವು, ಕೆಲಸದ ಮತ್ತು ಸಮರ್ಪಣೆಯ ಪರಿಪೂರ್ಣತೆಯಲ್ಲಿ, ಪ್ರಾಮಾಣಿಕತೆ, ಸಾಮರ್ಥ್ಯ, ಮತ್ತು ಶಾಂತಿಯಲ್ಲಿ ನಿಮಗೆ ಪ್ರಗತಿಯ ವರ್ಷವಾಗಲಿ. ನನ್ನ ಆಶೀರ್ವಾದಗಳೊಂದಿಗೆ.

*

ಹುಟ್ಟುಹಬ್ಬದ ಶುಭಾಶಯಗಳು!

ಈ ಹೊಸ ವರ್ಷದಲ್ಲಿ ನೀನು ಪರಿಪೂರ್ಣ ಸಮರ್ಪಣೆಯನ್ನು ಮತ್ತು ಪ್ರೇಮ ಹಾಗೂ ಶಾಂತಿಯಲ್ಲಿ ಸಮಗ್ರ ಪ್ರಗತಿಯನ್ನು ಸಾಧಿಸಲೆಂದು ನನ್ನ ಆಶೀರ್ವಾದಗಳು.

*

ಹುಟ್ಟುಹಬ್ಬದ ಶುಭಾಶಯಗಳು!

ಮೌನ ಸಹನೆಯಲ್ಲಿ, ಅನಂತ ಪ್ರೇಮದ ನೆರವಿನೊಂದಿಗೆ ಗೆಲುವಿನೆಡೆಗೆ ಒಂದು ಹೆಜ್ಜೆ ಮುಂದೆ.

*

ಹುಟ್ಟುಹಬ್ಬದ ಶುಭಾಶಯಗಳು!

ಶಾಂತಿ, ಪ್ರೇಮ ಮತ್ತು ಆನಂದದಲ್ಲಿ ದೈವೀ ಸಾಕ್ಷಾತ್ಕರದೆಡೆಗೆ ಮುನ್ನಡೆಸುವ ಬೆಳಕಿನ ಪಥದ ಮೇಲೆ ಇನ್ನೊಂದು ಹೆಜ್ಜೆಯನ್ನು ಮೂಡಿಸಲು (ಶುಭಾಶಯಗಳು).

*

ಹುಟ್ಟುಹಬ್ಬದ ಶುಭಾಶಯಗಳು!

ನನ್ನ ಪ್ರೀತಿಯೊಂದಿಗೆ ಸಹಯೋಗದ ಜೀವನಕ್ಕಾಗಿ ಮತ್ತು ಶಾಂತಿ ಹಾಗೂ ಪ್ರೀತಿಯಲ್ಲಿ ಈ ಸಂತೋಷದ ಸಹಯೋಗದ ದೀರ್ಘ ಕಾಲದ ಮುಂದುವರಿಕೆಗೆ ನನ್ನ ಆಶೀರ್ವಾದಗಳು.

*

ಹುಟ್ಟುಹಬ್ಬದ ಶುಭಾಶಯಗಳು!

ಪರಿವರ್ತನೆಗಾಗಿ ನನ್ನ ಭರವಸೆ ಮತ್ತು ನನ್ನ ಆಶೀರ್ವಾದಗಳು, ಪ್ರೀತಿಯೊಂದಿಗೆ. ಸಾಕ್ಷಾತ್ಕಾರದೆಡೆಗೆ ಮುನ್ನಡೆಯಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/198–201**

ನನ್ನ ಕಂದ, ನನ್ನ ಪ್ರೀತಿ ಮತ್ತು ಆಶೀರ್ವಾದಗಳು ವರ್ಷಪೂರ್ತಿ ನಿನ್ನೊಂದಿಗಿರುವವು. ದೈವೀ ಉದ್ದೇಶದೆಡೆಗಿನ ಪಥದಲ್ಲಿ ಪ್ರಗತಿಯನ್ನು ಸಾಧಿಸಲು ಅವುಗಳು ನಿನಗೆ ಸಹಾಯ ಮಾಡಲಿ

*

ಈ ವರ್ಷವು ಪ್ರಗತಿಯ ಮತ್ತು ಪರಿವರ್ತನೆಯ ವರ್ಷವಾಗಲಿ – ದೈವೀ ಸಾಕ್ಷಾತ್ಕಾರದೆಡೆಗೆ ಮುನ್ನಡೆಸುವ ಇನ್ನೊಂದು ಹೆಜ್ಜೆಯಾಗಲಿ.

*

ಈ ವರ್ಷವು ನಿನಗೆ, (ಪರಮಾತ್ಮನಿಗೆ) ಸಂಪೂರ್ಣವಾಗಿ ತೆರೆದುಕೊಳ್ಳುವ ಮತ್ತು ಎಲ್ಲ ಮಿತಿಗಳನ್ನು ಜಯಿಸುವ ವರ್ಷವಾಗಲಿ.

*

ಈ ವರ್ಷವು ನಿನಗೆ ಸತ್ಯದ ಅನುಭವವನ್ನು ತರಲಿ – ಯಾವುದೇ ಅಂಧಕಾರವು ಮಂಕಾಗಿಸದಂಥ ಒಂದು ನಂಬಿಕೆಯನ್ನು ತರಲಿ.

*

ನಿನ್ನ ಹುಟ್ಟಿನ ಈ ದಿನವು, ನಿನ್ನನ್ನು ನೀನು ಇನ್ನೂ ಹೆಚ್ಚು, ಇನ್ನೂ ಉತ್ತಮವಾಗಿ ದೇವರಿಗೆ ಸಮರ್ಪಿಸಿಕೊಳ್ಳುವ ಸಂದರ್ಭವಾಗಲಿ. ನಿನ್ನ ಸಮರ್ಪಣೆಯು ಹೆಚ್ಚು ಪೂರ್ಣವಾಗಲಿ, ನಿನ್ನ ಭಕ್ತಿಯು ಹೆಚ್ಚು ಪ್ರಖರವಾಗಲಿ, ನಿನ್ನ ಹಂಬಲವು ಹೆಚ್ಚು ತೀವ್ರವಾಗಲಿ.

ಹೊಸ ಬೆಳಕಿಗೆ ನಿನ್ನನ್ನು ನೀನು ತೆರೆದುಕೊ ಮತ್ತು ಆ ಬೆಳಕಿನ ಪಥದ ಮೇಲೆ ಹರ್ಷದಿಂದ ಮುಂದೆ ಸಾಗು.

ನಿನ್ನ ಹುಟ್ಟಿನ ಈ ದಿನವು ವ್ಯರ್ಥವಾಗದಿರಲೆಂದು ಸ್ಥಿರ ಸಂಕಲ್ಪ ಮಾಡು.

*

**ಆಚರಣೆಯ ಒಂದು ಬೀಜವು ಸಿದ್ಧಾಂತಗಳ ಬೆಟ್ಟಕ್ಕೆ ಸಮಾನ**

"ಪ್ರಭುವೆ, ನನ್ನ ಹುಟ್ಟಿನ ಈ ವಾರ್ಷಿಕೋತ್ಸವದ ದಿನದಂದು, ನನ್ನಲ್ಲಾಗುವ ಬದಲಾವಣೆಗಳನ್ನು ತಿಳಿದುಕೊಳ್ಳುವ ಶಕ್ತಿಯು ನನ್ನನ್ನು ಸಮಗ್ರವಾಗಿ ಪರಿವರ್ತಿಸುವ ಶಕ್ತಿಯಾಗಿ ಪರಿವರ್ತನೆಯಾಗಲೆಂದು ಅನುಗ್ರಹಿಸು."

*

ಹುಟ್ಟು ಹಬ್ಬದ ಶುಭಾಶಯಗಳು!

ಒಂದು ಹೊಸ ಹುಟ್ಟು, ಎಲ್ಲ ಸಣ್ಣ ವೈಯಕ್ತಿಕ ಪ್ರತಿಕ್ರಿಯೆಗಳ ಮೇಲೆ ನೀನಿರಬಹುದಾದಂಥ ಒಂದು ಹೊಸ ಪ್ರಜ್ಞೆಯಲ್ಲಿ ಹೊಸ ಹುಟ್ಟು, ಏಕೆಂದರೆ ನಿನ್ನ ಹೃದಯದಲ್ಲಿ ನೀನು ನಿರಂತರವಾಗಿ ದೈವೀ ಉಪಸ್ಥಿತಿಯನ್ನು ಅನುಭವಿಸುವಿ; ಎಲ್ಲ ಅಡ್ಡಿಗಳನ್ನು, ಎಲ್ಲ ಅಮುಖ್ಯವಾದವುಗಳನ್ನು ಮತ್ತು ಎಲ್ಲ ತೊಂದರೆಗಳನ್ನು ಎದುರಿಸುವಂಥ ಶಕ್ತಿಯನ್ನು ಅದು ನಿನಗೆ ನೀಡಲಿ.

ನನ್ನ ಪ್ರೀತಿ ಮತ್ತು ಆಶೀರ್ವಾದಗಳೊಂದಿಗೆ.

*

ಈ ದಿನದಂದು, ಸತ್ಯದ ಜಯದೆಡೆಗೆ ಒಂದು ನಿರ್ಣಾಯಕ ಹೆಜ್ಜೆಯನ್ನು ನಾವು ತೆಗೆದುಕೊಳ್ಳುವಂತಾಗಲಿ.

ಸರಿದು ಹೋಗುವಂಥ ಪ್ರತಿ ವರ್ಷವೂ ಅವಶ್ಯವಾದ ಒಂದು ಹೊಸ ಗೆಲುವಾಗಿರತಕ್ಕದ್ದು.

ಈ ವರ್ಷ ಆತನ ವಿಜಯದ ಕಡೆಗೆ ಒಂದು ನಿರ್ಣಾಯಕ ಹೆಜ್ಜೆಯನ್ನು ತೆಗೆದುಕೊಳ್ಳುವಂತಾಗಲಿ.

*

ಹುಟ್ಟುಹಬ್ಬದ ಶುಭಾಶಯಗಳು!

ಈ ಹೊಸ ವರ್ಷವು, ಕೆಲಸದ ಮತ್ತು ಸಮರ್ಪಣೆಯ ಪರಿಪೂರ್ಣತೆಯಲ್ಲಿ, ಪ್ರಾಮಾಣಿಕತೆ, ಸಾಮರ್ಥ್ಯ, ಮತ್ತು ಶಾಂತಿಯಲ್ಲಿ ನಿಮಗೆ ಪ್ರಗತಿಯ ವರ್ಷವಾಗಲಿ.

ನನ್ನ ಆಶೀರ್ವಾದಗಳೊಂದಿಗೆ.

*

ಹುಟ್ಟುಹಬ್ಬದ ಶುಭಾಶಯಗಳು!

ಈ ಹೊಸ ವರ್ಷದಲ್ಲಿ ನೀನು ಪರಿಪೂರ್ಣ ಸಮರ್ಪಣೆಯನ್ನು ಮತ್ತು ಪ್ರೇಮ ಹಾಗೂ ಶಾಂತಿಯಲ್ಲಿ ಸಮಗ್ರ ಪ್ರಗತಿಯನ್ನು ಸಾಧಿಸಲೆಂದು ನನ್ನ ಆಶೀರ್ವಾದಗಳು.

*

ಹುಟ್ಟುಹಬ್ಬದ ಶುಭಾಶಯಗಳು!

ಮೌನ ಸಹನೆಯಲ್ಲಿ, ಅನಂತ ಪ್ರೇಮದ ನೆರವಿನೊಂದಿಗೆ ಗೆಲುವಿನೆಡೆಗೆ ಒಂದು ಹೆಜ್ಜೆ ಮುಂದೆ.

*

ಹುಟ್ಟುಹಬ್ಬದ ಶುಭಾಶಯಗಳು!

ಶಾಂತಿ, ಪ್ರೇಮ ಮತ್ತು ಆನಂದದಲ್ಲಿ ದೈವೀ ಸಾಕ್ಷಾತ್ಕರದೆಡೆಗೆ ಮುನ್ನಡೆಸುವ ಬೆಳಕಿನ ಪಥದ ಮೇಲೆ ಇನ್ನೊಂದು ಹೆಜ್ಜೆಯನ್ನು ಮೂಡಿಸಲು ಶುಭಾಶಯಗಳು.

*

ಹುಟ್ಟುಹಬ್ಬದ ಶುಭಾಶಯಗಳು!

ನನ್ನ ಪ್ರೀತಿಯೊಂದಿಗೆ ಸಹಯೋಗದ ಜೀವನಕ್ಕಾಗಿ ಮತ್ತು ಶಾಂತಿ ಹಾಗೂ ಪ್ರೀತಿಯಲ್ಲಿ ಈ ಸಂತೋಷದ ಸಹಯೋಗದ ದೀರ್ಘ ಕಾಲದ ಮುಂದುವರಿಕೆಗೆ ನನ್ನ ಆಶೀರ್ವಾದಗಳು.

*

ಹುಟ್ಟುಹಬ್ಬದ ಶುಭಾಶಯಗಳು!

ಪರಿವರ್ತನೆಗಾಗಿ ನನ್ನ ಭರವಸೆ ಮತ್ತು ನನ್ನ ಆಶೀರ್ವಾದಗಳು, ಪ್ರೀತಿಯೊಂದಿಗೆ. ಸಾಕ್ಷಾತ್ಕಾರದೆಡೆಗೆ ಮುನ್ನಡೆಯಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/198–201 – ಶ್ರೀಮಾತೆ**

*ಈ ಪ್ರಪಂಚದಲ್ಲಿ ಯಾವಾಗಲೂ ಎಲ್ಲವೂ ಮನುಷ್ಯನನ್ನು ವಿಫಲಗೊಳಿಸುತ್ತದೆ ಎಂಬುದು ಜೀವನದ ಪಾಠವಾಗಿದೆ – ಅವನು ಸಂಪೂರ್ಣವಾಗಿ ದೇವರೆಡೆಗೆ ತಿರುಗಿದರೆ ಮಾತ್ರ ದೇವರು ಅವನನ್ನು ವಿಫಲಗೊಳಿಸುವುದಿಲ್ಲ. ನಿಮ್ಮಲ್ಲಿ ಕೆಟ್ಟದ್ದು ಏನೋ ಇದೆ ಎಂಬ ಕಾರಣಕ್ಕಾಗಿ ನಿಮ್ಮ ಮೇಲೆ ಹೊಡೆತಗಳು ಬೀಳುವುದಿಲ್ಲ – ಹೊಡೆತಗಳು ಎಲ್ಲಾ ಮನುಷ್ಯರ ಮೇಲೆ ಬೀಳುತ್ತವೆ, ಏಕೆಂದರೆ ಅವರು ಉಳಿಯಲು ಸಾಧ್ಯವಾಗದ ವಸ್ತುಗಳ ಬಯಕೆಯಿಂದ ತುಂಬಿರುತ್ತಾರೆ ಮತ್ತು ಅವುಗಳನ್ನು ಕಳೆದುಕೊಳ್ಳುತ್ತಾರೆ, ಅಥವಾ ಅವರು ಅದನ್ನು ಪಡೆದರೂ ಅದು ನಿರಾಶೆಯನ್ನು ತರುತ್ತದೆ ಮತ್ತು ಅವರನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಜೀವನಲ್ಲಿನ ಏಕ ಮಾತ್ರ ಸತ್ಯವೆಂದರೆ ದೇವರೆಡೆಗೆ ಹೊರಳುವುದು.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/844 – ಶ್ರೀ ಅರವಿಂದರು**

# ಸ್ಮರಣೆಗಳು ಮತ್ತು ಉಪಾಖ್ಯಾನಗಳು

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**



ನಿಜಕ್ಕೂ ಜೀವನದಲ್ಲಿಯ ಒಂದು ಸದವಕಾಶವಾಗಿದೆ ಈ ದಿನ.
ನಾವು ಎಷ್ಟು ತೆರೆದುಕೊಂಡು ಗ್ರಹಿಸಬಲ್ಲೆವೆಂದರೆ
ನೀಡಿದುದೆಲ್ಲವನ್ನೂ ಸಮೀಕರಿಸಬಲ್ಲೆವು.

**ಪ್ರಿಯ ಶ್ರೀಮಾತೆ – ಪ್ರಕಾಶಮಾನವಾದ ಟಿಪ್ಪಣಿಗಳು, ಪುಟ 108**

## ಶಿಷ್ಯರಿಗೆ ಜನ್ಮದಿನದ ಸಂದೇಶಗಳು

ದೊರೈಸ್ವಾಮಿಯವರಿಗೆ

ನಿನ್ನ ಹೃದಯದಲ್ಲಿ ನವ ಜನ್ಮವು ಪ್ರಕಟವಾಗಲಿ ಮತ್ತು ಶಾಂತತೆ ಹಾಗು ಸಂತಸದಲ್ಲಿ ತೇಜೋಮಯವಾಗಲಿ. ಜೀವ, ಭಾವನೆ, ಸಂಕಲ್ಪ, ದರ್ಶನ, ಮನಸ್ಸು, ನಿನ್ನ ಸತ್ತೆಯ ಎಲ್ಲಾ ಭಾಗಗಳನ್ನು ತನ್ನ ಹತೋಟಿಗೆ ತೆಗೆದುಕೊಳ್ಳಲಿ. ನಿನ್ನ

ಜೀವನದಲ್ಲಿನ ಪ್ರತಿಯೊಂದು ದಿನಾಂಕವು ಅದರ ವೃದ್ಧಿ ಮತ್ತು ಹೆಚ್ಚು ಪೂರ್ಣತೆಯ ದಿನಾಂಕವಾಗಲಿ. ನಿನ್ನಲ್ಲಿಯ ಸಮಸ್ತವೂ ಮಾತೆಯ ಮಗುವಾಗುವವರೆಗೂ ಹೀಗೆ ಮುಂದುವರೆಯಲಿ. ಬೆಳಕು, ಶಕ್ತಿ ಮತ್ತು ಸಾನ್ನಿಧ್ಯವು ನಿನ್ನನ್ನು ಆವರಿಸಿ ಪೋಷಿಸಲಿ, ಪ್ರೀತಿಸಲಿ ಮತ್ತು ಆದರಿಸಲಿ, ನಿನ್ನ ಆಂತರಿಕ ಮತ್ತು ಬಾಹ್ಯ ಅಸ್ತಿತ್ವವು ಒಂದೇ ಚಲನೆ ಮತ್ತು ಅದರ ಶಾಂತಿ, ಬಲ ಮತ್ತು ಆನಂದವಾಗುವವರೆಗೂ ಹೀಗೆ ಮುಂದುವರಿಯಲಿ.

*

ಕಾಂತಿಲಾಲರಿಗೆ

ಯಾವಾಗಲೂ ಪರಮೋತ್ತಮ ಮತ್ತು ದಿವ್ಯಮಾತೆಯ ಕಣ್ಗಾವಲಿನಲ್ಲಿ ಇರುವಂತೆ ಜೀವಿಸು. ದಿವ್ಯ ಸನ್ನಿಧಿ ಅಂಗೀಕರಿಸದಿರುವಂತಹುದೇನನ್ನೂ ಮಾಡಬೇಡ, ಏನೂ ಯೋಚಿಸಬೇಡ ಮತ್ತು ಅಂತಹ ಭಾವನೆಗಳನ್ನು ಸಹ ತಿರಸ್ಕರಿಸು.

*

ಕೆ.ಕೆ. ಕೃಷ್ಣರಾಯರಿಗೆ

ಚೇತನದ ಮೇಲ್ಮಟ್ಟಕ್ಕಿಂತಲೂ ಕೆಳಗೆ ಆಳವಾಗಿ ಹೋಗು. ಏಕೆಂದರೆ ಅಲ್ಲಿ ನೀನು ಜೀವದ ಗಂಭೀರ ಸಮಾಧಾನ, ಪ್ರಕಾಶಮಾನವಾದ ಮೌನ, ಸ್ವಾತಂತ್ರ್ಯ ಮತ್ತು ಆಧ್ಯಾತ್ಮಿಕ ವಿಸ್ತಾರತೆಗಳನ್ನು ಕಾಣುವೆ. ಅಲ್ಲಿ ನೀನು ದಿವ್ಯದ ನೇರವಾದ ಸ್ಪರ್ಶ ಮತ್ತು ಸಾನ್ನಿಧ್ಯವನ್ನೂ ಪಡೆಯುವೆ.

*

ಮದನಲಾಲರಿಗೆ ನನ್ನ ಆಶೀರ್ವಾದಗಳು

ಹೃದಯದಿಂದ ಅಹಂಕಾರದ ಗುರುತನ್ನು ಅಳಿಸಿ ಬಿಡು. ಶ್ರೀಮಾತೆಯವರ ಪ್ರೇಮವು ಅದರ ಜಾಗದಲ್ಲಿ ಬಂದು ಕೂಡಲಿ. ನಿನ್ನ ಸ್ವಂತ ಚಿಂತನೆಗಳು ಮತ್ತು ತೀರ್ಮಾನಗಳು ಎಲ್ಲಾ ಒತ್ತಡವನ್ನು ಮನಸ್ಸಿನಿಂದ ಹೊರಗೆಸೆದುಬಿಡು. ನಂತರ ಆಕೆಯನ್ನು ಅರ್ಥಮಾಡಿಕೊಳ್ಳುವ ವಿವೇಕವನ್ನು ನೀನು ಪಡೆಯುವೆ. ಕ್ರಿಯೆಯಲ್ಲಿ ಅಹಂಕಾರದ ಚಲನೆ, ಸ್ವ–ಸಂಕಲ್ಪದ ಯಾವುದೇ ಗೀಳಿಲ್ಲದೆ ಇರಲಿ. ಸ್ವಂತ ಅಧಿಕಾರದ ಪ್ರೇಮ, ಸ್ವಂತ ಆಯ್ಕೆಯ ಅಂಟು ಇಲ್ಲದಿರಲಿ. ಆಗ ನಿನ್ನಲ್ಲಿ

ಶ್ರೀಮಾತೆಯವರ ಶಕ್ತಿಯು ಸ್ಪಷ್ಟವಾಗಿ ಕೆಲಸ ಮಾಡಲು ಸಾಧ್ಯವಾಗುವದು. ಆಗ ನೀನು ಕೇಳುತ್ತಿರುವ ಅಕ್ಷಯವಾದ ಚೈತನ್ಯವನ್ನು ಪಡೆಯುವೆ. ಮತ್ತು ನಿನ್ನ ಸೇವೆಯು ಪರಿಪೂರ್ಣವಾಗಿರುವದು.

*

ಸತ್ಯೇಂದ್ರರಿಗೆ

ದಿವ್ಯದಿಂದ ನಮ್ಮನ್ನು ಹೃದಯದ ಹಿಂದೆ ಇರುವ ಒಂದು ಅವಕುಂಠನ, ಮನಸ್ಸಿನ ಮೇಲಿನ ಒಂದು ಮುಚ್ಚಳ ವಿಭಜಿಸುವದು. ಅವಕುಂಠನವನ್ನು ಪ್ರೇಮ ಮತ್ತು ಭಕ್ತಿ ಕಿತ್ತೆಸೆಯುವದು, ಮನಸ್ಸಿನ ಮೌನದಲ್ಲಿ ಮುಚ್ಚಳವು ತೆಳುವಾಗಿ ಇಲ್ಲವಾಗುವದು.

*

ಆಂತರಿಕ ಸೂರ್ಯನು ಮನಸ್ಸನ್ನು ನಿರಾತಂಕಗೊಳಿಸಿ ಪ್ರಕಾಶಮಾನಗೊಳಿಸಲಿ. ಹೃದಯವನ್ನು ಸಂಪೂರ್ಣವಾಗಿ ಜಾಗೃತಗೊಳಿಸಿ ಅದಕ್ಕೆ ಮಾರ್ಗದರ್ಶನ ಮಾಡಲಿ.

*

ಮನಸ್ಸಿನ ಒಂದು ಮೌನದಲ್ಲಿ ನಿನ್ನ ಹೃದಯದಲ್ಲಿರುವ ಮತ್ತು ಎಲ್ಲೆಡೆಯಿರುವ ದಿವ್ಯದ ಸಾನ್ನಿಧ್ಯಕ್ಕೆ ತೆರೆದುಕೋ. ನಿಶ್ಯಬ್ದವಾದ ಮನಸ್ಸು ಮತ್ತು ಹೃದಯಗಳಲ್ಲಿ ನಿಶ್ಚಲವಾದ ನೀರಿನೊಳಗಿರುವ ಸೂರ್ಯನ ರೀತಿಯಲ್ಲಿ ದಿವ್ಯವು ಕಾಣಿಸುವದು.

*

ಉನ್ನತ ಚೇತನದೊಳಗಡೆಗೆ ಏರು, ಸ್ವಭಾವವನ್ನು ಅದರ ಬೆಳಕು ನಿಯಂತ್ರಿಸಿ ಪರಿವರ್ತನೆಗೊಳಿಸುವಂತಾಗಲಿ.

*

ಹೃದಯದ ಸ್ವ–ಅರ್ಪಣೆಯಿಂದ ಅಚೇತನದಲ್ಲೂ ಸಾನ್ನಿಧ್ಯ ಮತ್ತು ಪ್ರಭಾವಗಳು ಇರುವವು. ಇಡೀ ಸತ್ತೆಯ ವ್ಯಾಪ್ತಿಯೊಳಗಿನ ನೈಜ ಬೆಳಕು ಮತ್ತು ಚೇತನಗಳಿಗೆ ಸ್ವಭಾವವನ್ನು ಸಿದ್ಧಪಡಿಸುವದು.

*

ಆಂತರ್ಯದ ಅಭೀಪ್ಸೆಗೆ ಯಾವಾಗಲೂ ಒತ್ತು ನೀಡು; ಅದು ಹೃದಯದಲ್ಲಿ ಆಳ ಮತ್ತು ದೃಢತೆಯನ್ನು ಪಡೆಯಲಿ; ಹೃದಯದ ಪ್ರೇಮ ಮತ್ತು ಅಭೀಪ್ಸೆಯು ವೃದ್ಧಿಸುತ್ತಿದ್ದಂತೆ ಮನಸ್ಸು ಮತ್ತು ಪ್ರಾಣದ ಅಡೆತಡೆಗಳು ತಮ್ಮಂತೆ ತಾವೇ ಹಿಂದೆ ಸರಿಯುವವು.

*

ಮನಸ್ಸು ಮತ್ತು ಹೃದಯಗಳನ್ನು ತೆರೆದು ಆಂತರಿಕವಾಗಿ ಮತ್ತು ಊರ್ಧ್ವ ಮುಖವಾಗಿ ತಿರುಗಿಸಿ. ಹೀಗೆ ಮಾಡಿದರೆ ಒಳಗಿಂದ ಸ್ಪರ್ಶವು ಆಗಮಿಸಿದಾಗ ಅಥವಾ ಮೇಲಿನಿಂದ ಹರಿವು ಉಂಟಾದಾಗ, ಅದನ್ನು ಸ್ವೀಕರಿಸಲು ನೀವು ಸಿದ್ಧವಾಗಿರುವಿರಿ.

*

ಅತ್ಯಂತ ಅಗತ್ಯವಾದುದೇನೆಂದರೆ ಬೆಳಕಿನ ಕಡೆ ಸತತವಾಗಿ ತಿರುಗಿರುವದು. ನಮ್ಮ ಚಿಂತನೆಗಿಂತಲೂ ಹೆಚ್ಚು ಸಮೀಪದಲ್ಲಿದೆ ಬೆಳಕು ಮತ್ತು ಯಾವುದೇ ಕ್ಷಣದಲ್ಲಿ ಅದು ಆಗಮಿಸಬಹುದು.

*

ದಿವ್ಯ ಅನುಗ್ರಹಕ್ಕೆ ಜೀವವನ್ನು ಸಿದ್ಧವಾಗಿ ಇಟ್ಟಿರಬೇಕು. ಇದರಿಂದ ಅದು ಆಗಮಿಸಿದಾಗ ಸ್ವೀಕರಿಸಲು ಸಾಧ್ಯವಾಗುವದು.

*

ಅತ್ಯಂತ ಅವಶ್ಯಕವಾಗಿ ಜಗತ್ತಿನಲ್ಲಿ ಮತ್ತು ನಮ್ಮಲ್ಲಿ ಆಗಬೇಕಾಗಿರುವ ಕಾರ್ಯದ ಬಗ್ಗೆ ಸತತವಾದ ಸಂಕಲ್ಪವನ್ನು ಹೊಂದಿರಬೇಕು; ಆಧ್ಯಾತ್ಮಿಕ ಫಲಿತಾಂಶವು ಖಂಡಿತವಾಗಿ ಲಭಿಸುವದು; ಚೇತನವು ವೃದ್ಧಿಸುವದು ಮತ್ತು ದಿವ್ಯ ಬೆಳಕು ಮತ್ತು ಶಕ್ತಿಯ ಸ್ಪರ್ಶಕ್ಕೆ ಜೀವದ ಸಿದ್ಧತೆಯು ಸಹ ಅಧಿಕವಾಗುವದು.

*

ನಮ್ಮ ಇಡೀ ಸತ್ತೆಯಲ್ಲಿ ಅಚಿತ್ ಆವರಿಸಿ ನಮ್ಮೊಳಗೆ ನೈಜ ಚೇತನವು ಪ್ರಕಟವಾಗುವದನ್ನು ತಡೆಯುವದು ಮತ್ತು ಅದನ್ನು ಪರಿಮಿತಗೊಳಿಸುವದು. ಪ್ರಕಾಶವು ಇದರೊಳಗೆ ಪ್ರವೇಶಿಸಿ, ನಮ್ಮನ್ನು ಬಂಧಿಸುವ ಅದೇ ಪುನರಾವರ್ತನದ ಚಾಳಿಗಳಲ್ಲಿ ನೆಲೆ ನಿಂತು ಅಧೋಚೇತನದಿಂದ ಊರ್ಧ್ವ ಮುಖವಾಗಿ

ಮೇಲೇರಿದಾಗ ಸ್ವಭಾವವು ಸಂಪೂರ್ಣವಾಗಿ ಸ್ವತಂತ್ರವಾಗಿ ಮೇಲಿನ ಸತ್ಯಕ್ಕೆ ಮಾತ್ರ ಪ್ರತಿಕ್ರಿಯಿಸುವದು.

*

ಆಂತರಿಕ ಸ್ವ–ದರ್ಶನ ಮತ್ತು ಜ್ಞಾನದ ಬಗ್ಗೆ ಸ್ಪಷ್ಟತೆ, ಅಹಂಕಾರದ ನಿಗ್ರಹ, ಪ್ರೇಮ, ನಿಸ್ವಾರ್ಥ ಮತ್ತು ಸಮರ್ಪಿತ ಕಾರ್ಯಗಳಲ್ಲಿ ಸೂಕ್ಷ್ಮ ಜಾಗರೂಕತೆಗಳೇ ಯೋಗ ರಥದ ನಾಲ್ಕು ಚಕ್ರಗಳು. ಪಥದಲ್ಲಿ ಸುರಕ್ಷಿತವಾಗಿ ಪ್ರಗತಿಯನ್ನು ಸಾಧಿಸಲು ಇವುಗಳನ್ನು ಹೊಂದಿರಲೇಬೇಕು.

*

ಕಮಲರಿಗೆ

ಆನಂದ ಮತ್ತು ಬೆಳಕಿನ ಗೃಹದ ಕಡೆಗೆ ಮೌನ ಮತ್ತು ಸೂರ್ಯನಿಂದ ಪ್ರಕಾಶಮಾನವಾದ ಹಾದಿಯಲ್ಲಿ ಶ್ರದ್ಧೆ ಮತ್ತು ಭರವಸೆಯೊಂದಿಗೆ.

*

ಇಂದು ಪ್ರಾರಂಭವಾಗುವ ಆಕೆಯ ಜೀವನದ ಸಂವತ್ಸರಕ್ಕೆ ಕಮಲಳಿಗೆ ನನ್ನ ಆಶೀರ್ವಾದಗಳು.

*

ನಿನ್ನ ಜನ್ಮದಿನದಂದು ನನ್ನ ಆಶೀರ್ವಾದಗಳು. ಜೀವನದ ಈ ನವ ಸಂವತ್ಸರದಲ್ಲಿ ನೀನು ಆತ್ಮದಲ್ಲಿ ವೃದ್ಧಿಸುವಂತಾಗಲಿ.

*

ಈ ಸಂವತ್ಸರ ಮತ್ತು ದಿನಗಳಿಗೆ ನನ್ನ ಆಶೀರ್ವಾದಗಳು. ಶ್ರದ್ಧೆಯಲ್ಲಿ ವೃದ್ಧಿಸು, ಬೆಳಕಿನಲ್ಲಿ ವೃದ್ಧಿಸು, ಚೇತನದಲ್ಲಿ ವೃದ್ಧಿಸು.

*

ನಿನ್ನ ಜನ್ಮದಿನದಂದು ನನ್ನ ಆಶೀರ್ವಾದಗಳು. ದಿವ್ಯದೊಂದಿಗಿನ ಸಂಯೋಗದ ಕಡೆ ಮತ್ತು ಚೇತನದತ್ತಲಿನ ಮುನ್ನಡೆಯಲ್ಲಿ ಈ ಸಂವತ್ಸರವು ಒಂದು ಹೆಜ್ಜೆಯಾಗಲಿ.

*

ಈ ಸಂವತ್ಸರಕ್ಕೆ ನನ್ನ ಆಶೀರ್ವಾದಗಳು. ದಿವ್ಯದ ಕಡೆ ಅದು ನಿನಗೆ ಚೇತನದಲ್ಲಿ ವೃದ್ಧಿಯನ್ನು ತರುವಂತಾಗಲಿ.

*

ನಿನ್ನ ಜನ್ಮದಿನದಂದು ನನ್ನ ಆಶೀರ್ವಾದಗಳು. ನಿನ್ನ ಆಂತರಿಕ ಮತ್ತು ಬಾಹ್ಯ ಸತ್ತೆಗಳೆರಡರಲ್ಲೂ ಈ ಸಂವತ್ಸರವು ಹೆಚ್ಚು ಹೆಚ್ಚು ಪ್ರಗತಿಪರವಾಗಿರಲಿ.

*

ದಿವ್ಯದ ಸ್ಥಿರವಾಗಿರುವ ಸಾನ್ನಿಧ್ಯದಲ್ಲಿ ನೆಲೆಸಲು ಸಿದ್ಧ ಮತ್ತು ಅರ್ಹವೆನಿಸಲು ಜೀವಕ್ಕೆ ಸತ್ಯನಿಷ್ಠೆ, ಭಕ್ತಿ, ಸ್ವ–ಅರ್ಪಣೆ, ನಿಸ್ವಾರ್ಥ ಕಾರ್ಯ ಮತ್ತು ಸೇವೆ, ಎಡೆಬಿಡದ ಅಭೀಪ್ಸೆಗಳೇ ಅತ್ಯಂತ ಸರಳ ಮತ್ತು ಅತ್ಯಧಿಕ ಪರಿಣಾಮಕಾರಿ ಉಪಕರಣಗಳು.

*

ಅಭೀಪ್ಸೆಯ ಜ್ವಾಲೆ, ಭಕ್ತಿ, ಸ್ವ–ಅರ್ಪಣೆ ಮತ್ತು ಚೈತ್ಯ ಜ್ವಾಲೆಗಳನ್ನು ಸದಾ ಉದ್ದೀಪನಗೊಳಿಸಿ ಜೀವಂತವಾಗಿರುವಂತೆ ಕಾಪಾಡಬೇಕು – ನಿರುತ್ಸಾಹದಿಂದ ಕನಲುತ್ತಿರುವ ಪ್ರಾಣಿಕ ಆಸೆ ಮತ್ತು ಅಹಂಕಾರದ ಪ್ರತಿಕ್ರಿಯೆಗಳಿಂದ ಅದನ್ನು ತಡೆಯಬಾರದು. ಅದು ಶಾಶ್ವತ ಮತ್ತು ನಿರಂತರವಾದರೆ, ಆಧ್ಯಾತ್ಮಿಕ ಪರಿವರ್ತನೆಯ ಅವರೋಹಣವು ಸುಲಭವಾಗುವದು.

*

ದಿವ್ಯದ ಕಡೆ ಭಕ್ತಿ, ಆತನ ಕೆಲಸದಲ್ಲಿ ದೃಢ ನಂಬಿಕೆ, ಮತ್ತು ಆತನ ಸಂಕಲ್ಪಕ್ಕೆ ವಿಧೇಯರಾಗಿರುವದೇ ಯೋಗದ ಮೂಲ ಆಧಾರಗಳು. ಉಳಿದೆಲ್ಲವೂ ಈ ಸ್ಥಂಭಗಳನ್ನು ಆಧರಿಸಿ ನಿರ್ಮಿತವಾಗುವವು.

*

ಚಂಪಕಲಾಲರಿಗೆ

ನಿನ್ನ ಚೇತನವನ್ನು ಪ್ರಶಾಂತಗೊಳಿಸು ಹಾಗೂ ವಿಸ್ತರಿಸು. ನಿನ್ನ ಆತ್ಮದ ಒಳಗೆ ಇನ್ನೂ ಆಳವಾಗಿ ಹೋಗು.

*

ನಿನ್ನ ಮುಂದಿರಬೇಕಾದ ಗುರಿಯೇನೆಂದರೆ, ಬೆಳಕಿನಿಂದ ಬರುವದೆಲ್ಲವನ್ನೂ ಸ್ವೀಕರಿಸಿ ಎಲ್ಲಾ ಅಚಿತ್ತನ್ನು ಸಂಪೂರ್ಣವಾಗಿ ತಿರಸ್ಕರಿಸುವ ಸ್ಪಷ್ಟ ಹಾಗೂ ಬಲವಾದ ಚೇತನ.

*

ಭೌತಿಕ ಚೇತನದಿಂದ ಎಲ್ಲಾ ಚಿಕ್ಕ ಚಿಕ್ಕ ಅಡೆತಡೆಗಳು ಕಾಣದಾಗಲು ಮತ್ತು ಭಾವನಾತ್ಮಕ ಸ್ವಭಾವದ ಅಸ್ಪಷ್ಟ ಭಾಗಗಳಿಂದಲೂ ಅವು ಕಾಣದಾಗಲು ಇನ್ನೂ ಹೆಚ್ಚು ಹೆಚ್ಚು ಚೇತನಾಭರಿತನಾಗುವ ಅಭೀಪ್ಸೆಯನ್ನು ಹೊಂದು.

*

ಬೆಳಕು ನಮ್ಮ ಬಳಿ ಬಂದಾಗ ಅದನ್ನು ಸ್ವೀಕರಿಸಲು ಶ್ರದ್ಧೆ ಮತ್ತು ಸ್ವ–ತೆರೆಯುವಿಕೆ–ಯೊಂದಿಗೆ ನಿನ್ನನ್ನು ಸಿದ್ಧವಾಗಿ ಇಟ್ಟುಕೊಂಡಿರು.

*

ಮನಸ್ಸು ಮೌನವಾಗಿದ್ದು ಬೆಳಕನ್ನು ಸ್ವೀಕರಿಸಲಿ; ಪ್ರಾಣವು ಮೌನವಾಗಿದ್ದು ವಿಮುಕ್ತಗೊಳಿಸುವ ಶಕ್ತಿಯನ್ನು ಸ್ವೀಕರಿಸಲಿ.

*

ನಿನ್ನ ಸ್ವಭಾವ ಮತ್ತು ಜೀವನದೊಳಗೆ ಚೈತ್ಯಸತ್ತೆಯ ವೃದ್ಧಿ ಮತ್ತು ಅದು ಬೀರುವ ಪ್ರಭಾವದಲ್ಲಿ ಈಗ ಪ್ರಾರಂಭವಾಗುತ್ತಿರುವ ಸಂವತ್ಸರವು ಒಂದು ನಿರ್ಧಾರಿತ ಹಂತದ ಹೆಗ್ಗುರುತಾಗಲಿ.

*

ನಿನ್ನ ತೆರೆಯುವಿಕೆಯನ್ನು ಮುಂದುವರೆಸು ಮತ್ತು ಚೈತ್ಯ ಚೇತನವು ನಿನ್ನಲ್ಲಿ ವೃದ್ಧಿಸುವದು ಮತ್ತು ಬೆಳಕು ಪರಿಶುದ್ಧವಾಗಿ ಪ್ರಾಣಸತ್ತೆ ಮತ್ತು ಮನಸ್ಸಿನಲ್ಲಿನ ನೆರಳುಗಳ ಉಳಿದ ಶೇಷವನ್ನು ಪ್ರಕಾಶಮಾನಗೊಳಿಸುವದು.

*

ಸಾಧನೆಯಲ್ಲಿ ಅತ್ಯಂತ ಮುಖ್ಯವಾದುದು ಸಂಪೂರ್ಣ ಚೈತ್ಯ ಬದಲಾವಣೆಗಾಗಿ ಹಾದಿಯಲ್ಲಿ ಅಧಿಕಗೊಳ್ಳುತ್ತಿರುವ ಮುಂದುವರೆಯುವಿಕೆ, ಏಕೆಂದರೆ ಅದೇ

ಆಧ್ಯಾತ್ಮಿಕ ಪರಿವರ್ತನೆಗೆ ನೇರವಾದ ಹಾದಿ. ಈ ಪಥದಲ್ಲಿನ ಪ್ರಮುಖ ಹೆಗ್ಗುರುತುಗಳಲ್ಲಿ ಹೆಸರಿಸಬಹುದಾದವು, ಭಕ್ತಿ, ಸಾಮರಸ್ಯ, ಕಾರ್ಯದಲ್ಲಿ ಜಾಗರೂಕತೆ, ವೃದ್ಧಿಸುತ್ತಿರುವ ಅಂತರ್ಭೋಧೆ ಮತ್ತು ಚೇತನ, ಪ್ರಾಣಿಕ ಅಹಂಕಾರದ ಭಾವೋದ್ವೇಗಭರಿತ ಚಲನೆಗಳು ಹೆಚ್ಚು ಹೆಚ್ಚು ಇಲ್ಲವಾಗುವಿಕೆ.

*

ಅಚಿತ್ ಮತ್ತು ಅದರ ವಿರೋಧಗಳ ಅತ್ಯಂತ ಬಲವಾದ ಮತ್ತು ಕೊನೆಯ ನೆಲೆಯಾಗಿದೆ, ಐಹಿಕ ಚೇತನ ಮತ್ತು ಪ್ರಾಪಂಚಿಕ ಜೀವನ. ಭೌತ ವಸ್ತುವು ಬೆಳಕಿಗೆ ಅಂಧತೆಯನ್ನು ಹೊಂದಿದ್ದು, ಕರೆಗೆ ಕಿವುಡಾಗಿದೆ. ಅಲ್ಲಿ, ಅದು ಬೆಳಕಿಗೆ ಹತ್ತಿರವಾದಷ್ಟೂ ತನ್ನ ವಿರೋಧವನ್ನು ಹೆಚ್ಚು ಹೆಚ್ಚು ಮಾಡಿಕೊಳ್ಳುವದು. ಅದನ್ನು ಜಯಿಸಿದಾಗ, ನಿರ್ಧಾರಿತ ಪರಿವರ್ತನೆಯ ಹಾದಿಯು ತೆರೆದುಕೊಳ್ಳುವದು.

*

ಸಾಧಕನಿಗಾಗಿ ಪ್ರಾರ್ಥನೆಗಳು

ಕೋಪದಿಂದ, ಕೃತಘ್ನತೆಯಿಂದ ಮತ್ತು ಬುದ್ಧಿಹೀನ ದುರಭಿಮಾನದಿಂದ ನನ್ನನ್ನು ಬಿಡುಗಡೆಗೊಳಿಸು. ನಾನು ಸಮಾಧಾನ, ನಮ್ರತೆ ಮತ್ತು ಮೃದುತ್ವವನ್ನು ಹೊಂದುವಂತೆ ಮಾಡು. ನನ್ನ ಎಲ್ಲಾ ಕಾರ್ಯ ಮತ್ತು ಎಲ್ಲಾ ಕ್ರಿಯೆಗಳಲ್ಲಿ ನಿನ್ನ ದಿವ್ಯ ನಿಯಂತ್ರಣವನ್ನು ಅನುಭವಿಸುವಂತೆ ಮಾಡು.

*

ಸ್ವ–ಸಂಕಲ್ಪ ಮತ್ತು ಸ್ವ–ಸಮರ್ಥನೆಗಳಿಂದ ದೂರ ಸರಿದು ಪರಿಶುದ್ಧವಾಗುವಂತೆ ಮಾಡೆಂದು ಪ್ರಾರ್ಥಿಸುತ್ತಿರುವೆ. ಇದರಿಂದ ನಾನು ಶ್ರೀಮಾತೆಯವರಿಗೆ ವಿಧೇಯನಾಗಿದ್ದು ವಿನೀತನಾಗಿರಲಿ. ಜೊತೆಗೆ ಶರಣಾಗತನಾದ ನಾನು ಆಕೆಯ ಕೆಲಸದಲ್ಲಿ ಉತ್ತಮ ಉಪಕರಣವಾಗಲಿ ಮತ್ತು ನನ್ನ ಎಲ್ಲಾ ಕೆಲಸಗಳಲ್ಲಿ ಆಕೆಯ ಅನುಗ್ರಹದಿಂದ ಮಾರ್ಗದರ್ಶಿತನಾಗಲಿ.

*

ನನ್ನ ತಪ್ಪುಗಳು ಮತ್ತು ದೋಷಗಳನ್ನು ಒಂದು ದೃಢವಾದ ನಿರ್ಧಾರದಿಂದ ಎಸೆದುಬಿಡುವಂತಾಗಲಿ. ನಾನು ಸಂಪೂರ್ಣವಾಗಿ ವಿಜಯಿಯಾಗುವವರೆಗೂ

ಅದನ್ನು ಚೈತನ್ಯಭರಿತನಾಗಿ ಸತತವಾಗಿ ಮಾಡಲಿ. ನಾನು ಶ್ರೀಮಾತೆಯವರ ವಿರುದ್ಧದ ಎಲ್ಲಾ ದುರಹಂಕಾರ, ಜಗಳವಾಡುವಿಕೆ, ಸ್ವ–ಪ್ರತಿಷ್ಠೆ, ಜಂಬ, ಅವಿಧೇಯತೆ ಮತ್ತು ಪ್ರತಿಭಟನೆಗಳಿಂದ ದೂರ ಸರಿಯಲಿ; ಇತರರ ವಿರುದ್ಧ ದ್ವೇಷ, ವೈರ–ಸಾಧನೆಗಳಿಂದ ಹೊರಬರಲಿ. ದುರ್ನಡತೆ, ದುಷ್ಟ ಮಾತುಗಳು ಇಲ್ಲವಾಗಲಿ. ಸುಳ್ಳು ಹೇಳುವರು, ಸ್ವ–ಸಮರ್ಥನೆ ಮತ್ತು ಅಪೇಕ್ಷೆ, ಅತೃಪ್ತಿ ಮತ್ತು ಗೊಣಗುವಿಕೆಗಳು ನನ್ನ ಬಳಿ ಬರದಿರಲಿ. ನಾನು ಎಲ್ಲರೊಂದಿಗೆ ಮಿತ್ರನಾಗಿದ್ದು ಯಾರೊಂದಿಗೂ ಹಗೆತನವನ್ನು ಹೊಂದದಿರಲಿ. ನಾನು ಶ್ರೀಮಾತೆಯವರ ನಿಜವಾದ ಮಗುವಾಗಲಿ.

**– ಶ್ರೀ ಅರವಿಂದರು**

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ನಮ್ಮ ಕರ್ಮಗಳನ್ನು ನಿಯಂತ್ರಿಸುವ ಪರಮಾತ್ಮನು ನಮ್ಮ ಸಹಜ ಸ್ವಭಾವದ ಪ್ರಕೃತಿಯನ್ನು ವೈಶ್ವಿಕ ನಿಯಮಗಳಿಗನುಸಾರವಾಗಿ ರೂಪಾಂತರಣಗೊಳಿಸುವಾಗಲೂ ಸಹ ಅವನು ನಮ್ಮ ಮೂಲ ಸ್ವಭಾವದ ಪ್ರಕೃತಿಯನ್ನು ಗೌರವದಿಂದಲೇ ಕಾಣುತ್ತಾನೆ; ಅವನು ಸದಾಕಾಲ ಪ್ರಕೃತಿಯ ಮೂಲಕವೇ ಕಾರ್ಯನಿರ್ವಹಿಸುತ್ತಿರುತ್ತಾನೆ. ಅವನ ಕಾರ್ಯಗಳು ನಿರಂಕುಶವಾದ ಇಚ್ಛೆ ಅಥವಾ ಯಾವುದೋ ಅನಿಯಂತ್ರಿತ ಪ್ರತಿಷ್ಠೆಯಿಂದ ಕೂಡಿರುವದಿಲ್ಲ. ನಮ್ಮ ಸಹಜ ಸ್ವಭಾವದ ಪ್ರಕೃತಿಯು ನಮ್ಮ ಪೂರ್ಣತೆಗೆ ಬೇಕಾದ ಎಲ್ಲ ಮೂಲ ವಸ್ತುಗಳನ್ನೂ ಹೊಂದಿದೆ. ಆದರೆ ಆ ಎಲ್ಲಾ ವಸ್ತುಗಳು ಕಳಪೆ ಮಟ್ಟದ, ಅವ್ಯವಸ್ಥಿತ, ಅನಿಯಂತ್ರಿತ, ಕ್ರಮಬದ್ಧವಲ್ಲದ ಹಾಗೂ ಅರೂಪತೆಯಿಂದ ಅಲ್ಲಲ್ಲಿ ಎಸೆಯಲ್ಪಟ್ಟಿವೆ. ನಾವು ಆ ಎಲ್ಲಾ ದ್ರವ್ಯಗಳನ್ನು ತಾಳ್ಮೆಯಿಂದ ಪರೀಕ್ಷಿಸಿ, ಸಂಗ್ರಹಿಸಿ, ಪವಿತ್ರೀಕರಣಗೊಳಿಸಿ ಅವುಗಳಿಗೆ ಒಂದು ನವೀನ ಕ್ರಮಬದ್ಧ ರೂಪವನ್ನು ಕೊಟ್ಟು ಮತ್ತೆ ಎದ್ದು ನಿಲ್ಲುವಂತೆ ಮಾಡಬೇಕು. ಈ ಮರು ಸಂಘಟನೆಯ ಸಂದರ್ಭದಲ್ಲಿ ಆ ವಸ್ತುಗಳನ್ನು ಲೋಪಗೊಳಿಸುವದಾಗಲೀ, ವಿಕೃತಗೊಳಿಸುವದಾಗಲೀ, ಒತ್ತಾಯಪೂರ್ವಕವಾಗಿ ಅವುಗಳನ್ನು ಪರಿವರ್ತನೆಗೆ ಒಳಪಡಿಸುವದಾಗಲೀ, ಅಥವಾ ಅವುಗಳನ್ನು ಊನಗೊಳಿಸುವ ಇಲ್ಲವೇ ಅವುಗಳನ್ನು ಸಂಪೂರ್ಣವಾಗಿ ಹತ್ಯೆಗೈದು ಮತ್ತೆ ಎದ್ದು ಬರದಂತೆ

ವ್ಯರ್ಥಗೊಳಿಸುವದಾಗಲೀ ಮಾಡಬಾರದು. ಈ ಭೌತಿಕ ಪ್ರಪಂಚದಲ್ಲಿ ಬದುಕುತ್ತಿರುವ ನಾವು ಆ ಪರಮಾತ್ಮನ ರಚನೆಯೇ ಆಗಿದ್ದೇವೆ. ನಾವುಗಳೆಲ್ಲಾ ಅವನ ಅಭಿವ್ಯಕ್ತಿಯ ಸ್ವರೂಪಗಳೇ ಆಗಿದ್ದೇವೆ. ಅವನು ಸದಾಕಾಲ ನಮ್ಮೊಂದಿಗೆ ವ್ಯವಹರಿಸುತ್ತಲೇ ಇರುತ್ತಾನೆ. ಆದರೆ ಅಲ್ಪ ಜ್ಞಾನ ಮತ್ತು ಅಜ್ಞಾನದಿಂದ ಕೂಡಿದ ನಮ್ಮ ಮಾನಸವು ಆ ದಿವ್ಯ ಜ್ಞಾನದೆಡೆಗೆ ಮುಕ್ತವಾಗಿ ತೆರೆದುಕೊಳ್ಳದೇ ಇರುವದರಿಂದ ಅವನೊಂದಿಗಿನ ನೇರ ಸಂಪರ್ಕವನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ. ನಮ್ಮ ಈ ದೋಷದಲ್ಲೂ ಸಹ ಕೊಂಚ ಪ್ರಮಾಣದ ಸತ್ಯಜ ಸಾರವಿದೆ. ಅದು ನಮ್ಮ ಶೋಧನೆಯ ಸಂಸ್ಕಾರವಿರುವ ಬುದ್ಧಿಗೆ ತನ್ನ ಮೂಲಾರ್ಥವನ್ನು ಪ್ರಚುರಪಡಿಸಲು ಪ್ರಯತ್ನಿಸುತ್ತಿರುತ್ತದೆ. ಆದರೆ, ಆ ಸತ್ಯದ ಪ್ರಯತ್ನಕ್ಕೆ ಸೊಪ್ಪು ಹಾಕದ ನಾವು ಆ ಸತ್ಯವನ್ನು ಲುಪ್ತಗೊಳಿಸಿ ಆ ಪೂರ್ಣದ ಸ್ಥಾನದಲ್ಲಿ ಅರ್ಧ–ಸತ್ಯವನ್ನೂ ಉಳಿದ ಭಾಗದಲ್ಲಿ ಅರ್ಧ–ದೋಷವನ್ನೂ ತುಂಬಿ ಬಿಡುತ್ತೇವೆ. ಆದರೆ, ಆ ದಿವ್ಯ ಜ್ಞಾನವು ನಮ್ಮ ಈ ತಪ್ಪುಗಳೆಲ್ಲ ಸೈರಣೆಯಿಂದ ಕ್ಷಮಿಸುತ್ತದೆ. ಮತ್ತು ನಮ್ಮೊಳಗೆ ರಾಶಿ ಒಟ್ಟಿರುವ ದೋಷ–ಸುಳ್ಳುಗಳ ಅಡಿಯಲ್ಲಿ ಬೈಯ್ದಿಟ್ಟ ನಿಧಿಯಂತೆ ಸುಪ್ತವಾಗಿ ಒರಗಿರುವ ಸತ್ಯವನ್ನು ಅನವರತ ರಕ್ಷಿಸುತ್ತ ಕೊನೆಗೊಂದು ದಿನ ನಮಗೆ ಆ ಸತ್ಯದ ಭಾಂಡಾರವನ್ನು ದೊರಕಿಸಿ ಕೊಡುವ ಕಾರ್ಯದಲ್ಲಿ ನಿರತವಾಗಿರುತ್ತದೆ. ನಮ್ಮ ಪಾಪಗಳು ನಿಜವಾಗಿಯೂ ಪಾಪದ ಮಾರ್ಗದಲ್ಲಿ ನಡೆಯುತ್ತಿಲ್ಲ. ಬದಲಿಗೆ, ದಿವ್ಯತೆಯ ಶುದ್ಧ ನಡಾವಳಿಗಳಿರುವ ಆ ಪೂರ್ಣತೆಯನ್ನು ಅರಸಲೆಂದು ಹೊರಟ ತಪ್ಪಾದ ಮಾರ್ಗದಲ್ಲಿ ಮುಗ್ಗರಿಸುತ್ತಿದೆ. ಈ ಪಾಪಗಳು ಹೊದ್ದುಕೊಂಡ ತನ್ನ ವಿಕಾರವಶದ ಕಾಳಮುಸುಕನ್ನು ಸರಿಸಿ ಮುನ್ನಡೆಯಬೇಕಿದೆ, ರೂಪಾಂತರಣದ ಅಂತಿಮ ನೆಲೆಯನ್ನು ಮುಟ್ಟಬೇಕಿದೆ; ಇಲ್ಲದಿದ್ದರೆ ನಮ್ಮ ಪಾಪಗಳಿಗೆ ಪರಿಪೂರ್ಣತೆಯ ಮಾರ್ಗದಲ್ಲಿ ಮುನ್ನಡೆಯುವ ಪರವಾನಗಿಯು ದೊರೆಯುವದಿಲ್ಲ. ನಮ್ಮ ಕರ್ಮಗಳನ್ನು ನಿಯಂತ್ರಿಸುವ ಆ ಪರಮಾತ್ಮನು ಪ್ರಮಾದಗಳ ಪ್ರಭೃತಿಯಲ್ಲ. ಉದಾಸೀನತೆಯ ಉಸ್ತುವಾರಿಯಲ್ಲ ಅಥವಾ ಅನಗತ್ಯವಾದ ಅನೃತಗಳ ಅರಮನೆಯೊಳಗೆ ಆನಂದದಿಂದಿರುವವನೂ ಅಲ್ಲ. ಅವನು ನಮ್ಮ ಬುದ್ಧಿ–ಗುಣಗಳಿಗಿಂತಲೂ ಉನ್ನತವಾದ ಜ್ಞಾನದ ದೇವನಾಗಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/245–46 – ಶ್ರೀ ಅರವಿಂದರು**

# ನವ ಜನ್ಮ

## ಚೈತ್ಯ ಪುರುಷನ ನವ ಜನ್ಮ

ಆತ್ಮ ಅಥವಾ ಚೈತ್ಯ ಪುರುಷನು ಋತದೊಡನೆ ನೇರ ಸಂಪರ್ಕದಲ್ಲಿರುತ್ತಾನೆ. ಆದರೆ ಮಾನವನಲ್ಲಿರುವ ಮಾನಸ, ಪ್ರಾಣಿಕ ಮತ್ತು ಭೌತಿಕ ಸ್ವಭಾವಗಳು (ತೈತ್ತೀರಿಯ ಉಪನಿಷತ್ತಿನಲ್ಲಿ ಹೇಳಲಾದ ಮನ–ಪ್ರಾಣ–ಅನ್ನಗಳು) ಅವನನ್ನು ಮರೆಯಾಗಿಸಿವೆ. ಯೋಗ ಸಾಧನೆಯಲ್ಲಿ ತೊಡಗಿಕೊಂಡ ಸಾಧಕನು ಮಾನಸ ಮತ್ತು ಕಾರಣದಲ್ಲಿ (ಕಾರಣಮಯ) ಪ್ರಜ್ಞಾಪ್ರಕಾಶವನ್ನು ಪಡೆದುಕೊಳ್ಳಬಹುದು; ಪ್ರಾಣಮಯದಲ್ಲಿ ಶಕ್ತಿಯನ್ನು ಸಂಪಾದಿಸಿಕೊಂಡವರು ಎಲ್ಲಾ ರೀತಿಯ ಅನುಭೂತಿಗಳನ್ನು ಪಡೆದುಕೊಳ್ಳಬಹುದು. ಭೌತಿಕ ದೇಹದಲ್ಲಿ ಸರ್ವ ವಿಧವಾದ ಸಿದ್ಧಿಗಳನ್ನು ಸಂಪಾದಿಸಿಕೊಳ್ಳಬಹುದು; ಆದರೆ ಇವುಗಳ ಹಿಂದಿರುವ ಅಂತರಾತ್ಮವು ಪ್ರಕಟವಾಗದಿದ್ದರೆ, ಚೈತ್ಯ ಪ್ರಜ್ಞೆಯು ಮುಂಚೂಣಿಗೆ ಬರದಿದ್ದರೆ ನೈಜತೆಯನ್ನು ಸಾಧಿಸಿದಂತಾಗುವದಿಲ್ಲ. ಈ ಯೋಗದಲ್ಲಿ ಚೈತ್ಯ ಪುರುಷನೆ ಪ್ರಕೃತಿಯ ಉಳಿದ ಸತ್ತೆಗಳನ್ನು ಅಂತರಾತ್ಮವನ್ನೂ ಮೀರಿದ ಸುಪ್ರಮಾನದ ಸುಪ್ರಭೆಯೆಡೆಗೂ, ಪರಮಾನಂದದ ಪ್ರಾಕಾರದೆಡೆಗೂ ಮುಕ್ತಗೊಳಿಸುತ್ತದೆ. ಆಗ ಮಾನಸವು ತನ್ನಷ್ಟಕ್ಕೆ ತಾನೇ ಉನ್ನತ ಸ್ತರಗಳೆಡೆ ತೆರೆದುಕೊಳ್ಳಬಹುದು; ಅನಂತತೆಯಲ್ಲಿ ವ್ಯಾಪಿಸಿದ ನಿರಾಕಾರತೆಯಲ್ಲಿ ತನ್ನನ್ನು ತಾನು ವಿಸ್ತರಿಸಿಕೊಳ್ಳಬಹುದು; ಒಂದು ರೀತಿಯ ಸ್ಥಿರ ಮೋಕ್ಷ ಅಥವಾ ನಿರ್ವಾಣದಲ್ಲಿ ತನ್ನನ್ನು ತಾನು ಆಧ್ಯಾತ್ಮೀಕರಣಗೊಳಿಸಿ–ಕೊಳ್ಳಬಹುದು; ಆದರೆ ಈ ಆಧ್ಯಾತ್ಮಿಕ ಮಾನಸದಲ್ಲಿ ಸುಪ್ರಮಾನಸದ ಅವತರಣವು ಸಾಧ್ಯವಿಲ್ಲ. ಒಂದು ವೇಳೆ ಅಂತರಾತ್ಮವು ಜಾಗೃತಗೊಂಡರೆ, ಅಥವಾ ಮಾನಸ, ಪ್ರಾಣಿಕ ಮತ್ತು ಭೌತಿಕದಲ್ಲೇ ಸಿಲುಕಿರುವ ಸತ್ತೆಯು ಚೈತ್ಯ ಪ್ರಜ್ಞೆಯಲ್ಲಿ ನವ ಜನ್ಮವನ್ನು ಪಡೆದರೆ, ಈ ಯೋಗವನ್ನು ಮಾಡಬಹುದು. ಇಲ್ಲದಿದ್ದರೆ (ಕೇವಲ ಮಾನಸ ಅಥವಾ ಇನ್ನುಳಿದ ಯಾವ ಸ್ತರದಿಂದಲೂ) ಇದು ಸಾಧ್ಯವಿಲ್ಲ. ಬೌದ್ಧಿಕ ಜ್ಞಾನ, ಮಾನಸದ ಕಲ್ಪನೆಗಳು ಅಥವಾ ಪ್ರಾಣಮಯದ ಹಂಬಲಗಳ ಮೇಲಿನ ವ್ಯಾಮೋಹದಿಂದಾಗಿ ಚೈತ್ಯ ಪುರುಷನು ಈ ನವ ಜನ್ಮವನ್ನು ನಿರಾಕರಿಸಿದರೆ, ಜಗನ್ಮಾತೆಯಿಂದ ಮರುಜನ್ಮ ಪಡೆದ ಮಗುವಾಗಲು ನಿರಾಕರಿಸಿದರೆ, ಆಗ ಸಾಧನೆಯು ವಿಫಲಗೊಳ್ಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/337–38 – ಶ್ರೀ ಅರವಿಂದರು**

**ನವ ಜನ್ಮ ಎಂದರೇನು?**

ಆಧ್ಯಾತ್ಮಿಕ ಜೀವನ ಮತ್ತು ಆಧ್ಯಾತ್ಮಿಕ ಪ್ರಜ್ಞೆಯ ಜನನವನ್ನೇ ನವ ಜನ್ಮ ಎಂದು ಕರೆಯಲಾಗುತ್ತದೆ; ನಮ್ಮ ಜೀವನದ ಮೇಲೆ ಪ್ರಭುತ್ವವನ್ನು ಸ್ಥಾಪಿಸುವ ಮತ್ತು ಆ ಮೂಲಕ ಅಸ್ತಿತ್ವದ ಮೇಲೆ ನಮ್ಮ ಹಿಡಿತವನ್ನು ಸಾಧಿಸುವ ಸಾಮರ್ಥ್ಯವನ್ನು ನೀಡುವ ಅಂಶವನ್ನು ನಮ್ಮ ಆತ್ಮದ ಮೂಲಕ ಪಡೆದುಕೊಳ್ಳುವ ಪ್ರಮೇಯವೇ ನವ ಜನ್ಮ; ಆದರೆ, ಸುಪ್ರಮಾನಸದ ಲೋಕದಲ್ಲಿ ಅಂತರಾತ್ಮವೇ ಈ ಇಡೀ ವಿಶ್ವದ ಮತ್ತು ಅದರ ಎಲ್ಲಾ ಅಭಿವ್ಯಕ್ತಿಗಳ ಪ್ರಭುವಾಗಿರುತ್ತದೆ. ಮತ್ತು ಈ ವಿಶ್ವವು ಸಹಜ, ಸಮ್ಮತ, ಸ್ವಯಂಪೂರ್ವಕವಾಗಿ ಆ ಅಂತರಾತ್ಮದ ಸ್ವಾಮಿತ್ವವನ್ನು ಒಪ್ಪಿಕೊಂಡಿರುತ್ತದೆ...

ಏಕ ವ್ಯಕ್ತಿಗತದ ಅಸ್ತಿತ್ವದಲ್ಲಿ ಇದು ಸರ್ವಸ್ವವನ್ನೂ ರೂಪಾಂತರಣಗೊಳಿಸುವ ಅಂಶವಾಗಿದೆ; ಎಲ್ಲಿಯವರೆಗೆ ವ್ಯಕ್ತಿಗತರು ಆತ್ಮದ ಕುರಿತಾಗಿ ಮಾತನಾಡುವಾಗ ಅವರು ಕೇವಲ ತಾವು ಓದಿದ, ಅಥವಾ ಅಲ್ಲಿಯವರೆಗೆ ಆತ್ಮದ ಕುರಿತಾಗಿ ಕೇಳಿ ತಿಳಿದ ಅಸ್ಪಷ್ಟವಾದ ವಿಚಾರವಾಗಿರುತ್ತದೆಯೋ, ಅವರ ಪ್ರಜ್ಞೆಯಲ್ಲಿ ಅದರ ಕುರಿತಾದ ದೃಢ ವಿಶ್ವಾಸವಿರುವದಿಲ್ಲವೋ ಅಲ್ಲಿಯವರೆಗೂ ಅವರು ಆತ್ಮದಲ್ಲಿ ಜನಿಸಿಲ್ಲ ಎಂದೇ ಅರ್ಥ. ಆದರೆ ಯಾವಾಗ ವ್ಯಕ್ತಿಗತರು ಆತ್ಮದಲ್ಲಿ ಜನಿಸುತ್ತಾರೋ ಆಗ ಅವರಿಗೆ ಅದು ಭೌತಿಕ ಪ್ರಪಂಚಕ್ಕಿಂತಲೂ ಹೆಚ್ಚು ದೃಢವಾದ, ಹೆಚ್ಚು ಜೀವಂತವಾದ, ಹೆಚ್ಚು ನೈಜವಾದ ಮತ್ತು ಹೆಚ್ಚು ಸ್ಪಷ್ಟವಾಗಿ ಸ್ಪರ್ಶಿಸಬಹುದಾದಂತಹ ವಿಷಯವಾಗಿ ಪರಿಗಣಿಸುತ್ತದೆ. ಆಗ ಅದು ವ್ಯಕ್ತಿಗತರ ನಡುವೆ ಬೇಕಾದ ಮೂಲಭೂತ ವ್ಯತ್ಯಾಸವನ್ನು ತರುತ್ತದೆ. ಯಾವಾಗ ಆತ್ಮವು ನೈಜ ಸಂಗತಿಯಾಗಿ ಕಾಣುತ್ತದೆಯೋ, ಯಾವಾಗ ಅದುವೇ ನಿಜವಾದ ಮತ್ತು ದೃಢವಾದ ಅಸ್ತಿತ್ವವಾಗುತ್ತದೆಯೋ, ಯಾವಾಗ ಅದುವೇ ಮುಕ್ತವಾಗಿ ಉಸಿರಾಡುವಂತಹ ವಾತಾವರಣವಾಗುತ್ತದೆಯೋ ಆಗ ಮಾತ್ರವೇ ವ್ಯಕ್ತಿಗತರಿಗೆ ತಾವು ಬೇರೊಂದು ದಡಕ್ಕೆ ತಲುಪಿದ್ದೇವೆ ಎಂಬುದು ಅರಿವಾಗುತ್ತದೆ. ಆದರೆ, ಎಲ್ಲಿಯವರೆಗೆ ಆ ಆತ್ಮವು ಕೇವಲ ನೀವು ಓದಿರುವ ಅಥವಾ ಬೇರೊಬ್ಬರಿಂದ ಕೇಳಿ ತಿಳಿದ ದೃಢವಲ್ಲದ ಅಸ್ಪಷ್ಟ ಮಂಜಿನಂತಹ ವಿಷಯವಾಗಿರುತ್ತದೆಯೋ ಅಲ್ಲಿಯವರೆಗೆ ನವ ಜನ್ಮವು ಸಂಭವಿಸಿಲ್ಲ ಎಂದೆ ಅರ್ಥ. ಅಲ್ಲಿಯವರೆಗೆ ನಿಮಗೆ ನೀವೆ, "ಹೌದು ನಾನು ನೋಡುವ, ನಾನು ಸ್ಪರ್ಶಿಸುವ, ನಾನು ಅನುಭವಿಸುವ ನೋವು, ನನ್ನನ್ನು ಭಾರವಾಗಿಸುವ ನಿದ್ರೆ... ಇವುಗಳೇ ನೈಜ, ಇವುಗಳೇ ದೃಢ" ಎಂದು ಹೇಳಿಕೊಳ್ಳುತ್ತೀರೋ ಅಲ್ಲಿಯವರೆಗೆ

ನೀವು ಆ ಇನ್ನೊಂದು ದಡವನ್ನು ತಲುಪಿಲ್ಲ, ನೀವಿನ್ನೂ ಆತ್ಮದಲ್ಲಿ ಜನಿಸಿಲ್ಲ ಎಂದೇ ಅರ್ಥ. (ಶ್ರೀಮಾತೆಯವರ ಮುಖದಲ್ಲಿ ನಗುವೊಂದು ಮೂಡಿತ್ತು)

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/430 – ಶ್ರೀಮಾತೆ**

## ಬಹುಪಾಲು ಮಾನವರು ಕೈದಿಗಳಂತೆ ಇದ್ದಾರೆ

ವಾಸ್ತವವಾಗಿ ಹೆಚ್ಚಿನ ಸಂಖ್ಯೆಯ ಮಾನವರು ಕಿಟಕಿ–ಬಾಗಿಲುಗಳನ್ನೆಲ್ಲ ಮುಚ್ಚಿಕೊಂಡು ಕೈದಿಗಳಂತೆ ಬದುಕುತ್ತಿದ್ದಾರೆ, ಆ ಬಂಧನದಲ್ಲಿ ಅವರು ಉಸಿರುಗಟ್ಟಿ ಹಿಡಿದು ಬದುಕ ದೂಡುತ್ತಿದ್ದಾರೆ. ಇದು ಅವರ ತೀರಾ ಸಹಜವಾದ ಜೀವನ ಪದ್ಧತಿಯಾಗಿದೆ. ಅವರನ್ನು ಕೂಡಿಹಾಕಿದ ಕೋಣೆಯ ಬಾಗಿಲು–ಕಿಟಕಿಗಳನ್ನು ತೆಗೆಯುವ ಕೀಲಿಕೈ ಅವರ ಬಳಿಯೇ ಇದೆ. ಆದರೂ ಸಹ ಅವರು ಆ ಬೀಗದ ಕೈಯನ್ನು ಅವರು ಬಳಸುವದಿಲ್ಲ. ಅವರಿಗೆ ಅವರ ಬಳಿ ತಮ್ಮ ಬಂಧನ ವಿಮುಕ್ತಿಯ ಬೀಗದ ಕೈ ಇದೆ ಎಂಬ ಸತ್ಯವು ತಿಳಿಯದೇ ಇರುವ ಸಂದರ್ಭದಲ್ಲಿ ಅವರು ಕೈಕಟ್ಟಿ ಕೂರುವುದು ಸಹಜ. ಆದರೆ, ಒಂದೊಮ್ಮೆ ಅವರ ಬಳಿ ಆ ಸಾಧನ ಇರುವ ವಿಷಯವು ಅವರಿಗೆ ತಿಳಿದಾಗಲೂ ಸಹ, ಅಥವಾ ಬೇರೊಬ್ಬರು ಅವರಿಗೆ ಆ ಸತ್ಯವನ್ನು ಮನದಟ್ಟು ಮಾಡಿಕೊಟ್ಟ ನಂತರವೂ ಸಹ ಅವರು ಆ ಬೀಗದ ಕೈಯನ್ನು ಬಳಸಿ ಬಂಧನ ವಿಮುಕ್ತವಾಗಲು ಹಿಂಜರಿಯುತ್ತಾರೆ. ಏಕೆಂದರೆ ಆ ಬೀಗದ ಕೈ ತಮ್ಮಲ್ಲಿ ಇದ್ದರೂ ಸಹ ತಮ್ಮಲ್ಲಿ ಆ ಬಾಗಿಲುಗಳನ್ನು ತೆರೆಯುವ ಸಾಮರ್ಥ್ಯವಿದೆಯೇ ಎಂಬ ಸಂದೇಹವೊಂದು ಅವರನ್ನು ಕಾಡುತ್ತಿರುತ್ತದೆ. ಮತ್ತು ಒಂದು ವೇಳೆ ಈ ಬಾಗಿಲುಗಳನ್ನು ತೆರೆದರೆ ಏನಾಗಬಹುದು ಎಂಬ ಭಯವು ಅವರನ್ನು ಆ ಸಾಹಸದಿಂದ ಹಿಂದುಳಿಯುವಂತೆ ಮಾಡುತ್ತದೆ. ಒಂದೊಮ್ಮೆ ಅವರಿಗೆ 'ಆ ಬಾಗಿಲುಗಳನ್ನು ತೆರೆದ ನಂತರ ಎಲ್ಲವೂ ಒಳ್ಳೆಯದಾಗಲಿದೆ' ಎಂಬ ಸತ್ಯವು ಮನವರಿಕೆಯಾದರೂ ಸಹ ಒಂದು ಸಲ ಆ ಬಾಗಿಲುಗಳನ್ನು ತೆರೆದ ನಂತರ ಸುತ್ತಲೂ ವ್ಯಾಪಿಸುವ ಬೆಳಕು ಮತ್ತು ಸ್ವಾತಂತ್ರ್ಯದಲ್ಲಿ ತಾವು ಕಳೆದುಹೋಗಬಹುದು ಎಂಬ ಭಯದಿಂದ ಅವರು ಈಗ ಏನಾಗಿದ್ದಾರೋ ಅದೇ ವಾಸ್ತವದಲ್ಲಿ ಮುಂದುವರೆಯಲು ಇಷ್ಟಪಡುತ್ತಾರೆ. ಹೀಗೆ ಅವರು ತಮ್ಮನ್ನು ಆವರಿಸಿದ ಸುಳ್ಳು ಬಂಧನದಲ್ಲಿಯೇ ಜೀವಿಸಲು ಬಯಸುತ್ತಾರೆ.

ಒಂದು ರೀತಿಯಲ್ಲಿ ಅವರೊಳಗಿರುವ ಒಂದು ಅಂಶವು ಅವರ ಈ ಬಂಧನವನ್ನು ಇಷ್ಟಪಡುತ್ತಿರುತ್ತದೆ. ಅದು ಸದಾ ಅವರನ್ನು ಆ ಬಂಧನಕ್ಕೇ ಅಂಟಿಕೊಂಡಿರುವಂತೆ ಪ್ರೇರೇಪಿಸುತ್ತಿರುತ್ತದೆ. ಅವರ ಈ ಬಂಧನದ ಮಿತಿಯನ್ನು ದಾಟಿದರೆ ತಮ್ಮ ಅಸ್ತಿತ್ವವೇ ನಾಶವಾಗುತ್ತದೆ ಎಂಬ ಭಯವನ್ನು ಅವರಲ್ಲಿ ಬಿತ್ತಿರುತ್ತದೆ. ಈ ಪಯಣವು ಬಹು ದೀರ್ಘವೂ–ಪ್ರಯಾಸಕರವೂ ಆಗಿದೆ. ಮಾನವರು ತಮ್ಮ ಅಸ್ತಿತ್ವವನ್ನು ಅಂತ್ಯಗೊಳಿಸಲು ಒಪ್ಪಿಕೊಂಡಿದ್ದೇ ಆದಲ್ಲಿ ಅವರ ಬದುಕು ಬಹು ಸುಲಭವೂ, ಸುಂದರವೂ, ಪ್ರಕಾಶಮಾನವೂ, ಆನಂದದಾಯಕವೂ ಆಗಿ ಬದಲಾಗುತ್ತದೆ. ಇದು ಸಾಮಾನ್ಯ ಲೋಗರು ಅರ್ಥ ಮಾಡಿಕೊಂಡಿರುವ ಸಂತೋಷ, ನೆಮ್ಮದಿಗಳ ರೂಪದ್ದಾಗಿಲ್ಲ. ಮರ್ತ್ಯದಲ್ಲಿ ಹೋರಾಟದ ಮೂಲಕ ಆನಂದವನ್ನು ಕಂಡುಕೊಳ್ಳುವ ಜನ ಬಹು ವಿರಳ. ಅವರು ಕತ್ತಲೆಯನ್ನು ಅಸ್ತಿತ್ವವನ್ನು ಸ್ವೀಕರಿಸುವದಿಲ್ಲ. ಅವರಿಗೆ ಕೇವಲ ಬೆಳಕು ಮಾತ್ರ ಬೇಕು. “ಛಾಯೆಗಳಿಲ್ಲದ ಚಿತ್ರವಿಲ್ಲ, ಯುದ್ಧವಿರದೆ ಗೆಲುವು ಸಾಧ್ಯವಿಲ್ಲ, ದುಃಖದ ಅಸ್ತಿತ್ವವಿರದಿದ್ದರೆ ಆನಂದಕ್ಕೆ ಬೆಲೆಯಿಲ್ಲ” ಎಂಬ ಸತ್ಯವನ್ನು ಅವರು ಮನಗಾಣಬೇಕು. ಎಲ್ಲಿಯವರೆಗೆ ಅವರು ಈ ಸತ್ಯವನ್ನು ಒಪ್ಪಿಕೊಳ್ಳುವದಿಲ್ಲವೋ ಅಲ್ಲಿಯವರೆಗೂ ಅವರು ಆತ್ಮದಲ್ಲಿ ಜನಿಸಿಲ್ಲ ಎಂದೇ ಅರ್ಥ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/430–31 – ಶ್ರೀಮಾತೆ**

## ಜೀವನದಲ್ಲಿ ಎಂದಿಗೂ ಮರೆಯಬಾದಂತಹ ವಿಷಯವು ಯಾವುದು?

1969 ರಲ್ಲಿ ನಿರೋದ್ಬರನ್ ಅವರ ಜನ್ಮದಿನದ ಹಿಂದಿನ ದಿನ ಅವರು ಶ್ರೀಮಾತೆಯವರಿಗೆ ಒಂದು ಪತ್ರವನ್ನು ಬರೆದಿದ್ದರು ಅದರಲ್ಲಿ: “ಬಹುಶಃ ನಿಮಗೆ ನಾಳೆ ನನ್ನ ಜನ್ಮದಿನವಿದೆ ಎಂಬುದು ತಿಳಿದಂತಿಲ್ಲ. ಇಂದು ಸುಧಾಳು ಕಂಡ ಒಂದು ಕನಸಿನಲ್ಲಿ ನೀವು ನನ್ನ ಬಳಿ ಬಂದು, ‘ನನಗೆ ಏನು ಬೇಕು?’ ಎಂದು ಕೇಳಿದಂತೆ ಅನುಭವವಾಯಿತಂತೆ. ಹಾಗಾಗಿ ನಿಮ್ಮಲ್ಲಿ ನಾನೀಗ ಒಂದು ಬೇಡಿಕೆಯನ್ನು ಇಡುತ್ತಿದ್ದೇನೆ. ನಾನು ನನ್ನ ಜೀವನದಲ್ಲಿ ಎಂದೂ ಮರೆಯದಂತಹ ಒಂದು ವಸ್ತುವನ್ನು ಕರುಣಿಸಿ ಎಂದು ಪ್ರಾರ್ಥಿಸುತ್ತೇನೆ” ಎಂದು ಬರೆದಿದ್ದರು.

ಅದಕ್ಕೆ ಪ್ರತಿಯಾಗಿ ಶ್ರೀಮಾತೆಯವರು: “ನಾಳೆ ನಿಮ್ಮ ಜನ್ಮದಿನವಿದೆ ಎಂಬುದು ನನಗೆ ತಿಳಿದಿದೆ. ಹಾಗಾಗಿಯೇ ನಿಮ್ಮ ಹೆಸರನ್ನು ನನ್ನ ಪಟ್ಟಿಯಲ್ಲಿ

ಸೇರಿಸಿಕೊಂಡೆ. ಬೆಳಿಗ್ಗೆ ಸರಿಯಾಗಿ 9 ಗಂಟೆಗೆ ಬನ್ನಿ, ನೀವು ಬಯಸಿದ, ನೀವು ಜೀವನವಿಡೀ ಮರೆಯಲಾರದಂತಹ ವಸ್ತುವನ್ನು ನಿಮಗೆ ನೀಡುತ್ತೇನೆ. ನೀವು ಕೇಳಿದ ಆ ವಸ್ತುವು: ನನ್ನ ಪ್ರೀತಿಪೂರ್ವಕ ಆಶೀರ್ವಾದಗಳೊಂದಿಗೆ ದಿವ್ಯತೆ ಮೇಲಿನ ನಂಬುಗೆ ಏಕೆ ಆಗಿರಬಾರದು?... ಎಂದು ಉತ್ತರಿಸಿದ್ದರು.

**– ಶ್ರೀಮಾತೆ"**

ಮರುದಿನ ಬೆಳಿಗ್ಗೆ ಅವರು ಶ್ರೀಮಾತೆಯವರ ಬಳಿ ಹೋದಾಗ ಅವರು Master of cards ಎಂದೇ ಹೆಸರುವಾಸಿಯಾಗಿದ್ದ ಚಂಪಕ್‌ಲಾಲ್ ಅವರು ಸಿದ್ಧಪಡಿಸಿದ್ದ ವಿಶಿಷ್ಟವಾದ ಫೋಲ್ಡರ್ ಒಂದನ್ನು ನೀಡಿದರು. ಅದರಲ್ಲಿ ಅವರು ತಮ್ಮ ಸುಂದರವಾದ ಹಸ್ತಾಕ್ಷರಗಳಿಂದ ಫ್ರೇಂಚ್ ಭಾಷೆಯಲ್ಲಿ ಹೀಗೆ ಬರೆದಿದ್ದರು:

(ದಿವ್ಯತೆಯ ಮೇಲೆ ಇಟ್ಟಿರುವ ಸಂಪೂರ್ಣವಾದ ನಂಬುಗೆಗಾಗಿ ನನ್ನ ಪ್ರೀತಿಪೂರ್ವಕ ಆಶೀರ್ವಾದಗಳೊಂದಿಗೆ ನಿರೋದ್ಬರನ್ ಅವರಿಗೆ ಜನ್ಮದಿನದ ಶುಭಾಶಯಗಳು)

## ಎರಡು ಕಮಲಗಳು

ನಾನು ಶ್ರೀಮಾತೆಯವರಿಗೆ ಏನನ್ನಾದರೂ ಅರ್ಪಿಸಲು ಬಯಸಿದ್ದೆ. ಆಗ ನನಗೆ ಎರಡು ಕಮಲಗಳನ್ನು ಚಿತ್ರಿಸುವ ಆಲೋಚನೆಯು ಬಂತು ಅದರಲ್ಲಿ ಒಂದು ಬಿಳಿ ಬಣ್ಣದ್ದು, ಇನ್ನೊಂದು ಕೆಂಪು ಬಣ್ಣದ್ದು.

ಆಶ್ಚರ್ಯವೆಂಬಂತೆ ನಾನು ಬಯಸಿದ ಆ ಎರಡು ಬಣ್ಣದ ಕಮಲ ಪುಷ್ಪಗಳು ಸಿಕ್ಕವು. ಕೂಡಲೇ ನಾನು ಅವುಗಳನ್ನು ಚಿತ್ರಿಸಲು ಆರಂಭಿಸಿದೆ. ಆದರೆ, ಇತರೆ ಕೆಲಸಗಳಿದ್ದ ಕಾರಣ ನನಗೆ ಆ ಚಿತ್ರವನ್ನು ಅದೇ ದಿನ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಇತರ ಚಿತ್ರಗಳಂತೆ ಈ ಚಿತ್ರವನ್ನೂ ಸಹ ನನ್ನ ಮಧ್ಯಾಹ್ನದ ಊಟದ ಬಿಡುವಿನ ಸಮಯದಲ್ಲಿ ಚಿತ್ರಿಸಿದೆ. ಏಕೆಂದರೆ, ಇದು ನನಗೆ ಬಹು ಸಂತೋಷವನ್ನು ನೀಡುತ್ತಿತ್ತು. ದಿನಕ್ಕೆ ಸ್ವಲ್ಪ ಸಮಯದಂತೆ ಆ ಚಿತ್ರವನ್ನು ಪೂರ್ಣಗೊಳಿಸಲು ಕೆಲವು ದಿನಗಳೇ ಬೇಕಾದವು. ಸಾಮಾನ್ಯವಾಗಿ ಚಿತ್ರಕ್ಕೆ ಬಣ್ಣ ತುಂಬುವ ಕೆಲಸವು ಒಂದೇ ದಿನದಲ್ಲಿ ಆಗಿದ್ದರೆ ಉತ್ತಮವಾಗಿರುತ್ತಿತ್ತು. ಆದರೂ

ಕೆಲದಿನಗಳ ಈ ಕೆಲಸದ ಫಲಿತಾಂಶವು ಅಷ್ಟೇನೂ ಕೆಟ್ಟದಾಗಿರಲಿಲ್ಲ. ಕೊನೆಗೂ ಒಂದು ದಿನ 2 ಫೆಬ್ರವರಿ 1940 ರಂದು ನಾನು ಆ ಚಿತ್ರವನ್ನು ಶ್ರೀಮಾತೆಯವರ ಬಳಿಗೆ ಕೊಂಡೊಯ್ದೆ.

ಅವರು ಅದನ್ನು ಬಹು ಪ್ರೀತಿಯಿಂದ ಸ್ವೀಕರಿಸಿದರು. ಮತ್ತು ಆಶ್ಚರ್ಯದಿಂದ ಉದ್ಗರಿಸುತ್ತ: “ಓಹ್ ಇದು ಬಹು ಸುಂದರವಾಗಿದೆ! ಬಹು ಸುಂದರವಾಗಿದೆ!” ಎಂದು ಶ್ಲಾಘಿಸಿದರು. ಅಲ್ಲದೆ ಈ ಚಿತ್ರವನ್ನು ಬಿಡಿಸಲು ನನಗೆ ಸಮಯವು ಹೇಗೆ ದೊರಕಿತು ಎಂದು ಅವರು ಆಶ್ಚರ್ಯ ಪಟ್ಟರು. ಅವರು ಅವುಗಳನ್ನು ತಮ್ಮ ಎರಡೂ ಕೈಗಳಲ್ಲಿ ಹಿಡಿದುಕೊಂಡು ಮಂದಹಾಸದೊಂದಿಗೆ:

“ಚಂಪಕ್‌ಲಾಲ್! ನಾನು ಇವುಗಳನ್ನು ನಿಮಗೆ ನೀಡುತ್ತಿದ್ದೇನೆ ತೆಗೆದುಕೊಳ್ಳಿ, ಇವು ಬಹು ಸುಂದರವಾಗಿವೆ, ನೀವೇ ಇದನ್ನು ಇಟ್ಟುಕೊಳ್ಳಿ” ಎಂದು ನುಡಿಯುತ್ತ ಅದನ್ನು ನೀಡಲು ಮುಂದಾದರು. ನಾನು ಪ್ರತಿಕ್ರಿಯಿಸಲಿಲ್ಲ. ಅದನ್ನು ಸ್ವೀಕರಿಸಲೂ ಇಲ್ಲ. ಆಗ ಅವರು ಮತ್ತೊಮ್ಮೆ: “ಇದನ್ನು ತೆಗೆದುಕೊಳ್ಳಿ ಚಂಪಕ್‌ಲಾಲ್, ನಾನು ಇದನ್ನು ನಿಮಗೆ ಉಡುಗೊರೆಯಾಗಿ ನೀಡುತ್ತಿದ್ದೇನೆ” ಎಂದು ಹೇಳಿದರು. ಆಗ ನಾನು “ಆದರೆ ಶ್ರೀಮಾತೆ! ನಾನು ಇವುಗಳನ್ನು ನಿಮಗಾಗಿಯೇ ಸಿದ್ಧಪಡಿಸಿದ್ದೇನೆ” ಎಂದೆ. ನನ್ನ ಮನಸ್ಥಿತಿಯನ್ನು ಕಂಡು ಅವರು ಇನ್ನೊಂದು ಮಾರ್ಗವನ್ನು ಸೂಚಿಸುತ್ತ, ನಗುತ್ತ, ಅತ್ಯಂತ ಪಿಸುಮಾತಿನಲ್ಲಿ: “ಚಂಪಕ್‌ಲಾಲ್, ನಾನು ಇವುಗಳನ್ನು ಶ್ರೀ ಅರವಿಂದರ ಬಳಿಗೆ ಕೊಂಡೊಯ್ಯುತ್ತೇನೆ. ಮತ್ತು ಇವುಗಳ ಮೇಲೆ ಏನನ್ನಾದರೂ ಬರೆಯುವಂತೆ ಕೇಳಿಕೊಳ್ಳುತ್ತೇನೆ” ಎಂದರು.

ಆಗ ನಾನು, “ಶ್ರೀಮಾತೆ! ನೀವು ಇವುಗಳನ್ನು ಶ್ರೀ ಅರವಿಂದರ ಬಳಿಗೆ ಕೊಂಡೊಯ್ಯುತ್ತೀರಾ. ಹಾಗಿದ್ದರೆ ಇದರ ಮಹತ್ವವನ್ನು ಬರೆಯುವಂತೆ ನೀವು ಅವರಿಗೆ ಕೋರಿಕೊಂಡರೆ ತುಂಬಾ ಚೆನ್ನಾಗಿರುತ್ತದೆ. ಅವರು ಈ ಬಿಳಿ ಕಮಲದ ಮೇಲೆ ಬರೆಯಲಿ, ನೀವು ಕೆಂಪು ಕಮಲದ ಮೇಲೆ ಬರೆಯಿರಿ.”

ಶ್ರೀಮಾತೆಯವರು ಅವುಗಳನ್ನು ಶ್ರೀ ಅರವಿಂದರ ಬಳಿಗೆ ತಂದಾಗ ನಾನು ಅಲ್ಲಿಯೇ ಇದ್ದೆ. ಅವರು ಅದನ್ನು ಶ್ರೀ ಅರವಿಂದರಿಗೆ ತೋರಿಸುತ್ತ: “ನೋಡಿ ಇವು ಎಷ್ಟು ಚೆನ್ನಾಗಿವೆ! ಇಂದು ಚಂಪಕ್‌ಲಾಲ್ ಅವರ ಜನ್ಮದಿನ; ಅವರು ಈ ಚಿತ್ರಗಳನ್ನು ನನಗಾಗಿ ಚಿತ್ರಿಸಿದ್ದಾರೆ. ನೀವು ಈ ಪುಷ್ಪಗಳ ಮೇಲೆ ಅವುಗಳ

ಮಹತ್ವವನ್ನು ಕುರಿತು ಬರೆದರೆ ನಾನು ಇದನ್ನು ಅವರಿಗೆ ನೀಡುತ್ತೇನೆ. ನೀವು ಬಿಳಿ ಕಮಲದ ಮೇಲೆ ಬರೆಯಬೇಕೆಂದೂ, ನಾನು ಕೆಂಪು ಕಮಲದ ಮೇಲೆ ಬರೆಯಬೇಕೆಂದೂ ಅವರು ಬಯಸುತ್ತಿದ್ದಾರೆ.” ಶ್ರೀ ಅರವಿಂದರು ಅತ್ಯಂತ ಸುಂದರವಾಗಿ ಹಾಗೂ ಆತ್ಮೀಯವಾಗಿ “ಮ್ಮ” ಎಂದು ನಗುತ್ತ ಬಿಳಿ ಕಮಲದ ಮೇಲೆ ಹೀಗೆ ಬರೆದರು:

**ಅದಿತಿ**

ದಿವ್ಯಮಾತೆ

ಕೆಂಪು ಕಮಲದ ಮೇಲೆ ಶ್ರೀ ಅರವಿಂದರು ಹೀಗೆ ಬರೆದರು:

“ಚಂಪಕ್‌ಲಾಲ್ ಅವರಿಗೆ ಆಶೀರ್ವಾದಗಳೊಂದಿಗೆ”

2.2.40

ಶ್ರೀ ಅರವಿಂದರು

ಆ ನಂತರ, ಅವರು ನನ್ನತ್ತ ನೋಡಿ ನಕ್ಕರು. ನಂತರ ಶ್ರೀಮಾತೆಯವರು ಕೆಂಪು ಕಮಲದ ಮೇಲೆ ಹೀಗೆ ಬರೆದರು:

**ಅವತಾರ**

ಶ್ರೀ ಅರವಿಂದರು

ಕೆಂಪು ಕಮಲದ ಮೇಲೆ ಶ್ರೀಮಾತೆಯವರು ಹೀಗೆ ಬರೆದರು:

“ನನ್ನ ಪ್ರೀತಿಯ ಪುತ್ರ ಚಂಪಕ್‌ಲಾಲ್ ಅವರಿಗೆ ಆಶೀರ್ವಾದಗಳೊಂದಿಗೆ”

2.2.40

ಶ್ರೀಮಾತೆ

ಆದರೆ, ನಿಮಗೆ ತಿಳಿದಿರುವಂತೆ, ಕೆಲವು ವರ್ಷಗಳ ನಂತರ ಈ ಚಿತ್ರಗಳನ್ನು ವಿತರಣೆಗಾಗಿ ಮುದ್ರಿಸಲಾಯಿತು. ಒಂದು ಕಾಲದಲ್ಲಿ ಇವುಗಳನ್ನು ಯಾರಿಗೂ ತೋರಿಸಬೇಡಿ ಎಂದು ನನಗೆ ಹೇಳಿದ್ದರು. ಅದು ಏಕೆಂದು ನನಗೆ ಕೇಳಬೇಡಿ. ಏಕೆಂದರೆ, ನಂತರದ ದಿನಗಳಲ್ಲಿ ಪರಿಸ್ಥಿತಿ ಬದಲಾದವು. ಶ್ರೀಮಾತೆಯವರು ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿದ ವಿಷಯಕ್ಕೆ ಎಂದಿಗೂ ಕಟ್ಟುನಿಟ್ಟಾಗಿ ಅಂಟಿಕೊಳ್ಳುತ್ತಿರಲಿಲ್ಲ. ಈ ರೀತಿಯ ಹಲವಾರು ಉದಾಹರಣೆಗಳನ್ನು ನೀಡಬಲ್ಲೆ.

**– ಚಂಪಕ್‌ಲಾಲ್ ಅವರ ವಾಣಿಯಿಂದ: ಪುಟ 102–06**

## ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**43**

**ಎರಡನೆಯ ಸರಣಿ:**

**ಅಧ್ಯಾಯ – 6**

**ಕರ್ಮ, ಭಕ್ತಿ ಮತ್ತು ಜ್ಞಾನ (6/2)**

ಕರ್ಮ ಯೋಗವೂ ಸಹ ನಂತರದಲ್ಲಿ ಆರಾಧನೆ, ಭಕ್ತಿ, ಆತ್ಮ ಸಮರ್ಪಣೆಯೆಡೆಗೆ ತಿರುಗುತ್ತದೆ. ಏಕೆಂದರೆ ನಮ್ಮ ಸಂಕಲ್ಪ ಮತ್ತು ಕಾರ್ಯ ಎಲ್ಲವೂ ಪುರುಷೋತ್ತಮನಿಗೆ ಅರ್ಪಿತವಾಗಿರುತ್ತವೆ. ಬಾಹ್ಯದಲ್ಲಿ ಮಾಡುವ ಯಜ್ಞ ಯಾಗಾದಿ ಕರ್ಮಗಳು ಇದರ ಪ್ರಬಲ ಸಂಕೇತಗಳಾಗಿವೆ, ಅವು ಸ್ವಲ್ಪ ಮಟ್ಟಿಗೆ ಕಡಿಮೆ ಪ್ರಮಾಣ ಅಂದರೂ ಸ್ವರ್ಗದೆಡೆಗೆ ಮಾತ್ರ ಎಗ್ಗಿಲ್ಲದೇ ಬಾಗಿರುತ್ತವೆ. ಆದರೆ ನಿಜವಾದ ಯಜ್ಞ ಅಂದರೆ ಆಂತರಿಕ ಯಜ್ಞವೇ, ಅಲ್ಲಿ ಭಗವಂತನೇ ಸರ್ವಸ್ವ, ಅವನೇ ಸರ್ವಸ್ವ, ಯಜ್ಞವಿಧಿ, ಯಜ್ಞ ಹಾಗೂ ಯಜ್ಞದ ಪ್ರತಿಯೊಂದು ಸನ್ನಿವೇಶ ಕೂಡ ಅವನೇ ಆಗಿರುತ್ತಾನೆ. ಆಂತರಿಕ ವಿಧಿ ವಿಧಾನದ ಎಲ್ಲ ಪ್ರಕಾರಗಳು, ಆತ್ಮ-ನಿಗ್ರಹ ಹಾಗೂ ಆತ್ಮ ಅಭಿವ್ಯಕ್ತಿಗಳೇ ಆಗಿರುತ್ತವೆ. ಅವನ (ಪರಮಾತ್ಮನ) ಶಕ್ತಿಯೇ ನಮ್ಮ ಅಭೀಪ್ಸೆಯ ಮೂಲಕ ತನ್ನ ಮೂಲ ಸ್ಥಾನಕ್ಕೆ ಏರಿ ಹೋಗಲು ಹವಣಿಸುತ್ತಿರುತ್ತದೆ. ಸರ್ವಾಂತರ್ಯಾಮಿಯಾಗಿರುವ ಅವನೇ ಅಗ್ನಿ, ಅವನೇ ಆಜ್ಯವಾಗುತ್ತಾನೆ; ಅಗ್ನಿ ಶಿಖೆಯು ಭಗವಂತನೆಡೆಗೆ ಸಾಗಲಿರುವ ಅಭೀಪ್ಸೆ, ಆ ಅಭೀಪ್ಸೆಯೇ ನಿಜವಾಗಿ ನಮ್ಮೊಳಗಿರುವ ಭಗವಂತ. ಹವಿಸ್ಸು ಯಜ್ಞದಲ್ಲಿ ಆಹಾರ ರೂಪದಲ್ಲಿ ಬಳಸುವ ಆಜ್ಯ, ಜವೆ ಇತ್ಯಾದಿ ಎಲ್ಲವೂ ನಮ್ಮ ಪ್ರಕೃತಿಯಲ್ಲಿ, ನಮ್ಮಲ್ಲಿ ಇರುವ ದೈವೀ ಅಂಶ, ಅವನಿಂದ ನಮಗೆ ಏನೆಲ್ಲ ಬಳುವಳಿಯಾಗಿ ಸಿಕ್ಕಿದೆಯೋ, ಅದು ಪರಮ ಸತ್ಯದ ಸೇವೆಗಾಗಿ, ಆರಾಧನೆಗಾಗಿ ಕೊಡಲ್ಪಟ್ಟಿದೆ. ದೈವದ ಚಿಂತಕನೇ ಸ್ವತಃ ಮಂತ್ರನಾಗುತ್ತಾನೆ; ಅವನ ಸತ್ತೆಯ ಪ್ರಕಾಶವೇ ಅವನ ದೈವೋನ್ಮುಖ ವಿಚಾರಗಳಲ್ಲಿ ಪ್ರಕಟವಾಗುತ್ತದೆ, ವಿಚಾರಗಳಲ್ಲಿ ಅಡಗಿರುವ ಮಹತಿ, ವೈಭವ, ಪ್ರಕಾಶಗಳು ಸಾಧಕನ ಜೀವನದಲ್ಲೂ ಪ್ರತಿಫಲಿತವಾಗುತ್ತವೆ. ಪ್ರಕಾಶಮಯನಾಗಿ ಹೊಳೆಯುತ್ತಿರುವ ದೇವತೆ ವೇದ ಸ್ವರೂಪನೂ, ವೇದವಿಧನೂ ಆಗಿರುತ್ತಾನೆ.

ಅವನೇ ಜ್ಞಾನವೂ, ಜ್ಞೇಯವೂ ಆಗಿರುತ್ತಾನೆ. ಋಕ್, ಯಜುರ್, ಸಾಮ ಈ ಬೆಳಕಿನ ಸಾಕ್ಷಾತ್ಕಾರದ ಮಂತ್ರಗಳು ಮನಸ್ಸನ್ನು ಜ್ಞಾನದಿಂದ ಬೆಳಗಿಸುತ್ತವೆ, ಶಕ್ತಿಶಾಲಿಯಾದ ಶಬ್ದಗಳು ಸರಿಯಾದ ಕಾರ್ಯವೆಸಗಲು ಪ್ರೇರಿಸುತ್ತವೆ, ಶಾಂತಿ ಮತ್ತು ಸಾಮರಸ್ಯದ ಶಬ್ದಗಳು ಆತ್ಮ ಚೈತನ್ಯದ ದಿವ್ಯ ಹಂಬಲವನ್ನು ಮನದಲ್ಲಿ ತುಂಬುತ್ತವೆ, ಬ್ರಹ್ಮ ಅಂದರೆ ಅವುಗಳೇ ಪರಾತ್ಪರ ಭಗವಂತ ಅಂದರೂ ಅವನೇ. ದೈವೀ ಪ್ರಜ್ಞೆಯ ಮಂತ್ರವು ಸಾಕ್ಷಾತ್ಕಾರದ ಬೆಳಕು ಪ್ರಸಾದಿಸಿದರೆ ದೈವೀ ಶಕ್ತಿಯ ಮಂತ್ರ ದಿವ್ಯ ಶಕ್ತಿಗಳ ಕಾರ್ಯ, ಅದರ ಪರಿಣಾಮವನ್ನು ಸಂಕಲ್ಪಕ್ಕೆ ಜೋಡಿಸುತ್ತವೆ. ದೈವೀ ಆನಂದ ಮಂತ್ರ ಸತ್ತೆಯಲ್ಲಿ ಆಧ್ಯಾತ್ಮಿಕ ಆನಂದವನ್ನು ತುಂಬುತ್ತವೆ. ಎಲ್ಲ ಶಬ್ದಗಳು, ವಿಚಾರಗಳು ಮಹತ್ತರವಾದ ಓಂಕಾರದ ವಿಕಸನವನ್ನುಂಟು ಮಾಡುತ್ತವೆ. ಓಂಕಾರವು ದಿವ್ಯನಾದ, ಶಾಶ್ವತತೆಯ ಪರಮ ಸಾಕಾರನಾದ, ಎಲ್ಲ ಸಂವೇದನಾಶೀಲ ವಸ್ತುಗಳ, ಎಲ್ಲ ವಸ್ತುಗಳ ಹಾಗೂ ಆಕಾರಗಳ ರೀತಿಯನ್ನು ಸಂವರ್ಧಿಸುವಂತೆ ಮಾಡಿದ ಸೃಜನಶೀಲ ಸ್ವಯಮಾತ್ಮ ಪರಿಕಲ್ಪನೆ ಇವುಗಳ ಹಿಂದೆ ಓಂಕಾರವೇ ದೈವೀ ಉಗಮವಾಗಿ, ಬೀಜ ರೂಪವಾಗಿ, ಎಲ್ಲ ಸಂಗತಿ, ವಿಚಾರ, ಆಕಾರ ಹಾಗೂ ನಾಮ ರೂಪಗಳ ಆಧಾರವಾಗಿ ಹಿಂದೆ ಇದ್ದೇ ಇರುತ್ತದೆ. ಓಂಕಾರವೇ ಸಮಗ್ರವಾಗಿ, ಪರಮ ಅಸ್ಪರ್ಶನೀಯ ಮೂಲ ಏಕತ್ವವಾಗಿ, ಕಾಲಾತೀತ ರಹಸ್ಯವಾಗಿ, ಎಲ್ಲದರ ಮೇಲೆ, ಯಾರಿಗೂ ನಿಲುಕದ ಹಾಗೆ ವ್ಯಕ್ತ ಸೃಷ್ಟಿಯ ಮೇಲೆ ಇರುತ್ತದೆ. ಈ ಯಜ್ಞವು ಏಕಕಾಲಕ್ಕೆ ಕರ್ಮ ಯೋಗವೂ ಭಕ್ತಿ ಹಾಗೂ ಜ್ಞಾನ ಯೋಗವೂ ಆಗಿದೆ.

ಯಾರು ಇದನ್ನೆಲ್ಲ ಅರ್ಥಮಾಡಿಕೊಂಡು ಭಗವಂತನನ್ನು ಆರಾಧಿಸುತ್ತಾರೋ ತಮ್ಮೆಲ್ಲ ಕೆಲಸ, ಕಾರ್ಯ, ಚಟುವಟಿಕೆ, ಚಲನೆ ಎಲ್ಲವನ್ನೂ ಭಗವಂತನಿಗೆ ಸಮರ್ಪಿಸುತ್ತಾರೋ ಅವರಿಗೆ ಭಗವಂತನೇ ಸರ್ವಸ್ವ, ಸರ್ವಸ್ವವೂ ಭಗವಂತನೇ. ಆತನಿಗೆ ಭಗವಂತನೇ ತಂದೆ, ತನ್ನ ಮಕ್ಕಳನ್ನು ಪೋಷಿಸುವ, ಸಂತುಷ್ಟಪಡಿಸುವ ಹಾಗೂ ವೀಕ್ಷಿಸುವ ಪ್ರೀತಿಯ ತಂದೆ; ದೈವೀ ತಾಯಿ ಕೂಡ, ತನ್ನ ಮಡಿಲಲ್ಲಿ ಆಡಿಸಿ ಮುದ್ದು ಮಾಡಿ, ಪ್ರೀತಿ ಸುರಿದು, ಇಡೀ ಜಗವನ್ನೇ ತನ್ನ ಸೌಂದರ್ಯದಿಂದ ತುಂಬುವ ಮಹಾಮಾತೆ. ಭಗವಂತನೇ ಏಕೈಕ ಸೃಷ್ಟಿಕರ್ತ ಎಂದು ಅವನು ಬಲ್ಲ, ಭಗವಂತನೇ ಎಲ್ಲದರ ಮೂಲ, ಎಲ್ಲದರ ನಿರ್ಮಾತೃ, ದೇಶ–ಕಾಲಗಳ ಸಾಪೇಕ್ಷ ಚೌಕಟ್ಟಿನಲ್ಲಿ ಎಲ್ಲವನ್ನೂ ನಿರ್ಮಿಸುವವನು ಅವನೇ ಎಂಬುದು ಸಾಧಕ–ಜೀವಕ್ಕೆ

ಗೊತ್ತು. ಭಗವಂತನೇ ಇಡೀ ಬ್ರಹ್ಮಾಂಡದ ಪ್ರಭು, ಅವನೇ ನಿಯಾಮಕ, ಪ್ರತಿ ಪದಾರ್ಥ ಹಾಗೂ ಜೀವಿಯ ನಿಯೋಜಕ ಕೂಡ ಅವನೇ. ಯಾರು ಭಗವಂತನಿಗೆ ಶರಣಾಗಿದ್ದಾರೋ ಅವರಿಗೆ ಈ ವಿಧಿ, ಅನಿಶ್ಚಿತತೆ ಇತ್ಯಾದಿಗಳು ಲೆಕ್ಕವಿಲ್ಲ, ಅವರನ್ನು ಹೆದರಿಸಲಾರವು. ದುಃಖ, ಕೆಡಕುಗಳು ಅವರನ್ನು ಹಿಮ್ಮೆಟ್ಟಿಸಲಾರವು. ಈ ರೀತಿಯ ಸಾಧಕನಿಗೆ ಭಗವಂತನೇ ಪಥ, ಭಗವಂತನೇ ಗಮ್ಯ, ಅವನೇ ಮಾರ್ಗದರ್ಶಕ. ಅಂತೆಯೇ ಅಲ್ಲಿ ತಪ್ಪು ಹೆಜ್ಜೆ ಇಲ್ಲವೇ ಇಲ್ಲ, ಗುರಿ ಮುಟ್ಟದಿರುವ ಪ್ರಶ್ನೆಯೇ ಇಲ್ಲ. ಗಮ್ಯ ತಲುಪುವ ನಿಶ್ಚಿತತೆ ಇದ್ದೇ ಇರುತ್ತದೆ. ಭಗವಂತನೇ ಆತನಿಗೆ ಮನೆ, ಭಗವಂತನೇ ಅವನ ದೇಶ, ಅವನ ರಾಷ್ಟ್ರ, ಅವನ ಆಶ್ರಯದಾತ, ಅವನ ಎಲ್ಲ ಬಯಕೆ, ಶೋಧನೆಗಳ ಗುರಿ ಆತನೇ. ಹುಟ್ಟು, ಜೀವನ, ಸಾವು, ಬಾಹ್ಯ ಪ್ರಕಟನೆಯ ಜಗದ ಆದಿ ಮತ್ತು ಅಂತ್ಯ ಅವನ ಅನುಭವಕ್ಕೆ, ಅವನ ದೃಷ್ಟಿಗೆ, ಆ ಭಗವಂತನ ಅಭಿವ್ಯಕ್ತಿ, ಅವನ ನಿರ್ವಹಣೆ ಹಾಗೂ ನಿವೃತ್ತಿ. ನಿರಂತರ ಸೃಷ್ಟಿ ಪ್ರಕ್ರಿಯೆಯಲ್ಲಿ ಇವು ಕೂಡ ನಿರಂತರ ಸ್ಥಾಯಿಗಳಾಗಿವೆ ಎಂಬುದು ಸಾಧಕನಿಗೆ ಅರ್ಥ ಆಗುತ್ತದೆ. ಭಗವಂತನೊಬ್ಬನೇ ಅವಿನಾಶಿಯಾದ ಬೀಜ ರೂಪನಾಗಿ ಸರ್ವ ಪ್ರಕಟ ಸತ್ತೆಗಳಿಗೆ (ಜೀವ) ಜನ್ಮ ನೀಡುತ್ತಾನೆ. ಅವನೇ ಅವುಗಳ ನಾಶಕ್ಕೂ ಕಾರಣನಾಗುತ್ತಾನೆ. ಅವನೇ ಅವೆಲ್ಲಗಳ ಪರಮ ಶಾಶ್ವತ ನಿತ್ಯಧಾಮವಾಗಿದ್ದಾನೆ. ಅಪ್ರಕಟ ಸ್ಥಿತಿಯಲ್ಲಿ ಅವೆಲ್ಲವೂ ಅವನೊಳಗೆಯೇ ಇರುತ್ತವೆ. ಸೂರ್ಯನಲ್ಲಿ ಪ್ರಜ್ವಲಿಸುವ ಅಗ್ನಿ ಮತ್ತು ಶಾಖ ಅವನೇ, ಅವನೇ ವರ್ಷಧಾರೆ, ಅವನೇ ಅದರ ನಿಯಾಮಕ. ಎಲ್ಲ ಭೌತ ಪ್ರಪಂಚದ ಚಟುವಟಿಕೆಗಳಿಗೂ ಅವನೇ ಆಧಾರವಾಗಿದ್ದಾನೆ. ಸಾವು ಎಂಬುದು ಅವನ ಮುಸುಗು, ಅಮರತ್ವವು ಅವನ ಆತ್ಮ–ಸಾಕ್ಷಾತ್ಕಾರ. ನಾವು ಏನೆಲ್ಲವನ್ನು ಪ್ರಕಟ, ಸೃಷ್ಟಿ ಎಂದು ಕರೆಯುತ್ತೇವೆಯೋ, ಏನೆಲ್ಲ ಅಪ್ರಕಟ, ನಿರಾಕಾರ ಎಂದು ಕರೆಯುತ್ತೇವೆಯೋ, ಅದೆಲ್ಲವೂ ಅವನೇ. ಅನಭಿವ್ಯಕ್ತವಾದುದೆಲ್ಲವೂ ಅವನೊಳಗೆ ಇದ್ದೇ ಇರುತ್ತದೆ. ಅನಂತನಾದ ಅವನಲ್ಲಿ ಎಲ್ಲವೂ ಅನಿರ್ವಚನೀಯದ ಸತ್ತೆಯ ರಹಸ್ಯ ಭಾಗವಾಗಿ ಇದ್ದೇ ಇರುತ್ತದೆ (9/17–19).

ಉನ್ನತ ಜ್ಞಾನ ಮತ್ತು ಭಕ್ತಿ, ಪರಾತ್ಪರ ಪುರುಷನಿಗೆ ಸರ್ವಸ್ವವನ್ನು ಸಮರ್ಪಿಸುವುದರ ಹೊರತಾಗಿ ಬೇರೆ ಇನ್ನಾವುದೂ ಭಗವಂತನೆಡೆಗೆ ನಮ್ಮನ್ನು ತಲುಪಿಸಲಾರದು. ಬೇರೆ ಬೇರೆ ಇನ್ನಾವುದೂ ಭಗವಂತನೆಡೆಗೆ ನಮ್ಮನ್ನು ತಲುಪಿಸಲಾರದು. ಬೇರೆ ಬೇರೆ ಧರ್ಮಗಳು, ಪೂಜೆ–ಪುನಸ್ಕಾರ, ಬೇರೆ ಜ್ಞಾನ,

ಬೇರೆ ರೀತಿಯ ಶೋಧನೆ ಎಲ್ಲವೂ ತಮ್ಮದೇ ಆದ ಫಲ ನೀಡುತ್ತವೆ, ಆದರೆ ಅವೆಲ್ಲವೂ ತಾತ್ಕಾಲಿಕ, ಸೀಮಿತವಾಗಿರುತ್ತವೆ. ಇಲ್ಲಿ ನಮ್ಮ ಆಯ್ಕೆಗೆ ಮುಕ್ತ ಸ್ವಾತಂತ್ರ್ಯ ಇದೆ, ನಮ್ಮ ಮನೋಭಾವಕ್ಕನುಗುಣವಾಗಿ ಬಾಹ್ಯ ಮತ್ತು ಅಂತರ್ಜ್ಞಾನ, ಬಾಹ್ಯ ಮತ್ತು ಅಂತರಂಗದ ಶೋಧನೆ ಯಾವುದನ್ನಾದರೂ ಆಯ್ದುಕೊಳ್ಳಬಹುದು. ಬಾಹ್ಯ ಅಥವಾ ಬಹಿರಂಗದ ಧರ್ಮವು ಬಹಿರಂಗದಲ್ಲಿನ ದೇವತೆಯನ್ನು ಪೂಜಿಸುವುದು, ಬಾಹ್ಯ ಸಂತೋಷವನ್ನು ಅರಸುವುದು. ಅದರ ಭಕ್ತರು ತಮ್ಮ ನಡತೆಯನ್ನು ಶುದ್ಧೀಕರಿಸಿಕೊಳ್ಳುತ್ತಾರೆ. ಪಾಪಗಳನ್ನು ಕಳೆದುಕೊಂಡು ಸಕ್ರಿಯ ಜೀವಂತ ನೈತಿಕತೆಯನ್ನು ಅನುಸರಿಸುತ್ತ ಒಂದು ನಿರ್ದಿಷ್ಟ ನಿಯಮವನ್ನು ಪಾಲಿಸಲು ಯತ್ನಿಸುತ್ತಾರೆ, ನಿರ್ದಿಷ್ಟ ಶಾಸ್ತ್ರವನ್ನು, ಬಾಹ್ಯ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಾರೆ. ಅವರು ಉತ್ಸವ, ಧಾರ್ಮಿಕ ಆಚರಣೆಗಳ ಮೂಲಕ ಬಾಹ್ಯದಲ್ಲಿನ ಏಕತೆಯನ್ನು ಅರಸುತ್ತಾರೆ. ಆದರೆ ಅವರ ಗುರಿ ಇರುವುದು ಮರ್ತ್ಯ ಸುಖವನ್ನು ಪಡೆಯಬೇಕೆಂಬುದರಲ್ಲಿಯೇ, ಈ ಮರ್ತ್ಯ ಲೋಕದ ಸುಖ, ಸಂತೋಷಗಳಾಚೆ ಬೇರೆ ಉನ್ನತ ಲೋಕಗಳ ಸುಖವನ್ನು ಪಡೆಯುವ ವೈಯಕ್ತಿಕ ಬಯಕೆ ಇರುತ್ತದೆ. ಸುಖ, ದುಃಖ, ನೋವು, ನಲಿವು ಏನೇ ಆದರೂ ಅದು ತೀರ ಪಾರ್ಥಿವ ಜೀವನಕ್ಕೆ ಬದ್ಧವಾಗಿರುತ್ತದೆ, ಅವರು ಎಲ್ಲವನ್ನೂ ಪಡೆಯುವುದು ತಮ್ಮ ನಂಬಿಕೆ, ವಿಶ್ವಾಸ, ಸರಿಯಾದ ನಡೆ ನುಡಿಯ ಚಾರಿತ್ರ್ಯದ ಮೂಲಕ; ಏಕೆಂದರೆ ಭೌತಿಕ ಅಸ್ತಿತ್ವ ಹಾಗೂ ಭೂಮಿಯ ಮೇಲೆ ಎಲ್ಲ ರೀತಿಯ ಚಟುವಟಿಕೆಗಳು ಮಾತ್ರ ನಮ್ಮ ವ್ಯಕ್ತಿಗತ ಸಂಭೂತಿಗೆ (ಆಗುವಿಕೆಗೆ) ಕಾರಣವೆಂದು ಹೇಳಲಾಗದು, ಆ ನಿಯಮ ಇಡೀ ಬ್ರಹ್ಮಾಂಡಕ್ಕೆ ಅನ್ವಯವಾಗುವುದೆಂದು ಹೇಳಲಾಗದು. ಹೆಚ್ಚು ಆನಂದದಾಯಕವಾಗಿರುವ ಅನೇಕ ಲೋಕಗಳಿವೆ, 'ಸ್ವರ್ಗಲೋಕಂ ವಿಶಾಲಮ್' (9/20) ಹೀಗೆ ಪ್ರಾಚೀನ ಕಾಲದ ಕರ್ಮಕಾಂಡ ಪ್ರವರ್ತಕರು ಮೂರು ವೇದಗಳ ಬಾಹ್ಯ ಅರ್ಥವನ್ನು ಅರಿತು, ಅದರಂತೆ ಆಚರಿಸಿ ತಮ್ಮ ಪಾಪಗಳನ್ನು ಪರಿಹರಿಸಿಕೊಂಡು ಶುದ್ಧರಾದರು, ದೇವತೆಗಳ ಜೊತೆ ಏಕೀಭವಿಸುವ ಸುರಾಪಾನ ಮಾಡಿದರು, ತಮ್ಮ ಸತ್ಕರ್ಮಗಳಿಂದ ಹಾಗೂ ಯಜ್ಞ ವಿಧಿಗಳಿಂದ ಸ್ವರ್ಗ ಪ್ರಾಪ್ತಿಯ ಫಲವನ್ನು ಪಡೆದರು, ಪರಲೋಕದ ಬಗ್ಗೆ ಅವರಿಗಿದ್ದ ಬಲವಾದ ನಂಬಿಕೆ ಹಾಗೂ ದಿವ್ಯ ಲೋಕಗಳ ಪ್ರಾಪ್ತಿಗಾಗಿ ಮಾಡುವ ಅವರ ಸಾಧನೆ, ಅವರ ಸ್ವರ್ಗದಾನಂದವನ್ನು ಪಡೆಯುವ ಯೋಗ್ಯತೆಯನ್ನು ತಂದು ಕೊಟ್ಟಿತು. ಆದರೆ

ಕಾಲಾಂತರದಲ್ಲಿ ಪುನಃ ಭೂಲೋಕಕ್ಕೆ ಮರಳಿ ಬರುವುದು ಅವರಿಗೆ ಅನಿವಾರ್ಯವಾಗಿದ್ದುದೇಕೆಂದರೆ 'ಇದರ ಅಸ್ತಿತ್ವವನ್ನು' ನಿಜವಾದ ಅರ್ಥದಲ್ಲಿ ಗ್ರಹಿಸದಿರುವುದೇ ಆಗಿತ್ತು. ಬೇರೆಡೆಯಲ್ಲಿ ಅಲ್ಲ, ಇಲ್ಲಿ ನಾವು ವಾಸ ಮಾಡುವ ಭೂಮಿಯ ಮೇಲೆಯೇ ಭಗವಂತನನ್ನು ನಾವು ಸಾಕ್ಷಾತ್ಕರಿಸಿಕೊಳ್ಳಬೇಕು, ಅಪರಿಪೂರ್ಣವಾದ ಮಾನವ ಪ್ರಕೃತಿಯನ್ನು ಎತ್ತರಿಸಿ ದೈವತ್ವದ ಎತ್ತರಕ್ಕೆ ಒಯ್ಯಬೇಕು ಮತ್ತು ಮಾನವ, ವಿಶ್ವ ಹಾಗೂ ಇಡೀ ಅಸ್ತಿತ್ವದ ವಿಶಾಲವಾದ ಸತ್ಯವನ್ನು ಪರಾತ್ಪರನಾದ ಭಗವಂತನ ಜೊತೆಗೆ ಸಂಲಗ್ನಗೊಳಿಸಬೇಕು. ಅದರಂತೆ ಬದುಕಿ ದಿವ್ಯ ಏಕತೆಯನ್ನು ಪ್ರಕಟಗೊಳಿಸಬೇಕು – ಇದೇ ನಿಜವಾದ ಗುರಿ – ನಿಜವಾಗಿ ಇದುವೇ ನಮ್ಮ ವಿಕಾಸ ಚಕ್ರದ ಬೃಹದ್ ಗಮ್ಯ, ಇದೇ ನಮಗೆ ನಿಜವಾದ ಪರಾಸತ್ಯದ ದರ್ಶನ ಮಾಡಿಸಬಲ್ಲದು. ಭಗವಂತನು ಜೀವಾತ್ಮನಿಗೆ ನೀಡಿದ ನಿಜವಾದ ಅವಕಾಶ ಇದು, ಎಲ್ಲಿಯವರೆಗೆ ನಾವಿದನ್ನು ಸದುಪಯೋಗ ಪಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಚಕ್ರದ ಪರಿಭ್ರಮಣ ನಿಲ್ಲದು. ಭಕ್ತನಾದವನು ನಿರಂತರವಾದ ಆರಾಧನೆ ಮತ್ತು ಕೇಂದ್ರಿಕೃತವಾದ ಪರಮ ಭಕ್ತಿಯಿಂದ ತನ್ನ ಇಡೀ ಜೀವನವನ್ನೇ ಭಗವತ್ ಪ್ರಾಪ್ತಿಯ ಏಕೈಕ ಉದ್ದೇಶವನ್ನಾಗಿ ಮಾಡಿಕೊಂಡು ಪರಮಾತ್ಮನ ಏಕತೆಯ ಕಡೆಗೆ ಸಾಗುತ್ತಾನೆ. ಅಲ್ಲಿ ಯಾವ ಬಾಹ್ಯ ಅಹಂಕಾರದ ಆಶೆ, ಬಯಕೆಗಳಿರುವುದಿಲ್ಲ, ಸ್ವರ್ಗದ ಬಯಕೆ ಕೂಡ ಇರುವುದಿಲ್ಲ. ಅವನ ವಿಚಾರ, ಬುದ್ಧಿ, ಮನಸ್ಸು ಎಲ್ಲವನ್ನೂ ತುಂಬಿರುವುದು ಭಗವಂತನ ಪ್ರೇಮ ಒಂದೇ. ಇನ್ನಾವುದೂ ಅವನ ಗಮನಕ್ಕೆ ಬರುವುದೇ ಇಲ್ಲ. ಅವನಿಗೆ ಎಲ್ಲೆಡೆ ಭಗವಂತನೇ ಕಾಣುತ್ತಾನೆ ಬೇರೆ ಏನೂ ಕಾಣುವುದೇ ಇಲ್ಲ. ಪ್ರತಿಯೊಂದು ಕ್ಷಣವೂ ಭಗವಂತನಿಗಾಗಿ ತುಡಿಯುತ್ತ ಬದುಕುತ್ತಾನೆ, ಅವನ ಜೊತೆ ತಾದಾತ್ಮ್ಯನಾಗಿಯೇ ಬದುಕುತ್ತಾನೆ. ಎಲ್ಲ ಜೀವಿಗಳಲ್ಲಿಯೂ ಅವನಿಗೆ ಭಗವಂತನೇ ಕಾಣುತ್ತಾನೆ. ಅವನ ಜೀವನದ ಯಾವ ಕ್ಷಣದಲ್ಲಿಯೂ ಭಗವಂತನಿಂದ ದೂರವಾಗಿರುವುದಿಲ್ಲ. ಅವನ ಅಂತರಂಗದ ಹಾಗೂ ಬಹಿರಂಗದ ಸಮಸ್ತ ಯೋಗಕ್ಷೇಮವು ಭಗವಂತನನ್ನೇ ಅವಲಂಬಿಸಿರುತ್ತದೆ (9.22). ಭೂಮಂಡಲದ ಮೇಲಿನ ಭೋಗ ಹಾಗೂ ಸ್ವರ್ಗದಲ್ಲಿನ ಭೋಗೈಶ್ವರ್ಯಗಳು ಅವನ ಆನಂದದ ನೆರಳು; ಸಾಧಕನು ಬೆಳೆದಂತೆ ಭಗವಂತನೂ ಅವನಲ್ಲಿ ಅಭಿವ್ಯಕ್ತನಾಗುತ್ತಾನೆ, ಅವನ ಬೆಳಕು, ಜ್ಞಾನ, ಶಕ್ತಿ, ಆನಂದಗಳು ದಿವ್ಯವಾಗಿ ಅವನ ಮೂಲಕ ಪ್ರವಹಿಸುತ್ತವೆ.

ಸಾಮಾನ್ಯ ಧರ್ಮವು ಸಂಪೂರ್ಣ ಭಗವಂತನಿಗಾಗಿ ಇರದೇ ಆಂಶಿಕ ದೇವಾಧಿ ದೇವತೆಗಳ ನಿಮಿತ್ತ ಮಾಡಿದ ಯಜ್ಞವಾಗಿರುವುದು. ಗೀತೆಯು ಆ ಕಾಲದಲ್ಲಿ ಪ್ರಚಲಿತವಿದ್ದ ಅಥವಾ ಬೆಳೆದು ಬಂದಿದ್ದ ವೇದಗಳ ಬಾಹ್ಯ ಧರ್ಮದ ಕ್ರಿಯಾ ಕರ್ಮಗಳನ್ನು ಉದಹರಿಸುತ್ತದೆ. ಈ ರೀತಿಯ ಬಾಹ್ಯ ಯಜ್ಞವನ್ನು ಗೀತೆಯು ಅನ್ಯ ದೇವತೆಗಳಿಗೆ ಸಲ್ಲುವ ಆರಾಧನೆ ಎಂದು ಹೇಳುತ್ತದೆ. ಅನ್ಯ ದೇವತಾಃ ಅಥವಾ ದೇವ ಸ್ವರೂಪಿಗಳಾದ ಪಿತೃಗಳು, ಪ್ರಾಕೃತಿಕ ಶಕ್ತಿಗಳು, ಭೂತಗಳು ಇವುಗಳಿಗೆ ಅರ್ಪಿಸುವ ವಿಧಿ ಎಂದು ಹೇಳುತ್ತದೆ. "ದೇವಾನ್, ಪಿತ್ರೂನ್, ಭೂತಾನಿ" ಮಾನವರು ಸಾಮಾನ್ಯವಾಗಿ ಅರೆದೇವತೆಗಳಿಗೆ ತಮ್ಮ ಬದುಕನ್ನು ಮೀಸಲಿಡುತ್ತಾರೆ, ಅವರನ್ನೇ ದೇವತೆಗಳೆಂದು ಅವರು ಭಾವಿಸಿರುತ್ತಾರೆ. ಪ್ರಕೃತಿಯಲ್ಲಿ ಮತ್ತು ಮಾನವರಲ್ಲಿ ಕಂಡು ಬರುವ ಮುಖ್ಯ ಸಂಗತಿಗಳು ಅಂತರಂಗದಲ್ಲಿ ಭಗವಂತನ ಶಕ್ತಿಯ ಪ್ರತೀಕಗಳಾಗಿವೆ ಎಂದು ನಂಬಿಕೊಂಡು ಉಪಾಸನೆ ಮಾಡುತ್ತಾರೆ. ಈ ಉಪಾಸನೆಯನ್ನು ಶ್ರದ್ಧೆಯಿಂದ, ಭಕ್ತಿಯಿಂದ ಮಾಡಿದರೆ ಅವರ ಕರ್ಮ ಸಫಲವಾಗುತ್ತದೆ. ಉಪಾಸಕನು ಕಲ್ಪಿಸಿಕೊಂಡ ರೂಪ, ಆಕಾರ, ಪ್ರತಿಮೆ ಎಲ್ಲವೂ ತನ್ನವೆಂದೇ ಭಗವಂತನು ಸ್ವೀಕರಿಸಿ, ಆಯಾ ರೂಪದಲ್ಲಿಯೇ ಅವನಿಗೆ ಕಾಣಿಸಿಕೊಂಡು ಫಲ ನೀಡುತ್ತಾನೆ. ಯಾಂಯಾಂ ತನುಂ ಶ್ರದ್ಧಯಾ ಅರ್ಚತಿ ಎಂದು ಗೀತೆಯಲ್ಲಿ ಬೇರೆಡೆ ಹೇಳಲಾಗಿದೆ. ಶ್ರದ್ಧಾ ಪೂರ್ವಕ ಮಾಡಿದ ಧಾರ್ಮಿಕ ವಿಧಿ ವಿಧಾನಗಳು ವಾಸ್ತವವಾಗಿ ಏಕಮೇವ ಭಗವಂತನ ಪುರಸ್ಸರವಾಗಿಯೇ ಇರುತ್ತವೆ, ಅವನ ಆನ್ವೇಷಣೆಯ ಪ್ರಯತ್ನವೇ ಆಗಿರುತ್ತದೆ. ಏಕೆಂದರೆ ಭಗವಂತನು ಯಜ್ಞದ, ತಪಸ್ಸಿನ, ಏಕಮೇವ ಪ್ರಭು, ಅವನೇ ಭೋಕ್ತಾರನಾಗಿದ್ದಾನೆ. ಪೂಜೆಯ ವಿಧಾನ ಹೆಚ್ಚು ಕಡಿಮೆಯಾಗಿರಬಹುದು, ಸ್ವರೂಪ ಕೀಳಾಗಿರಲಿ ಉನ್ನತವಾಗಿರಲಿ, ಕಲ್ಪನೆ ಸಿಮಿತವಾಗಿರಲಿ, ಹೇಗೆಯೇ ಇರಲಿ ಮಾನವನ ಅಹಂಕಾರದ ಪರದೆಯನ್ನು ಹರಿದು ಅದರ ಹಿಂದಿನ ಸತ್ಯ ದರ್ಶನದ ಅಭೀಪ್ಸೆಯಿಂದ ಮಾಡಿದ ಶ್ರದ್ಧಾನ್ವಿತ ಸಾಧನೆಯು ವಿಫಲವಾಗುವುದು ಸಾಧ್ಯವೇ ಇಲ್ಲ. ಸಾಧಕನ ಪ್ರಯತ್ನಕ್ಕೆ ತಕ್ಕ ಫಲ ದೊರಕಿಯೇ ತೀರುತ್ತದೆ; ಆದರೆ ಇಷ್ಟೇ ಸಮರ್ಪಣೆ, ಆರಾಧನೆಗಳ ಫಲವು ಅವುಗಳ ಹಿಂದಿರುವ ಕರ್ಮ, ಶ್ರದ್ಧೆ, ಅಭೀಪ್ಸೆ, ಜ್ಞಾನ ಇವುಗಳಿಗೆ ಅನುಗುಣವಾಗಿರುತ್ತದೆ, ಅವುಗಳ ಮಿತಿಯನ್ನು ದಾಟದು. ಆದ್ದರಿಂದ ಶುದ್ಧ ಅಸ್ತಿತ್ವ Being ಮತ್ತು ನಾಮ ರೂಪಾತ್ಮಕ ಅಸ್ತಿತ್ವ

Becoming ಸಮಗ್ರ ಸತ್ಯವನ್ನು ದರ್ಶನ ಮಾಡಲು, ಈಶ್ವರ ಪ್ರಾಪ್ತಿಯನ್ನು ಹೊಂದಲು ಕೆಳಸ್ತರದ ಕರ್ಮಗಳು ಸಮರ್ಥವಾಗಲಾರವು. ಅವು ಪರಾತ್ಪರ ಶ್ರೇಷ್ಠ ಅಸ್ತಿತ್ವ ಜ್ಞಾನದ ಆಧಾರಗಳಾಗಿರುವುದಿಲ್ಲ. ನಮಾಂ ಅಭಿಜಾನಂತಿ ತತ್‌ತ್ವೇನ – ಆದ್ದರಿಂದ ಇಂಥ ಯಜ್ಞದ ಸಮರ್ಪಣೆಯ ಗುರಿ ಸಂಕುಚಿತವಾಗಿರುವುದು ಹಾಗೂ ಅಹಂಕಾರಯುಕ್ತವಾಗಿರುವುದು. ಈಶ್ವರನ ಸಮಗ್ರ ದರ್ಶನವಾಗಬೇಕಾದರೆ ಆತ್ಮ ಸಮರ್ಪಣೆಯು ಸಜೀವ, ಸಚೇತನವಾಗಿರಬೇಕು. ಉಳಿದಂತೆ ಎಲ್ಲ ಕರ್ಮಗಳು ಅಪೂರ್ಣವೇ, ಯಜಂತಿ ಅವಿಧಿ ಪೂರ್ವಕಮ್. ಭಗವಂತನನ್ನೇ ಕಾಣುವುದು ಅವನ ಹೊರತಾಗಿ ಬೇರೆ ಏನನ್ನೂ ಕಾಣದಿರುವುದು ನಿಜವಾದ ಪ್ರಜ್ಞಾಪೂರ್ವಕ ಸಮರ್ಪಣೆಯ ಲಕ್ಷಣ. ಈಶ್ವರಾನುಭೂತಿಯ ನಂತರ ಸಾಧನಾ ಕ್ಷೇತ್ರವನ್ನು ವಿಸ್ತರಿಸಿಕೊಂಡು ವಿಶ್ವವ್ಯಾಪಿ, ವಿಶ್ವಾತೀತ ಪರಮೇಶ್ವರನ ಅನನ್ಯ ಅನುಸಂಧಾನ ಮಾಡಬೇಕು. ಕೇವಲ ತನ್ನ ವೈಯಕ್ತಿಕ ಆತ್ಮ ಸಿದ್ಧಿಗೆ ನಿಲ್ಲದೇ ಜೀವನದ ಪ್ರತಿ ಅಂಗಗಳಲ್ಲಿ ಅದನ್ನು ಅಭಿವ್ಯಕ್ತಗೊಳಿಸುವ ಸಾಧನೆ ಮಾಡಬೇಕು (9/23–25).

ಸಂಪೂರ್ಣ ನಿರ್ವಿಶೇಷ ಆತ್ಮ ಸಮರ್ಪಣೆಯನ್ನೇ ಗೀತೆಯು ನಿಜವಾದ ಭಕ್ತಿ ಎಂದು ಹೇಳುತ್ತ ಸಮನ್ವಯ ಸೂತ್ರದ ಪ್ರಮುಖ ಅಂಗವೆಂದು ಘೋಷಿಸುತ್ತದೆ. ಜೀವನದಲ್ಲಿನ ಎಲ್ಲ ಕರ್ಮಗಳು, ಕ್ರಿಯೆಗಳು, ಚಟುವಟಿಕೆಗಳು ವಿಶ್ವಾತ್ಮಕನಾದ ಭಗವಂತನಿಗೆ ಸರ್ವಭಾವೇನ ಸರ್ವ ಪ್ರಯತ್ನೇನ ಸಮರ್ಪಿಸಬೇಕೆಂಬುದೇ ಗೀತೆಯ ಘೋಷವಾಕ್ಯ – "ನೀನು ಏನನ್ನೇ ಮಾಡಲಿ ಏನನ್ನೇ ಅನುಭವಿಸಲಿ, ಆನಂದಿಸಲಿ, ಯಜ್ಞದಲ್ಲಿ ಸಮರ್ಪಿಸಲಿ ಏನೇ ತಪಸ್ಸು ಮಾಡಲಿ, ಶ್ರಮ ಪಡಲಿ, ಎಲ್ಲವನ್ನೂ ನನಗೆ ಅರ್ಪಿಸು" ಎಂದು ಕೃಷ್ಣ ಹೇಳುತ್ತಾನೆ (9/27). ಎಷ್ಟು ಸಣ್ಣ ಸಂಗತಿಯೇ ಇರಲಿ, ವಸ್ತುವೇ ಇರಲಿ, ತನ್ನ ಬಳಿ ಇರುವ ಎಷ್ಟು ಕ್ಷುಲ್ಲಕ ವಸ್ತುವಾದರೂ ಇರಲಿ ಅಥವಾ ಎಂಥ ವೈಶಿಷ್ಟ್ಯ ಪೂರ್ಣವಾದ ಘನವಸ್ತುವೇ ಇರಲಿ – ಒಟ್ಟಿನಲ್ಲಿ ತನ್ನಲ್ಲಿ ಏನಿದೆಯೋ ಅದೆಲ್ಲವನ್ನೂ ಭಗವಂತನಿಗೆ ಅರ್ಪಿಸಬೇಕು – ಅದು ಎಂಥದೇ ಇರಲಿ ಭಗವಂತ ಸ್ವೀಕರಿಸುತ್ತಾನೆ. ಅದನ್ನೇ ಭಗವತ್ ಪ್ರಾಪ್ತಿಯ ಸಾಧನವನ್ನಾಗಿ ಭಗವಂತನು ಮಾಡುತ್ತಾನೆ. ಆಗ ಅಹಂ ಮತ್ತು ಕಾಮನೆಗಳ ಭೇದವೇ ಅಳಿದು ಹೋಗುತ್ತದೆ. ತಾನು ಮಾಡಿದ ಕರ್ಮಕ್ಕೆ ಪ್ರತಿಫಲ ಬಯಸುವುದಿಲ್ಲ, ಕೆಟ್ಟ ಪ್ರತಿಫಲ ಬಂದೀತು ಎಂಬ ಭಯವಿಲ್ಲ, ಅದರ

ಬಗ್ಗೆ ಚಿಂತೆ ಇಲ್ಲ. ಎಲ್ಲ ಕರ್ಮಗಳು ಹಾಗೂ ಫಲ ಆ ಭಗವಂತನಿಗೇ ಅರ್ಪಿತವಾಗಿ ಬಿಟ್ಟರೆ ಮುಂದೆ ಬಂಧನವೆಂಬುದೇ ಇರುವುದಿಲ್ಲ. ಸಂಪೂರ್ಣ ಸಮರ್ಪಣೆಯು ಅಹಂಕಾರವನ್ನು, ಅಹಂನ ಬೇಡಿಕೆಯನ್ನು ಕಿತ್ತು ಹಾಕುತ್ತದೆ. ಆಗ ವೈಯಕ್ತಿಕ ಮತ್ತು ವಿಶ್ವಾತ್ಮಕ ಪರಮಾತ್ಮನ ನಡುವೆ ಭೇದ ಮಾಯವಾಗುತ್ತದೆ. ಎಲ್ಲ ಸಂಕಲ್ಪ, ಬಯಕೆ, ಕರ್ಮ, ಫಲ ಎಲ್ಲವೂ ಭಗವಂತವೇ ಆಗಿ ಬಿಡುತ್ತವೆ. ಪರಿಶುದ್ಧವಾದ, ಪ್ರಕಾಶಿತವಾದ ಪ್ರಕೃತಿಯಿಂದ ಮಾಡುವ ಎಲ್ಲ ಕರ್ಮಗಳೂ ಅಹಂನ ಸ್ಪರ್ಶದಿಂದ ಬಹಳ ದೂರ ಮೇಲಕ್ಕೆ ಏರುತ್ತವೆ. ಸಾಂತವಾದ ಪ್ರಕೃತಿಯು ಭಗವತ್ ಸಮರ್ಪಣೆಯ ಮೂಲಕ ಅನಂತದ ಮಾಧ್ಯಮವಾಗಿ ಬದಲಾಗುತ್ತದೆ. ಜೀವವು ಆಧ್ಯಾತ್ಮಿಕ ಚೈತನ್ಯದಲ್ಲಿ ನೆಲೆಯಾಗಿ ಅವಿದ್ಯೆ, ಸೀಮಿತತೆಗಳಿಂದ ಬಿಡುಗಡೆ ಹೊಂದುತ್ತದೆ, ಶಾಶ್ವತನಾದ ಭಗವಂತನ ಜೊತೆ ತಾದಾತ್ಮ್ಯ ಹೊಂದುತ್ತದೆ. ಈಶ್ವರನೇ ಸಕಲ ಜೀವರಾಶಿಗಳಲ್ಲಿ ವಾಸ ಮಾಡುತ್ತಾನೆ. ಎಲ್ಲದರಲ್ಲೂ ಸಮನಾಗಿರುತ್ತಾನೆ, ಎಲ್ಲರ ಸ್ನೇಹಿತ, ತಂದೆ–ತಾಯಿ, ಸೃಷ್ಟಿಕರ್ತೃ, ಭಕ್ತ, ಸರ್ವ ಸೃಷ್ಟಿಗೆ ಆಧಾರಕನಾಗಿರುತ್ತಾನೆ. ಅವನು ಯಾರನ್ನೂ ದೂಷಿಸುವುದಿಲ್ಲ, ಯಾರನ್ನೂ ಅನಗತ್ಯ ಅಟ್ಟಕ್ಕೇರಿಸುವುದಿಲ್ಲ, ಅವನು ಎಲ್ಲರಲ್ಲೂ ಎಲ್ಲದರಲ್ಲೂ ಏಕ ರೀತಿ ಇರುತ್ತಾನೆ. ಮಾನವನಾದವನು ಇಷ್ಟು ತೀವ್ರತರವಾದ ಭಕ್ತಿಯನ್ನು ಮಾಡಿದರೆ ಭಗವಂತನೇ ಕೆಳಗಿಳಿದು ಬಂದು ಮಾನವನಲ್ಲಿ ವಾಸ ಮಾಡುತ್ತಾನೆ. ಆಗ ಪರಿಪೂರ್ಣ ತಾದಾತ್ಮ್ಯ ಸಂಭವಿಸುತ್ತದೆ. ಪರಾತ್ಪರನಾದ ಭಗವಂತನ ಮೇಲಿನ ಪ್ರೀತಿಯು, ಭಕ್ತಿ ಹಾಗೂ ಸಂಪೂರ್ಣ ಆತ್ಮ–ಸಮರ್ಪಣೆಗಳು ದೈವೀ ಏಕತೆಯ ಅನನ್ಯ, ನೇರ ಹಾಗೂ ಸಮೀಪದ ದಾರಿಯಾಗಿದೆ (9/26–29).

ದೈವ ಸಾನಿಧ್ಯದ ಏಕತೆಯು ಎಲ್ಲರಲ್ಲೂ ಸಮನಾಗಿದ್ದು ಯಾವುದೇ ಆದ್ಯತೆ, ವಿಶೇಷತೆಗಳನ್ನು ಗಮನಿಸುವುದಿಲ್ಲ. ಆತ್ಮ ಸಮರ್ಪಣೆಯು ಶ್ರದ್ಧೆಯಿಂದ ನಿಷ್ಠೆಯಿಂದ ಕೂಡಿಕೊಂಡು ಸಮಗ್ರವಾಗಿದ್ದರೆ ಯಾವ ಬೇರೆ ನಿಯಮಗಳೂ ಅನ್ವಯವಾಗುವುದಿಲ್ಲ. ಇಲ್ಲಿ ಎಲ್ಲರಿಗೂ ಸಮಾನ ಅವಕಾಶ ಇದೆ, ಸಮಾನ ಪ್ರವೇಶವಿದೆ. ಭಗವಂತನು ಪ್ರೇಮಮಯನು, ಅವನ ಮಂದಿರದಲ್ಲಿ ಯಾರೂ ಹೆಚ್ಚಲ್ಲ ಯಾರೂ ಕೀಳಲ್ಲ, ಎಲ್ಲರೂ ಸಮಾನ – ಅಲ್ಲಿ ಸದಾಚಾರಿಗೆ ವಿಶೇಷ ಗೌರವ, ಪಾಪಿಷ್ಟನಿಗೆ ಪ್ರವೇಶವಿಲ್ಲ ಅಂತೇನೂ ಇಲ್ಲ. ಪರಿಶುದ್ಧನಾದ ಬ್ರಾಹ್ಮಣ ತನ್ನ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡುವವನೇನೂ ಶ್ರೇಷ್ಠನಲ್ಲ, ಕನಿಷ್ಠ

ನೆನೆಸಿಕೊಳ್ಳುವ, ಕೀಳು ಜಾತಿಯಲ್ಲಿ ಜನಿಸಿದ, ಪಾಪ, ದುಃಖಗಳ ಜೀವನದಲ್ಲಿಯೇ ನಲುಗಿ ಹೋಗಿರುವ ಶೂದ್ರನೇನೂ ನಿಷಿದ್ಧನಲ್ಲ; ಮುಕ್ತಿಯ ಪ್ರವೇಶ ದ್ವಾರದಲ್ಲಿ ಎಲ್ಲರಿಗೂ ಸಮಾನ ಅವಕಾಶ ಇದೆ. ಭಗವಂತನ ಸನ್ನಿಧಾನಕ್ಕೆ ಪ್ರತ್ಯೇಕ ದ್ವಾರಗಳಿಲ್ಲ ಎಲ್ಲರೂ ಸಮಾನ, ಎಲ್ಲರಿಗೂ ತೆರೆದ ಬಾಗಿಲು. ಸ್ತ್ರೀ ಪುರುಷರ ಭೇದ ಈ ಜಗದಲ್ಲಿ ಮಾತ್ರ, ಅಲ್ಲಿ ಆ ಭೇದವೇ ಇಲ್ಲ. ಸಾಮಾಜಿಕ ಪ್ರತಿಷ್ಠೆಯ, ಪ್ರಸಿದ್ಧ ಪುರುಷರಿಗೆ ಹೆಚ್ಚಿನ ಆದ್ಯತೆ ಎಂಬುದೇನೂ ಅಲ್ಲಿಲ್ಲ. ಯಾರೂ ಆ ಭಗವಂತನಲ್ಲಿಗೆ ನೇರವಾಗಿ ಹೋಗಬಹುದು. ಮಧ್ಯ ಯಾವ ಅಡೆತಡೆಗಳೇನೂ ಇಲ್ಲ, ಶ್ರೀ ಕೃಷ್ಣ ಹೇಳುತ್ತಾನೆ: ದುರ್ಮಾರ್ಗಿಯಾಗಿದ್ದ ದುಷ್ಟನು ಸಂಪೂರ್ಣ ಪ್ರೇಮದಿಂದ, ನಿಷ್ಠೆಯಿಂದ ನನ್ನನ್ನು ಭಜಿಸಿದ್ದೇ ಆದರೆ, ಸಮೀಪಿಸಿದ್ದೇ ಆದರೆ ಅವನನ್ನು ಸಾಧು ಪುರುಷ ಎಂದೇ ಮನ್ನಿಸಬೇಕು. ಅವನು ಶೀಘ್ರದಲ್ಲೇ ಧರ್ಮ ಮಾರ್ಗದಲ್ಲಿ ನಡೆದು ಶಾಶ್ವತ ಶಾಂತಿಯನ್ನು ಪಡೆಯುತ್ತಾನೆ (9/30). ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಸಂಪೂರ್ಣ ಆತ್ಮ ಸಮರ್ಪಣೆಯ ಸಂಕಲ್ಪವು ಪರಮ ಪುರುಷನ ಅಂತಃಪುರದ ಬಾಗಿಲನ್ನು ತಟ್ಟಿ ತೆರೆಯುತ್ತದೆ, ಪ್ರತಿಯಾಗಿ ಭಗವಂತನೇ ಸರ್ವತೋ ಭಾವೇನ ಕೆಳಗಿಳಿದು ಬಂದು ತನ್ನ ಭಕ್ತನಲ್ಲಿ ನೆಲೆ ನಿಲ್ಲುತ್ತಾನೆ. ಭಗವಂತನೇ ಭಕ್ತನಿಗೆ ಸಮರ್ಪಿಸಿಕೊಳ್ಳುತ್ತಾನೆ. ಮಾನವನಲ್ಲಿ ಆಗ ಸಮಗ್ರ ಪರಿವರ್ತನೆ ಸಾಧ್ಯವಾಗುತ್ತದೆ. ದೃಢವಾದ ಆರ್ತ ಸಮರ್ಪಣೆಯ ಭಾವವು ಭಗವಂತ ಮತ್ತು ಮಾನವನ (ಭಕ್ತನ) ಮಧ್ಯೆ ಇರುವ ಪರದೆಯನ್ನು ಹರಿದು ಹಾಕುತ್ತದೆ. ಅಲ್ಲಿಗೆ ಎಲ್ಲ ದೋಷಗಳೂ ಪರಿಹೃತವಾಗುವುವು, ಯಾವ ಅಡೆತಡೆಗಳೂ ಉಳಿಯದೇ ನಿವಾರಿತವಾಗುವುವು. ಯಾರು ತಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಜ್ಞಾನ ಮಾರ್ಗದಿಂದ ಸಾಗಿ ಬರುವುರೋ, ಯಾರು ಸದಾಚಾರ, ಪುಣ್ಯ ಕರ್ಮಗಳ ಮೂಲಕ ಅನುಸರಿಸುವುರೋ, ಆತ್ಮ ಸಂಯಮ, ಕಠಿಣ ಪರಿಶ್ರಮದಿಂದ ಅವನ ಬಳಿ ಸಾರುವುರೋ, ಅವರೆಲ್ಲರೂ ಅಲ್ಪ ಸ್ವಲ್ಪ ಕಠಿಣತೆಗಳನ್ನು ಎದುರಿಸಿಯಾದರೂ ಶಾಶ್ವತ ಪುರುಷನನ್ನು ಹೊಂದುವುದು ನಿಶ್ಚಿತ. ಆದರೆ ಯಾರು ತಮ್ಮ ಅಹಂಕಾರವನ್ನು ತ್ಯಜಿಸಿ, ತಮ್ಮೆಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸುವುರೋ, ಭಗವಂತನೇ ಅವರನ್ನು ಸಮೀಪಿಸುತ್ತಾನೆ, ಸಾಧನೆಯ ಭಾರವನ್ನು ತಾನೇ ಹೊರುತ್ತಾನೆ. ಅಜ್ಞನಾದವನಿಗೆ ದಿವ್ಯ ಜ್ಞಾನದ ಬೆಳಕು ಪ್ರಸಾದಿಸುತ್ತಾನೆ, ದುರ್ಬಲನಾದವನಿಗೆ ದಿವ್ಯ ಸಂಕಲ್ಪ ಶಕ್ತಿಯನ್ನು

ನೀಡುತ್ತಾನೆ. ಪಾಪ ಕರ್ಮದ ದುರಾಚಾರಿಯಾಗಿದ್ದವನಿಗೆ ದೈವೀ ಪರಿಶುದ್ಧತೆ ಕೊಡುತ್ತಾನೆ, ದುಃಖಿತನಿಗೆ ಆನಂದದ, ಸಂತೋಷದ, ಅನಂತ ಆಧ್ಯಾತ್ಮಕ ಸಂತಸದ ವರ ನೀಡುತ್ತಾನೆ. ಅವರ ದೌರ್ಬಲ್ಯ, ಅವರ ದೋಷಗಳು, ಎಡರುವಿಕೆ – ತೊಡರುವಿಕೆ ಇವಾವೂ ಅಲ್ಲಿ ಸಮಸ್ಯೆಗಳೇ ಅಲ್ಲ. "ಇದು ನನ್ನ ಅಭಿವಚನ" ಕೃಷ್ಣ ಹೇಳುತ್ತಾನೆ "ಯಾರು ನನ್ನನ್ನು ಸೇವಿಸುತ್ತಾರೋ ಅವರಿಗೆ ವಿನಾಶವೆಂಬುದಿಲ್ಲ" (9/31). ಪೂರ್ವ ಸಿದ್ಧತೆ, ಪರಿಶ್ರಮ ಬ್ರಾಹ್ಮಣನ ಪರಿಶುದ್ಧತೆ, ಪಾವಿತ್ರ್ಯ ಈ ಬ್ರಾಹ್ಮಣ್ಯದ ಗುಣಗಳು, ಆತ್ಮ ಜ್ಞಾನವರಿತು ಮಾಡುವ ರಾಜನ್ಯದ ಕರ್ಮಗಳು, ಜ್ಞಾನ ಇವೆಲ್ಲವುಗಳಿಗೂ ಅದರದೇ ಆದ ಬೆಲೆ ಇದೆ, ಮಹತ್ವ ಇದೆ. ಅವು ಅಪರಿಪೂರ್ಣ ಮಾನವ ಜೀವಿಯನ್ನು ಪವಿತ್ರಗೊಳಿಸುತ್ತವೆ, ಆತ್ಮ ಸಮರ್ಪಣೆಯ ಮಾರ್ಗದಲ್ಲಿ ಕರೆದೊಯ್ಯುತ್ತವೆ, ನಿಜ. ಆದರೆ ಇದಾವುದೂ ಇಲ್ಲದೆ, ಯಾವ ಸಿದ್ಧತೆಯೂ ಇಲ್ಲದೆ, ಸಂಪೂರ್ಣವಾದ ಪ್ರೇಮದಿಂದ ಯಾರು ಭಗವಂತನಿಗೆ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೋ ಅವರು, ಮೊದಲು ಕೇವಲ ಸಂಪತ್ತಿನ ಸಂಗ್ರಹದಲ್ಲಿ ತೊಡಗಿಕೊಂಡು ಎಲ್ಲ ಮರೆತವರಾಗಿದ್ದರೂ ಸರಿ, ಅನೇಕ ಕಠಿಣ ನಿಯಮಗಳಲ್ಲಿ ಬಂಧಿತರಾಗಿ ನಲುಗಿರುವ ಶೂದ್ರರಾದರೂ ಸರಿ, ಕಠಿಣ ನಿಯಮಗಳ ಮೂಲಕ ತನ್ನ ವೈಯಕ್ತಿಕ ಸಾಧನೆಗೆ ತೊಡಕಾಗಿ, ಆತ್ಮೋದ್ಧಾರ ಮಾಡಿಕೊಳ್ಳಲಾಗದ ಸ್ತ್ರೀಯಾದರೂ ಸರಿ, ಪಾಪ ಯೋನಿಗಳು ಅಂದರೆ ಪೂರ್ವಜನ್ಮ ಕೃತ ಕುಕರ್ಮಗಳ ಫಲವಾಗಿ ಕೀಳು ಜಾತಿಯಲ್ಲಿ, ಅಸ್ಪೃಶ್ಯರಾಗಿ ಪರಿಹರಾಗಿ, ಚಾಂಡಾಲರಾಗಿ ಹುಟ್ಟಿದವರಾದರೂ ಸರಿ ಎಲ್ಲರಿಗೂ ಭಗವಂತನ ಬಾಗಿಲು ತೆರೆದೇ ಇರುತ್ತದೆ. ಮಾನವನ ಬಾಹ್ಯ ಮನಸ್ಸನ್ನು ಅತಿಯಾಗಿ ಬಾಧಿಸುವ, ಬಂಧಿಸುವ ವರ್ಗ ಶ್ರೇಣಿಗಳು, ಭೇದಗಳು ಆಧ್ಯಾತ್ಮಿಕ ಜೀವನದ ದಿವ್ಯ ಜ್ಯೋತಿಯ ಸಮಭಾವದ ಎದುರಲ್ಲಿ ಕರಗಿ ಹೋಗುತ್ತವೆ. ದಿವ್ಯ ಶಕ್ತಿಯ ನಿಷ್ಪಕ್ಷಪಾತ ಸರ್ವ ಶಕ್ತಿಯ ಎದುರಲ್ಲಿ ಎಲ್ಲ ದೋಷ ಇಲ್ಲವಾಗುತ್ತವೆ (9/30–32).

ಈ ಪಾರ್ಥಿವ ಜಗತ್ತು ದ್ವಂದ್ವಗಳಲ್ಲಿ ಸಿಲುಕಿದೆ, ಹೀಗಾಗಿ ಮಾನವನು ತತ್ಕ್ಷಣದ ತಾತ್ಕಾಲಿಕ, ನಶ್ವರ ಸಂಬಂಧಗಳಿಂದ ಬಂಧಿತನಾಗಿದ್ದಾನೆ. ಮಾನವನು ಎಲ್ಲಿಯವರೆಗೆ ಈ ದ್ವಂದ್ವಗಳಲ್ಲಿ ಆಸಕ್ತನಾಗಿ ವ್ಯವಹಾರ ಮಾಡುತ್ತಾನೋ ಅಲ್ಲಿಯವರೆಗೆ ಸಾಪೇಕ್ಷ ಸಂಗತಿಗಳ ನಿಯಮಗಳನ್ನು ಪಾಲಿಸಬೇಕಾಗುತ್ತದೆ, ಅಂತೆಯೇ ಅಲ್ಲಿಯವರೆಗೆ ಸುಖ–ದುಃಖ, ಸಂಘರ್ಷ ಅನಿವಾರ್ಯವಾಗುತ್ತವೆ.

ಹಾಗಾದರೆ ಇವುಗಳ ಬಂಧನದಿಂದ ಪಾರಾಗುವ ದಾರಿಯನ್ನು ಹುಡುಕಲೇ ಬೇಕಾಗುತ್ತದೆ. ಅದಕ್ಕಾಗಿ ಅವನು ಬಹಿರ್ಮುಖ ಪ್ರವೃತ್ತಿಯನ್ನು ಬಿಟ್ಟು ಅಂತರ್ಮುಖಿಯಾಗಬೇಕು. ಪಾರ್ಥಿವ ಜೀವನದ ದ್ವಂದ್ವಗಳ ಸಂಘರ್ಷದ ಒತ್ತಡದಿಂದ ಮನಸ್ಸನ್ನು ವಿಮುಖಗೊಳಿಸಿ ಅಂತರಂಗದತ್ತ ಅದನ್ನು ಹರಿಸಬೇಕು. ಅಲ್ಲಿ ತನ್ನ ಉನ್ಮುಖಕ್ಕಾಗಿ, ಉತ್ಥಾನಕ್ಕಾಗಿ ಕಾಯುತ್ತಿರುವ, ಪ್ರಕಟಗೊಳ್ಳಲು ತಹತಹಿಸುತ್ತಿರುವ, ಆತ್ಮ–ಸ್ವಾತಂತ್ರ್ಯದಲ್ಲಿ ಅಭಿವ್ಯಕ್ತವಾಗಲು ತುಡಿಯುತ್ತಿರುವ 'ದಿವ್ಯ ಸತ್ಯದ' ಚಡಪಡಿಕೆ ವೇದ್ಯವಾಗುತ್ತದೆ. ವಿಶ್ವ ಪ್ರೇಮವು ಈಶ್ವರ ಪ್ರೇಮದಲ್ಲಿ ಅದು ಪುನಃ ದೈವೀ ಸತ್ಯದ ಪ್ರೇಮದಲ್ಲಿ ಪರ್ಯವಸಾನ ಹೊಂದುವುದು. ಅಂತರ್ಯಾಮಿಯಾಗಿರುವ ಪರಮ ಸತ್ಯ ಹಾಗೂ ಪ್ರೇಮ ಸ್ವರೂಪನಾದ ಭಗವಂತನ ದರ್ಶನದಿಂದ ಪ್ರಕೃತಿಯಲ್ಲಿಯೇ ಬದಲಾವಣೆ ಕಂಡು ಬರುವುದು. ಎಲ್ಲೆಲ್ಲೂ ಎಲ್ಲದರಲ್ಲೂ ಭಗವಂತನೇ ಕಾಣಲಾರಂಭಿಸುವುದು. ಅವನ ವಿಶ್ವ ವ್ಯಾಪಕತೆಯ ಅನುಭವವಾಗುವುದು. ಸಾಮಾನ್ಯ ಸುಖ ದುಃಖಗಳ ಬಾಧೆ ಮಾಯವಾಗುವುದು. ಪ್ರಮಾದ, ದೋಷಗಳು ಮಾಯವಾಗಿ ಸನಾತನ ಪುರುಷನ ಸರ್ವ ಸಮಾವೇಶಕ, ಸರ್ವ ಪರಿವರ್ತನಕಾರಕ ಸತ್ಯದ ಅನಾವರಣವಾಗುವುದು. ಮಾನವನ ಮನಸ್ಸು ದಿವ್ಯ ಚೈತನ್ಯದ ಜೊತೆ ಏಕೀಭವಿಸುವುದು. ಎಲ್ಲೆಡೆ ಈಶ್ವರೀ ಪ್ರೇಮದ ಅನುಭವವಾಗುವುವು. ನಮ್ಮ ಪೂಜೆ, ಆರಾಧನೆ ಭಜನೆಯಂಥ ಎಲ್ಲ ಕ್ರಿಯೆಗಳು ಯಜ್ಞರೂಪದಲ್ಲಿ ಭಗವಂತನಿಗೆ ಸಮರ್ಪಿತವಾಗುವುವು. ನಮ್ಮ ಆತ್ಮವು ಈಶ್ವರೋನ್ಮುಖವಾಗಿ ಪರಮಾತ್ಮನೊಡನೆ ಸಮ್ಮಿಲನ ಹೊಂದುವುದು. ಲೌಕಿಕ ಅಸ್ತಿತ್ವದಿಂದ ಬಿಡುಗಡೆ ಹೊಂದಿ ದೈವೀ ಅಸ್ತಿತ್ವಕ್ಕೆ ಏರುವ ದಾರಿ ಇದೊಂದೇ. ಇದು ಗೀತೆಯ ಬೋಧೆ, ಭಗವಂತನ ಪ್ರೇಮ, ಈಶ್ವರ ಪ್ರೇಮ, ಭಕ್ತಿಯ ಬೋಧೆ. ಜ್ಞಾನ, ಕರ್ಮ, ಹೃದಯದ ಹಂಬಲ ರೂಪದ ಭಕ್ತಿ ಎಲ್ಲವೂ ಸರ್ವ ಶ್ರೇಷ್ಠ ಏಕತೆಯಲ್ಲಿ ಒಂದಾಗಿ ಬಿಡುವುವು. ಯಾವ ಭೇದ, ವಿಭಜನೆ, ಭಿನ್ನತೆ ಇರುವುದಿಲ್ಲ, ಏಕತೆಯಲ್ಲಿ ಕರಗಿ ಹೋಗುವುವು (9/33–34).

– * –

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ


ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 16ನೇ ಮೇ 2026 ಶನಿವಾರ ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ನಂತರ ಬೆಳಿಗ್ಗೆ 10.30 ರಿಂದ 12.00 ಗಂಟೆಯವರಗೆ "The Psychic Being" ಎಂಬ ವಿಷಯವಾಗಿ ಶ್ರೀ ರಮೇಶ್ ಸರಗೂರ್, ಶ್ರೀ ರಾಮಕೃಷ್ಣ ವಿದ್ಯಾಶಾಲ, ಮೈಸೂರು ಇವರು ಕನ್ನಡದಲ್ಲಿ ಉಪನ್ಯಾಸ ನೀಡಿದರು.

ದಿನಾಂಕ 11ನೇ ಜೂನ್ 2026 ಗುರುವಾರ ಶ್ರೀ ಅರವಿಂದರ ಪುಣ್ಯಾವಶೇಷದ ದಿನವನ್ನು ಭಕ್ತಿ ಮತ್ತು ಶ್ರದ್ಧೆಗಳಿಂದ ಆಚರಿಸಲಾಯಿತು. ಇದರ ಪ್ರಯುಕ್ತವಾಗಿ, ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ತತ್ಸಬಂಧ ಸಂಜೆ 5.15 ರಿಂದ 6.15 ಗಂಟೆಯವರಗೆ "Symbolism in Veda -beauty, bridge and a barrier" ಎಂಬ ವಿಷಯವಾಗಿ ಡಾ॥ ನಾಗೇಂದ್ರ (ಸಾಕ್ಷಿ) ಇವರು ಉಪನ್ಯಾಸ ನೀಡಿದರು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

"Sri Krishna" ವಿಷಯ ಕುರಿತು ದಿನಾಂಕ 10ನೇ ಜೂನ್ 2026 ರಿಂದ 11ನೇ ಆಗಸ್ಟ್ 2026 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.



ಫೋಟೋ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **56 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.